ಅಖಿಲ ಭಾರತ ಪತ್ರಿಕೆ – ಏಪ್ರಿಲ್ 2024



# ಶ್ರೀಮಾತೆಯ ಪ್ರತಿಮೆ

ಬೆಲೆ : 15/-




ಕೇಂದ್ರ ಭಾಗದಲ್ಲಿರುವ ವೃತ್ತವು "ಲೋಕಮಾತೆ"ಯನ್ನು ಅಭಿವ್ಯಕ್ತಿಸುತ್ತದೆ. ಅವಳೇ 'ಮಹಾಶಕ್ತಿ'ಯಾಗಿದ್ದಾಳೆ. ನಾಲ್ಕು ದಳಗಳು ಶ್ರೀಮಾತೆಯ ನಾಲ್ಕು ವಿಭಾಗಗಳಾಗಿವೆ. ಮತ್ತು ಅವಳ ಹನ್ನೆರಡು ದಳಗಳು ಅವಳ ಗುಣಧರ್ಮಗಳಾಗಿವೆ.

– **ಪುಟ್ಟು ಕುಲಕರ್ಣಿ**

**ಅಖಿಲ ಭಾರತ ಪತ್ರಿಕೆ**
**ಏಪ್ರಿಲ್ 2024**

ಸಂಪುಟ: 34 ಸಂಚಿಕೆ: 04

**ಪರಿವಿಡಿ**

**ಸಂಪಾದಕರು:**
ಶ್ರೀ ಪುಟ್ಟು ಕುಲಕರ್ಣಿ
ರಾಘವೇಂದ್ರ ಮಠದ ಹಿಂಭಾಗ,
ಗಿಬ್ ಸರ್ಕಲ್, ಹೆರವಟ್ಟ ರಸ್ತೆ,
ಕುಮಟಾ – 581 332.
ಫೋನ್: 9448774920
mayureshwarkp@gmail.com

**ಪರಿಶೀಲನಾ ಸಮಿತಿ:**
ಡಾ॥ ಆರ್.ಕೆ. ಕುಲಕರ್ಣಿ

**ಪ್ರಕಾಶಕರು:**
ಡಾ॥ ಅಜಿತ್ ಸಬ್ನೀಸ್
ಅಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ ಕರ್ನಾಟಕ,
ಶ್ರೀ ಅರವಿಂದ ಮಾರ್ಗ,
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು:**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.
ಫೋನ್: 080 – 2244 9882
https://www.sriaurobindo complex.org/archive.php
http://abp.sirinudi.org

**ಡಿ.ಟಿ.ಪಿ.:**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ:**
ಶೇಷಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

# ಶ್ರೀಮಾತೆಯ ಪ್ರತಿಮೆ

ಜಡತ್ವದಲ್ಲಿ ದೈವತ್ವದ ಆವಿಷ್ಕಾರ. – ಶ್ರೀ ಅರವಿಂದರು

**ಶ್ರೀ ಅರವಿಂದರ ಪ್ರತಿಮೆ** 6
**ಶ್ರೀಮಾತೆಯ ಪ್ರತಿಮಾ ತತ್ತ್ವ** 7
**ಶ್ರೀಮಾತೆ ಪರಾಶಕ್ತಿ – ಮಹಾಶಕ್ತಿ** 9
**ಶ್ರೀಮಾತೆಯ ನಾಲ್ಕು ಮಹತ್ತರ ಸ್ವರೂಪಗಳು** 16
ಅನು: ಪುಟ್ಟು ಕುಲಕರ್ಣಿ

**ಹನ್ನೆರಡು ಗುಣಲಕ್ಷಣಗಳು** 31
ಅನು: ಡಾ॥ ಬಿ.ಆರ್. ಭೀಡ್

**ಶ್ರೀ ಅರವಿಂದರ 'ಗೀತಾ ಪ್ರಬಂಧಗಳು'** 46
ಅನು: ಜಾನ್ವಿ

**ಶ್ರೀ ಅರವಿಂದರ 'ಪ್ರೇಮ ಮತ್ತು ಮೃತ್ಯು'** 53
ಅನು: ಸಮಷ್ಟಿ

**ವಾರ್ತಾಪತ್ರ** 61

# ಸಂಪಾದಕರ ಟಿಪ್ಪಣಿ

2020 ಇದೊಂದು ವಿಶೇಷ ಘಟನೆಗೆ ಕಾರಣವಾಗಿದೆ. ಶ್ರೀಮಾತೆಯ ಪಾಂಡಿಚೇರಿ ಆಶ್ರಮಕ್ಕೆ ಆಗಮಿಸಿ, ಅಂತಿಮವಾಗಿ ಅಲ್ಲಿಯೇ ನೆಲೆಸಿ, ಸರಿಯಾಗಿ ಒಂದು ನೂರು ವರ್ಷವಾಯಿತು. ಅದನ್ನು ಶ್ರೀ ಅರವಿಂದರ ಹಾಗೂ ಶ್ರೀಮಾತೆಯವರ ಅಭಿವ್ಯಕ್ತಿಗಳಿಂದ ಆಯ್ದುಕೊಳ್ಳಲಾಗಿರುವ ನುಡಿಮುತ್ತುಗಳ ಮೂಲಕವೇ ಸ್ವಾಗತಿಸುತ್ತ ಅಭಿನಂದನೆ ಸಲ್ಲಿಸಲು ಇಚ್ಛಿಸುತ್ತೇವೆ. ಇಲ್ಲಿ ಶ್ರೀ ಅರವಿಂದರ ಬರಹಗಳ ಮತ್ತು ಶ್ರೀಮಾತೆಯ ಪ್ರತಿಮಾ–ತತ್ತ್ವದ ವಿವರಗಳು ಇವೆ.

ಪ್ರತಿಮಾ ಎನ್ನುವದು ಋತದ ಆಂತರ್ಯದ ಪ್ರತಿನಿಧಿ. ಒಂದು ಆಕೃತಿಯು, ಅಂದರೆ ಯಾವುದನ್ನು ತಂತ್ರದಲ್ಲಿ ಯಂತ್ರವೆಂದು ಕರೆಯಲಾಗಿದೆಯೋ, ಅದು ಕೇವಲ ಆ ಪರಮ ಸತ್ಯದ ಸಾಕಾರ ರೂಪಿತ್ವವನ್ನು ಪ್ರಕಟಪಡಿಸಲು ಅಭಿವ್ಯಕ್ತ–ಗೊಂಡಿದ್ದಾಗಿದೆಯೇ ವಿನಾ ಅದೇ ಸಂಕೇತವೆಂದು ಅಲ್ಲ. ಜೊತೆಜೊತೆಗೆ ಅದು ಅಭಿವ್ಯಕ್ತಗೊಳಿಸುತ್ತಿರುವ ಆ ಶಕ್ತಿಗಳನ್ನೂ ಪಡೆದುಕೊಳ್ಳಲು ಮತ್ತು ಆಕರ್ಷಿಸಲು ಇರುವ ಸಾಕಾರವಾಗಿರುತ್ತದೆ. ಶ್ರೀಮಾತೆಯ ಈ ಸಂಕೇತವು ಅಭಿವ್ಯಕ್ತಗೊಳಿಸುತ್ತಿರುವ, ರೂಪಿಸುತ್ತಿರುವ ಮತ್ತು ಅನುಷ್ಠಾನಿಸುತ್ತಿರುವ ಸತ್ಯಗಳ ಕುರಿತೇ ಧ್ಯಾನಿಸುತ್ತಾ ಮತ್ತೂ ಮತ್ತೂ ಪ್ರತಿಬಿಂಬಗೊಳ್ಳುವದು ಒಂದು ಆಶ್ಚರ್ಯದ ಸಂಗತಿಯೇ ಆಗಿದೆ. ಆದಾಗ್ಯೂ, ಒಂದು ವೇಳೆ ನಾವು ಆ ಗೂಢ ಸತ್ಯಗಳನ್ನು ಅದೂ ಎಲ್ಲವೂ ನಮ್ಮಲ್ಲಿಯೇ ಅಂತರ್ಗತವಾಗಿರುವದನ್ನು ಅರಿತುಕೊಂಡು ಪುನರ್–ಉತ್ಪಾದಿಸಲು ಸಮರ್ಥರಾದಲ್ಲಿ ಅದು ತುಂಬ ಸಹಾಯಕಾರಿ ಅಂಶವಾಗಿರುತ್ತದೆ. ಶ್ರೀಮಾತೆಯ ಆ ಪ್ರತಿಮೆಯೊಂದಿಗೆ ಒಂದಾಗಲು ಹಾಗೂ ಜೀವನವನ್ನು ಸಮಗ್ರಗೊಳಿಸಿಕೊಂಡು ಅದರೊಳಗೇ ಒಂದಾಗಲು ನಮ್ಮ ಪ್ರಯತ್ನವಿರಬೇಕು. ಇದು ಯೋಗ. ಇದು ಪರಿಪೂರ್ಣತೆ–ಸಮಗ್ರತೆಯನ್ನು ಒಳಗೊಂಡಿದೆ.

ಈ ಪಥವು ನಾವು ಕಡ್ಡಾಯವಾಗಿ ಅನುಸರಿಸಲೆಂದೇ ರೂಪಿತಗೊಂಡಿದೆ. ನಮ್ಮನ್ನು ನಾವು ಆ ಬಲದೊಂದಿಗೆ ಸಂಲಗ್ನಗೊಳಿಸಿಕೊಳ್ಳಬೇಕಾಗಿದೆ. ಅಲ್ಲಿರುವ ಗುಣಧರ್ಮಗಳ ಮೂಲಕವೇ ನಾವು ನಮ್ಮ ಜೀವನವನ್ನು ಪ್ರಗತಿಗೊಳಿಸಿಕೊಳ್ಳ–ಬೇಕಾಗಿದೆ. ನಮ್ಮ ಜೀವನವನ್ನೇ 'ಅವಳಿಗೆ' ಸಮರ್ಪಣೆಗೊಳಿಸಲು ಇರುವ 'ಪ್ರತಿಮೆ'ಯಾಗಿಸಿಕೊಳ್ಳಬೇಕಾಗಿದೆ. ಅದಕ್ಕಾಗಿ, ನಮ್ಮಲ್ಲಿರುವ ಅಹಂಕಾರವನ್ನು ನಿರ್ನಾಮ ಮಾಡಿಕೊಂಡು, ಅವಳ ಅನಂತಾನಂತ ವ್ಯಾಪ್ತ ಋತವನ್ನು ನಮ್ಮ ಆತ್ಮದ ಆಂತರ್ಯದಲ್ಲಿ ಹಾಗೂ ಆತ್ಮದ ಆವರಣದಲ್ಲಿ ಸ್ಥಾಪಿಸಿಕೊಳ್ಳಬೇಕಾಗಿದೆ. (ಎಐಎಮ್)

# ಸಂಪಾದಕೀಯ

## ಪ್ರತಿಮಾ–ಪುಷ್ಪ

ಪ್ರಕೃತಿ ತನ್ನನ್ನು ತಾನೇ ಮಾರ್ದವಗೊಳಿಸಿಕೊಂಡು, ಅಭಿವ್ಯಕ್ತಗೊಂಡು ಮಿಡಿದ ಆತ್ಮದ ಸ್ಪಂದನದ ಅಲೆಗಳೇ ಈ ಪುಷ್ಪಗಳು. 'ಯಾವುದು ನೈಸರ್ಗಿಕವಾಗಿ ಶಾಶ್ವತವಾಗಿರುತ್ತದೆಯೋ ಅದು ಯಾವಾಗಲೂ ಮಾರ್ದವವಾಗಿಯೇ ಇರುತ್ತದೆ. ಅದೇ ತೆರನಾಗಿ ತಮ್ಮ ಅಭಿವ್ಯಕ್ತಿಗಳನ್ನೂ ಪ್ರಕಟಪಡಿಸುತ್ತವೆ' ಎಂದು ಶ್ರೀ ಅರವಿಂದರು ಈ ಪುಷ್ಪಗಳ ಕುರಿತು ಹೇಳಿದ್ದಾರೆ.

ಪ್ರಾಣಿ ಬಲಿಯ ಪರಂಪರೆಯಿಂದ, ನರ ಬಲಿಯ ಬರ್ಬರತೆಯಿಂದ ಹೊರಬಂದ ಚಿಂತನಗಳು 'ಪತ್ರಂ ಪುಷ್ಪಂ ಫಲಂ ತೋಯಂ' ಎಂದು ಅಭಿವ್ಯಕ್ತ–ಗೊಂಡಿದ್ದು ಇದನ್ನು ಸಂಕೇತಿಸುತ್ತಿದೆ. ಮಾನವನು ತನ್ನ 'ಆಹಾರಾನ್ವೇಷಣೆಗೆ' ಸತತ ಸಂಚಾರದಲ್ಲಿದ್ದ ಹಂತವನ್ನು ಬಿಟ್ಟು, ಒಂದೆಡೆಗೆ ನೆಲೆಸಿ, ಬದುಕನ್ನು ಕಟ್ಟಿಕೊಳ್ಳುತ್ತಿದ್ದಾಗ, ಕಂಡುಕೊಂಡ ಅನುಭವವೆಂದರೆ ಪ್ರಕೃತಿಯ ಈ ವರ್ಣಮಯ ವೈಭವದ ಅನುಭಾವ. ಅದೂ ಪುಷ್ಪಗಳ ಮುಖಾಂತರ ಪ್ರಕೃತಿ ಪಡೆದುಕೊಳ್ಳುತ್ತಿರುವ ಆಕಾರ, ಸುಕೋಮಲತೆ, ಪರಿಮಳ ಹಾಗೂ ಮಾರ್ದವತೆಗಳು ಮನಸ್ಸನ್ನು ಪ್ರಫುಲ್ಲಗೊಳಿಸುತ್ತಿರುವದನ್ನು ಆಸ್ವಾದಿಸಿದ ಮಾನವನು, ಆ ಪುಷ್ಪಗಳ ಸೃಷ್ಟಿಯ ಹಿಂದಡಗಿರುವ ರಹಸ್ಯದ ಕುರಿತೂ ಧ್ಯಾನಿಸತೊಡಗಿದ. ಹೀಗಾಗಿ 'ಅವುಗಳನ್ನೇ' ಆ 'ಪರಮ ದಿವ್ಯ'ಕ್ಕೆ ಸಮರ್ಪಿಸಿ, ಬದುಕಿನಲ್ಲಿ, ಜೀವನದಲ್ಲಿ 'ಸಂತೃಪ್ತಿ' ಕಾಣತೊಡಗಿದ.

ಇದನ್ನೇ ಪದ್ಮ ಪುರಾಣವೂ ಅತ್ಯಂತ ನಿಖರವಾಗಿ,

**ಅಹಿಂಸಾ ಪ್ರಥಮಮ್ ಪುಷ್ಪಮ್ ಪುಷ್ಪಮ್ ಇಂದ್ರಿಯ ನಿಗ್ರಹಃ**
**ಸರ್ವಭೂತ ದಯಾಪುಷ್ಪಮ್ ಕ್ಷಮಾಪುಷ್ಪಮ್ ವಿಶೇಷತಃ ।**
**ಶಾಂತಿ ಪುಷ್ಪಮ್ ತಪಃ ಪುಷ್ಪಮ್ ಧಿಯಾರ್ಪುಷ್ಪಮ್**
**ಸತ್ಯಮ್ ಅಷ್ಟವಿಧಮ್ ಪುಷ್ಪಮ್ ವಿಷ್ಣೋ ಪ್ರೀತಿಕರಮ್ ಭವೇತ್ ॥**

ಎಂದು ಹೇಳಿದೆ.

ಹರಿಹರನೂ ಸಹಿತ ಹನ್ನೆರಡನೇ ಶತಮಾನದಲ್ಲಿಯೇ ಈ 'ಪುಷ್ಪಗಳ ದೈವೀ ಸ್ವರೂಪವನ್ನು' ತನ್ನ ಅಪೂರ್ವವಾದ 'ಪುಷ್ಪ ರಗಳೆ'ಯಲ್ಲಿ ತಿಳಿಸಿದ್ದಾನೆ. 'ಸುರತರು ಸುಗಂಧಂ ತವರ್ಮನೆಯೆಂದೆನಿಪ ಪೂದೋಟಮಂ ದೂರದಿಂ ಕಂಡು, ಬಿಲ್ವ,

ಉತ್ತರಣಿ, ಉನ್ನತ್ತ ಹೂವು, ಕಕ್ಕೆ, ಬಿಳಿಮಕ್ಕೆ, ರುದ್ರಜಟಿ, ತುಂಬೆ, ಕಂಚಿವಾಳ, ಭದ್ರಮುಖಿ' ಮುಂತಾದ ಪುಷ್ಪಗಳ ಬಗೆಗೆ ವಿವರಗಳನ್ನು ಕೊಟ್ಟಿದ್ದಾನೆ. ಅದರಲ್ಲೂ ರವಿ ಕರವು ತಾಗದ ಮುನ್ನ, ದುಂಬಿ ಸೋಂಕದ ಮುನ್ನ ನಳನಳಿಸುವ ಮಗಮಗಿಸುವ ಇರುವಂತಿಗೆ, ನನೆಮುಗುಳ ಬಿರಿಮುಗುಳಗಳನ್ನು, ಅವುಗಳ ಒಪ್ಪಿಗೆ ಪಡೆದು ಆಯ್ದುಕೊಳ್ಳುತ್ತಾನೆ. 'ಸಂಪಿಗೆ ಶಿವನ ಸಿರಿಮುಡಿಗೆ, ಸೇವಂತಿಗೆ ಶಿವನ ಜಡೆಗೆ, ಕೇತಕಿಯು ಪರಿಮಳಕೆ, ಸೇವಂತಿಗೆಯ ಪನ್ನೀರು, ಇರುವಂತಿಗೆಯ ಸಿರಿಮುಡಿ, ಮೊಲ್ಲೆಯ ಮುಗುಳುಗಳ ನಾಗಕುಂಡಲಿ, ಇರುವಂತಿಗೆಯ ಕಂಠಮಾಲೆ, ದುಂಡು ಮಲ್ಲಿಗೆಯ ಪದಕ, ಮದಗದಿಂದ ಚರ್ಮಾಂಬರ, ಸುರಹೊನ್ನೆಯ ಉರಗ ಕಂಕಣ, ಚರಣದಲಿ ಕಮಲಕರ್ಣಿಕೆ ದವನದ ಚಾಮರ....' ಹೀಗೆ ಪುಷ್ಪಗಳ ಹಿನ್ನೆಲೆಯಲ್ಲಿ ಅವುಗಳಿಗಿರುವ ಆಧ್ಯಾತ್ಮಿಕ, ಅಲೌಕಿಕ ಗುಣಗಳನ್ನು ಚಿತ್ರಿಸಿದ್ದಾನೆ.


'ಪುಷ್ಪಗಳೆಂದರೆ ಪರಿಮಳಭರಿತವಾಗಿರುವ ಭಾಷೆಯ ಸೂಕ್ಷ್ಮಾತಿಸೂಕ್ಷ್ಮ ಅಣುಗಳು; ಜೀವಕಣಗಳು' ಎಂದು ಹೇಳಿದ್ದಾರೆ. ಪುಷ್ಪಗಳು ಮುಗ್ಧ ಶಿಶುವಿದ್ದಂತೆ. ಅದೊಂದು ಸದಾ ಚಲನಶೀಲವಾಗಿದ್ದು, ಒಂದು ವಿಶಿಷ್ಟ ರೀತಿಯ ಸ್ಪಂದನವನ್ನೂ ಹೊಂದಿರುತ್ತವೆ. ಆ ಸ್ಪಂದನವೇ ನಮ್ಮನ್ನು ದೈವತ್ವದ ನೆಲೆಗೆ ಕರೆದೊಯ್ಯುವ ಪಥವೂ ಆಗಿರುತ್ತದೆ ಎಂದು ಶ್ರೀಮಾತೆಯವರು ಪುಷ್ಪದ ಬಗೆಗೆ ನಿಖರವಾದ ಅಭಿಪ್ರಾಯವನ್ನು  ನೀಡಿದ್ದಾರೆ. ಶ್ರೀಮಾತೆಯವರು ಈ ನೀಡಿರುವ ಕೆಲವು ಪುಷ್ಪಗಳ ಗುಣ ವಿಶೇಷಗಳು ಈ ರೀತಿ ಇವೆ; ಬೋಗನ್ ವಿಲ್ಲಾ – ಸಂರಕ್ಷಣೆ, ಗ್ಲಾಡಿಯೋಲಸ್ (ಕೃಪಾಣಪರ್ಣ ಪುಷ್ಪಪ್ರಜಾತಿ) – ಧಾರಣ ಕ್ಷಮತೆ, ಹೈಬಿಸ್‌ಕಸ್ (ದಾಸವಾಳ) – ಶಕ್ತಿ, ಐರಿಸ್ ಪುಷ್ಪ – ಅಭಿಜಾತ ಸೌಂದರ್ಯ, ಐವೀ (ಜೆರೇನಿಯಮ್ ವರ್ಗ) – ನಿರಂತರವಾದ ಆಸಕ್ತಿ, ಮಲ್ಲಿಗೆ –  ಪವಿತ್ರತೆ, ಆರ್ಕಿಡ್ (ಸೀತಾ ದಂಡೆ) – ದೈವತ್ವದೊಡನೆ ಸಂಪರ್ಕ, ಪೆಟೂನಿಯಾ (ಮೇಘನೀಲ ಪುಷ್ಪ) – ಉತ್ಸಾಹ, ಗುಲಾಬಿ – ದೈವತ್ವದೊಡನೆ ಪ್ರೇಮ, ವಾಟರ್ ಲಿಲ್ಲಿ (ಕುಮುದ) – ಸಂಪತ್ತು, ಝಿನಿಯಾ (ಸೇವಂತಿಗೆ ಮಾದರಿಯ ಪುಷ್ಪ) – ಸಹನಶೀಲತಾ...

ಪುಷ್ಪಗಳ ದಳಗಳ ಹಾಗೆಯೇ ಶ್ರೀಮಾತೆಯ ಪ್ರತಿಮಾ ತತ್ತ್ವವನ್ನೂ ಸಹಿತ ಚತುರ್ದಳ ಹಾಗೂ ದ್ವಾದಶ ದಳಗಳ ಸ್ವರೂಪದಲ್ಲಿಯೇ ನಿರೂಪಿತವಾಗಿದೆ.

ಮೊದಲ ನಾಲ್ಕು ದಳಗಳು – ಮಾಹೇಶ್ವರೀ, ಮಹಾಕಾಳೀ ಮತ್ತು ಮಹಾಲಕ್ಷ್ಮೀ, ಮಹಾಸರಸ್ವತಿ – ಇದ್ದರೆ, ಹೊರಾವರಣದಲ್ಲಿನ ಹನ್ನೆರಡೂ ದಳಗಳ ಬಗೆಗೆ ವಿವರಗಳು ಇಲ್ಲಿವೆ. ಪರಮ ಪರಿಶುದ್ಧವಾಗಿರುವ, ಮಾರ್ದವತೆಯಲ್ಲಿ ಅಪ್ರತಿಮವಾಗಿರುವ ಹಾಗೂ ವಿಶ್ವ ರಹಸ್ಯಗಳನ್ನೆಲ್ಲವನ್ನೂ ಒಳಗೊಂಡ ಈ ಕುಸುಮ–ಕೋಮಲ ಸ್ವರೂಪದಲ್ಲಿಯೇ ಚೈತನ್ಯವೂ ಪ್ರತಿನಿಧಿತಗೊಳ್ಳುತ್ತದೆ. ಇವುಗಳ ಮುಗ್ಧತೆಯಲ್ಲಿಯೇ ಸರ್ವಜ್ಞತ್ವವೂ ಅಡಗಿದೆ; ಅವುಗಳ ವರ್ಣ–ವಿನ್ಯಾಸದಲ್ಲಿಯೇ ಪ್ರಕೃತಿಯಲ್ಲಿನ ವಿಕಾಸದ ಆಯಾಮಗಳಲ್ಲಿ ಪ್ರಕಾಶದ ಮಹತ್ವ ಹಾಗೂ ಅದರ ಸಂಚಲನ–ವಿಚಲನಗಳು ನಿರ್ಮಾಣಗೊಳ್ಳುತ್ತಿರುವ, ವಿಕಾಸಗೊಳ್ಳುತ್ತಿರುವ ಈ ಸೃಷ್ಟಿ ಹಾಗೂ ಅದರ ಪರಮ ರಹಸ್ಯದ ಸೂತ್ರಗಳಂತೆ ಇವೆ. ಹೀಗಾಗಿ ಈ ಹೂವುಗಳನ್ನು ಆ ಪರಮಾತ್ಮನಿಗೆ ಅರ್ಪಿಸುವ ಮೂಲಕವೇ ನಾವು ಆ ರಹಸ್ಯವನ್ನು ತಿಳಿದುಕೊಳ್ಳಬೇಕಾಗಿದೆ. 'ಈ ಪುಷ್ಪ ಭಾಷೆಯ ಸಂಕೇತದ ಮೂಲಕ' ಆತ್ಮದ ವಿಕಸನವನ್ನು ಹಾಗೂ ಚೈತನ್ಯದೊಂದಿಗೆ ಸಂವಹನ ಸಾಧಿಸುವದರ ಕುರಿತು ಅವುಗಳನ್ನು ಪ್ರತಿಮಾತ್ಮಕವಾಗಿ ರೂಪಿಸಿದ ಶ್ರೀಮಾತೆಯವರು 'ಪುಷ್ಪಗಳ' ಕುರಿತೆ ಒಂದು ಉದ್ಗ್ರಂಥವನ್ನೂ ನೀಡಿದ್ದಾರೆ. ಅದರಲ್ಲಿ ಏಳು ನೂರಕ್ಕೂ ಅಧಿಕ ಪುಷ್ಪಗಳ ಮಹತ್ವ ಹಾಗೂ ಅವುಗಳ ಹಿನ್ನೆಲೆಯಲ್ಲಿ ಇರುವ ಆಧ್ಯಾತ್ಮಿಕ ಸಂವಹನವನ್ನೂ ತಿಳಿಸಿದ್ದಾರೆ. (ಪಿಪಿಕೆ)

# ಶ್ರೀ ಅರವಿಂದರ ಪ್ರತಿಮೆ

**– ಅನು: ಪುಟ್ಟು ಕುಲಕರ್ಣಿ**



ಈ ಸಂಕೇತವನ್ನು ಶ್ರೀಮಾತೆಯವರು ಸೊಸೈಟಿಯ ಸಲುವಾಗಿ ರೂಪಿಸಿದ್ದಾರೆ. ಇದು ಪ್ರಗಾಢವಾದ ಅಭೀಪ್ಸೆಯನ್ನು ಸಂಕೇತಿಸುತ್ತದೆ. ಇಲ್ಲಿ ಪರಸ್ಪರ ಛೇದಿಸುತ್ತಿರುವ ಎರಡು ತ್ರಿಕೋನಗಳು ಜೊತೆಗೆ ಒಂದು ವಜ್ರಾಕೃತಿ ಇದೆ, ಇದು ಶ್ರೀ ಅರವಿಂದರ ಸಂಕೇತವಾಗಿದೆ. ಇಲ್ಲಿ ಅವರೋಹಣ ಸ್ವರೂಪದಲ್ಲಿರುವದು ಸತ್–ಚಿತ್–ಆನಂದವನ್ನು ಪ್ರತಿನಿಧಿಸುತ್ತಿದೆ.

ಇನ್ನು ಊರ್ಧ್ವಮುಖಿಯಾಗಿರುವ ತ್ರಿಕೋನವು ಜೀವ, ಬೆಳಕು ಮತ್ತು ಪ್ರೇಮದಿಂದ ರೂಹು ಪಡೆದಿರುವ ಜಡಕ್ಕೆ ಅಭೀಪ್ಸಾ ಸ್ವರೂಪದ ಉತ್ತರವನ್ನು ಪ್ರತಿನಿಧಿಸುತ್ತಿದೆ.

ಇವೆರಡರ ಸಂಗಮವು – ಅಂದರೆ ಮಧ್ಯ ಭಾಗದಲ್ಲಿರುವ ಚೌಕವು – ಆ ಪರಮನ ಪರಿಪೂರ್ಣವಾದ ಅವತಾರದ ರೂಪಾಂತರಣವಾಗಿದ್ದು – ಕಮಲದ ಸ್ವರೂಪದಲ್ಲಿದೆ. ಇದರಲ್ಲಿ – ಚೌಕದ ಒಳಗೆ – ಇರುವ ಜಲವು ಆಯಾಮಗಳನ್ನು ಮತ್ತು ಸೃಷ್ಟಿಯನ್ನು ಪ್ರತಿನಿಧಿಸುತ್ತಿದೆ.

ತದನಂತರದ ಅವಧಿಯಲ್ಲಿ, ಶ್ರೀ ಅರವಿಂದರ ಪ್ರಮುಖ ಶಿಷ್ಯರಾಗಿದ್ದ ನಳಿನಿ ದಾ ಈ 'ವಜ್ರಾಕೃತಿಯ' ಕುರಿತು ಶ್ರೀ ಅರವಿಂದರ ಅಭಿಪ್ರಾಯವನ್ನು ತಿಳಿಸುತ್ತಾ, ಈ ವಜ್ರಾಕೃತಿಯ ಮಹತ್ವವನ್ನು ತಿಳಿಸಿದ್ದರು. ಶ್ರೀ ಅರವಿಂದರೇ ಹೇಳಿರುವಂತೆ, ಇದು ಶ್ರೀಮಾತೆಯ ಪ್ರಕಾಶದ ಸಾಂದ್ರತೆಯಾಗಿದೆ. ಹೀಗಾಗಿ ಈ ಸೊಸೈಟಿಯ ಸಂಕೇತವು ಇಲ್ಲಿ ಪ್ರತಿನಿಧಿ–ಸುತ್ತಿರುವದೇನೆಂದರೆ, ಶ್ರೀ ಅರವಿಂದರ ಮತ್ತು ಶ್ರೀಮಾತೆಯವರ ಪ್ರಕಾಶದ ಶಕ್ತಿಯಾಗಿದ್ದು, ಇದು ಮಾನವೀಯತೆಯು ಪೂರ್ಣತ್ವದೊಳಗೆ ರೂಪಾಂತರಗೊಳ್ಳುವದಾಗಿದೆ.

(ಈ ಸಂಚಿಕೆಯಲ್ಲಿ ಪ್ರಕಾಶನಗೊಂಡಿರುವ ವಿಷಯಗಳಿಗೆ ಮತ್ತೂ ಹೆಚ್ಚಿನ ವಿವರಗಳನ್ನು ಜನವರಿ 2020 ರ ಸಂಚಿಕೆಯಲ್ಲಿ ಗಮನಿಸಬಹುದು. – ಸಂ)

# ಶ್ರೀಮಾತೆಯ ಪ್ರತಿಮಾ ತತ್ತ್ವ

ಇಲ್ಲಿ ಮುದ್ರಿಸಲ್ಪಟ್ಟಿರುವ ಚಕ್ರದಲ್ಲಿ, ಅಲ್ಲಿ ಕೊಡಲಾಗಿರುವ ವರ್ಣಗಳು ಏನನ್ನು ಪ್ರತಿನಿಧಿಸುತ್ತಿವೆ? ಅದೂ ಅಲ್ಲದೇ ಕೇಂದ್ರ ಭಾಗದಲ್ಲಿ ಇರುವ ಬಿಂದುವಿಗೆ ಮತ್ತು ಅದರ ಸುತ್ತಲೂ ಇರುವ 'ನಾಲ್ಕು ಶಕ್ತಿಗಳಿಗೆ' ಹೇಗೆ ಇವು ಸೂಕ್ತವಾಗಿವೆ? ಪರಿಧಿಯ ಹಂತದಲ್ಲಿ ಕೊಂಚ ಹೆಚ್ಚುವರಿಯಾಗಿ ಹುಡಿ–ಹುಡಿಯ ವಿನ್ಯಾಸದಲ್ಲಿ ರೂಪಿಸಬೇಕೆಂದು ನಾನು ಯೋಚಿಸುತ್ತಿದ್ದೇನೆ.

**ಮಧ್ಯದಲ್ಲಿರುವ ನಾಲ್ಕು ಶಕ್ತಿಗಳು ಶ್ವೇತವರ್ಣದಲ್ಲಿದ್ದು, ಮತ್ತೆ ಉಳಿದ ಹನ್ನೆರಡೂ ದಳಗಳು ಮೂರು ವರ್ಗಗಳಲ್ಲಿ – ಬೇರೆ ಬೇರೆ 'ವರ್ಣದ' ಗುಂಪಿನಲ್ಲಿ ಇವೆ.**

1) **ಪೂರ್ತಿ ಮೇಲಿನ ಭಾಗದಲ್ಲಿ ಕೆಂಪು ವರ್ಣವು ಇದ್ದು ಅದು ಕ್ರಮೇಣ ಕಿತ್ತಳೆ ವರ್ಣದ ಮೂಲಕ ಹಳದಿ ವರ್ಣದತ್ತ ಇರುತ್ತದೆ.**
2) **ಮುಂದಿನ ಭಾಗದಲ್ಲಿ ಹಳದಿ ವರ್ಣವು ಪ್ರಧಾನವಾಗಿದ್ದು ಅದು ಕ್ರಮೇಣ ಹಸಿರು ಹಾಗೂ ನೀಲ ವರ್ಣದ ಮೂಲಕ ಸಾಗುತ್ತದೆ.**
3) **ಈ ಭಾಗದ ನೀಲವು ನೇರಳೇಯ ವರ್ಣದ ಮೂಲಕ ಕೆಂಪು ವರ್ಣಕ್ಕೆ ಚಲಿಸುತ್ತದೆ.**

**ಒಂದು ವೇಳೆ ಬಿಳಿ ಬಣ್ಣವೇ ಸೂಕ್ತವೆಂದಾದಲ್ಲಿ, ಕೇಂದ್ರ ಸ್ಥಾನದಲ್ಲಿ ಬಂಗಾರ ವರ್ಣದ ಹುಡಿ ಇರುತ್ತದೆ.**

* * *

ನಾನು ಆಗಾಗ್ಗೆ ಶ್ರೀಮಾತೆಯ ಈ ಪ್ರತಿಮಾ ತತ್ತ್ವ ಹಾಗೂ ಅದರ ಮಹತ್ವದ ಕುರಿತು ಚಿಂತನೆಯನ್ನು ಮಾಡುತ್ತಲೇ ಇದ್ದೇನೆ. ನಾನು ಅರಿತುಕೊಂಡಿರುವದೇನೆಂದರೆ; ಈ ಚಕ್ರದಲ್ಲಿರುವ ಕೇಂದ್ರ ವೃತ್ತವು 'ವಿಶ್ವೋತ್ತೀರ್ಣ ಶಕ್ತಿ'ಯಾಗಿದೆ.


ಮಧ್ಯದಲ್ಲಿರುವ ನಾಲ್ಕು ದಳಗಳು 'ಅತಿಮಾನಸದಿಂದ ಅಧಿಮಾನಸದ' ವರೆಗಿನ ಹಂತದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಶಕ್ತಿಗಳಾಗಿವೆ.

ಹನ್ನೆರಡು ದಳಗಳಲ್ಲಿ, ಈ ಮೇಲ್ಕಂಡ ನಾಲ್ಕು ದಳಗಳು ಮತ್ತೆ ಹನ್ನೆರಡು ಶಕ್ತಿಗಳಾಗಿ, ಅಧಿಮಾನಸದಿಂದ ಅಂತರ್ಬೋಧೆಯ ಮತ್ತು ಮನಸ್ಸಿನವರೆಗೆ ಸಂಕೇತಿಸುತ್ತವೆ.

ನನ್ನ ದೃಷ್ಟಿಕೋನವು ಒಟ್ಟಿನಲ್ಲಿ ಸಮರ್ಪಕವಾಗಿದೆ ಅಲ್ಲವೇ?

**ಸಾಮಾನ್ಯ ನಿಯಮದ ಪ್ರಕಾರ (ಅದರಲ್ಲೂ ಅವಶ್ಯಕವಾಗಿರುವಂತೆ) ಈ 12 ಶಕ್ತಿಗಳು, ಆವಿಷ್ಕಾರವು ಪರಿಪೂರ್ಣಗೊಳ್ಳಲು ಅವಶ್ಯವಿರುವ ಶಕ್ತಿಗಳೇ ಆಗಿವೆ. ಈ ಹನ್ನೆರಡೂ ಶಕ್ತಿಗಳು ಶ್ರೀಮಾತೆಯ ಶಿರದ ಮೇಲೆ ಮೊದಲಿನಿಂದಲೇ ಪ್ರಾರಂಭಗೊಂಡಿರುತ್ತವೆ. ಹೀಗಾಗಿ ಸೂರ್ಯನಿಗೂ ಸಹಿತ ಹನ್ನೆರಡು ಕಿರಣಗಳೇ ವಿನಾ ಏಳು ಕಿರಣಗಳು ಅಲ್ಲವೇ ಅಲ್ಲ. ಅದೇ ರೀತಿಯಲ್ಲಿ ಗ್ರಹಗಳೂ ಸಹಿತ ಹನ್ನೆರಡು ... ಇತ್ಯಾದಿ ವಿಷಯಗಳಿವೆ...**

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/592–598 – ಶ್ರೀ ಅರವಿಂದರು**



**ಕೇಂದ್ರ ಭಾಗದಲ್ಲಿರುವ ವೃತ್ತವು "ಲೋಕಮಾತೆ"ಯನ್ನು ಅಭಿವ್ಯಕ್ತಿಸುತ್ತದೆ. ಅವಳೇ 'ಮಹಾಶಕ್ತಿ'ಯಾಗಿದ್ದಾಳೆ. ನಾಲ್ಕು ದಳಗಳು ಶ್ರೀಮಾತೆಯ ನಾಲ್ಕು ವಿಭಾಗಗಳಾಗಿವೆ. ಮತ್ತು ಅವಳ ಹನ್ನೆರಡು ದಳಗಳು ಅವಳ ಗುಣಧರ್ಮಗಳಾಗಿವೆ.**

* * *

**ಇದು ಪರಮ ಚೈತನ್ಯದ ಪ್ರತಿಮಾತ್ಮಕ ವಿನ್ಯಾಸವಾಗಿದ್ದು ಶ್ವೇತಪದ್ಮವಾಗಿದೆ, ಜೊತೆಗೆ (ಲೋಕ ಸೃಷ್ಟಿಗೆ ಕಾರಣಳಾಗಿರುವದರಿಂದ ಈ ರೂಪದಲ್ಲಿ) – ಮಹಾಶಕ್ತಿ ರೂಪದಲ್ಲಿ ಕೇಂದ್ರಲ್ಲಿರುವ ನಾಲ್ಕು ವಿಭಾಗಗಳು ಹಾಗೂ ಹನ್ನೆರಡು ಗುಣಧರ್ಮಗಳ ಸಂಗಡ – ಇರುತ್ತಾಳೆ.**

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/04–05 – ಶ್ರೀಮಾತೆ**

# ಶ್ರೀಮಾತೆ ಪರಾಶಕ್ತಿ – ಮಹಾಶಕ್ತಿ

## (ಪರಾದ ಚೇತನ ಮತ್ತು ಶಕ್ತಿ)

ಶ್ರೀಮಾತೆಯ ನಾಲ್ಕು ಶಕ್ತಿಗಳು ಅವಳ ಅದ್ವಿತೀಯ ವ್ಯಕ್ತಿತ್ವಗಳಾಗಿವೆ, ಅಂಶಗಳೂ ಆಗಿವೆ ಮತ್ತು ಅವಳ ದಿವ್ಯತ್ವದ ಸಾಕಾರಗಳಾಗಿವೆ. ಇವುಗಳ ಮೂಲಕವೇ ಎಲ್ಲ ಜೀವ–ಜಂತುಗಳ ಲೀಲೆಗಳಲ್ಲಿ ತೊಡಗುತ್ತಾಳೆ. ಈ ಜಗತ್ತಿನಲ್ಲಿ ಅವಳ ಸೃಷ್ಟಿಗಳನ್ನು ಸುಸಂಬದ್ಧಗೊಳಿಸುತ್ತಾ ಮತ್ತು ಸಾಮರಸ್ಯಗೊಳಿಸುತ್ತಾ, ಅವಳ ಸಾವಿರದ ಶಕ್ತಿಗಳನ್ನು ಕಾರ್ಯಪ್ರವೃತ್ತಗೊಳ್ಳುವಂತೆ ನಿರ್ದೇಶಿಸುತ್ತಾಳೆ. ಇವೆಲ್ಲವೂ ಶ್ರೀಮಾತೆಗೆ "ಏಕ ಸ್ವರೂಪದಲ್ಲಿಯೇ" ಇದ್ದರೂ, ನಮ್ಮ ಎದುರಿಗೆ ಮಾತ್ರ ಈ ವಿಧವಿಧದ ವಿನ್ಯಾಸಗಳಲ್ಲಿ ಪ್ರಕಟಗೊಳ್ಳುತ್ತಾಳೆ. ಇವುಗಳಲ್ಲಿ ಬಹುತೇಕವಾಗಿ ಅವಳ ಶಕ್ತಿಗಳು ಮತ್ತು ಅವಳ ವ್ಯಕ್ತಿತ್ವಗಳೇ ಆಗಿವೆ. ಮತ್ತೆ ಕೆಲವು ಅವಳ ಉದ್ಗಮ(ಉತ್ಪತ್ತಿ)ಗಳು ಮತ್ತು ವಿಭೂತಿಗಳಾಗಿದ್ದು, ಅವುಗಳ ಮೂಲಕವೇ ಅವಳು ಈ ವಿಶ್ವದ ಕಾರ್ಯವನ್ನು ಮಾಡುತ್ತಾಳೆ.

ನಾವೆಲ್ಲರೂ ಈಗ ಆರಾಧಿಸುತ್ತಿರುವದು, ಅಸ್ತಿತ್ವದಲ್ಲಿರುವ ಸರ್ವಸ್ವವನ್ನೂ ನಿಯಂತ್ರಿಸುತ್ತಿರುವ ದಿವ್ಯ–ಚೈತನ್ಯ ಶಕ್ತಿಯಾಗಿರುವ ಶ್ರೀಮಾತೆಯನ್ನು. ಏಕವಾಗಿದ್ದರೂ ಸಹಿತ ಮತ್ತೆ ಹಲವು ಆಯಾಮಗಳನ್ನು ಹೊಂದಿದ್ದು, ಅತ್ಯಂತ ಕ್ರಿಯಾಶೀಲ ಸಾಮರ್ಥ್ಯ ಹೊಂದಿರುವ ಮನಸ್ಸೂ ಸಹಿತ ಅವಳ ಚಲನವಲನಗಳನ್ನು ಮತ್ತು ವ್ಯಕ್ತಿತ್ವವನ್ನು ಹೊಂದಿದ್ದರೂ ಸಹಿತ, ಇಲ್ಲಿ ಅದೇ ಮನಸ್ಸು ಅಸಮರ್ಥವಾಗಿರುತ್ತದೆ. ಹೀಗಾಗಿ ಶ್ರೀಮಾತೆಯ ಆ ಪರಮ ಶಕ್ತಿಯೂ ಹಾಗೂ ಚೈತನ್ಯವೂ ಆಗಿದ್ದು, ಮತ್ತೆ ಅವಳೇ ಸೃಷ್ಟಿಸಿದ ಸೃಷ್ಟಿಗಳಿಗಿಂತ ಉನ್ನತೋನ್ನತ ಹಂತದಲ್ಲಿ ಅಂದರೆ ಊರ್ಧ್ವಾತಿ ಊರ್ಧ್ವದಲ್ಲಿಯೇ ಇರುತ್ತಾಳೆ. ಆದರೆ ಅವಳ ಆ ಪಥಗಳಲ್ಲಿ ಕೆಲವನ್ನು ಮಾತ್ರ ನಾವು ಕಾಣಬಹುದಾಗಿದೆ. ಜತೆಗೆ ಅವಳು ಮೂರ್ತಗೊಳ್ಳುವದನ್ನು ಅನುಭೂತಿ–ಗೊಳಿಸಿಕೊಳ್ಳುವದರ ಮೂಲಕ ಅನುಭಾವ ಪಡೆದುಕೊಳ್ಳಬಹುದಾಗಿದೆ. ಮತ್ತೆ ಇವೆಲ್ಲಕ್ಕೂ ಮಿಗಿಲಾಗಿ ಇರುವ ವಿಷಯವೆಂದರೆ, ಅವುಗಳು ಬಹುತೇಕವಾಗಿ ಗ್ರಹಿಕೆಗೆ ದಕ್ಕುವಂತಿವೆ. ಏಕೆಂದರೆ, ಅವು ಬಹುತೇಕವಾಗಿ ಸಾಂಘಿಕವಾಗಿಯೇ ವ್ಯಾಖ್ಯಾನಿಸಲ್ಪಟ್ಟಿವೆ ಹಾಗೂ ನಿಗದಿತ ಮನೋಧರ್ಮಗಳನ್ನು ಹೊಂದಿವೆ. ಇದಲ್ಲದೇ ಆ ದೇವತೆಯ ಲೀಲೆಗಳ ಕ್ರಿಯೆಯಲ್ಲಿನ ರೂಪಗಳೂ ಆಗಿವೆ. ಈ ಮೂಲಕವೇ ಅವಳು ತನ್ನದೇ ಸೃಷ್ಟಿಯಾಗಿರುವ ಜೀವಿಗಳಾಗಿ ರೂಪಗೊಳ್ಳಲು ಸಹಮತಿ ಹೊಂದಿದ್ದಾಳೆ.

## ಶ್ರೀಮಾತೆಯ ಅಭಿವ್ಯಕ್ತಿಯ ಮೂರು ಪಥಗಳು

ಶ್ರೀಮಾತೆಯು ಅಭಿವ್ಯಕ್ತಗೊಳ್ಳಲು ಮೂರು ಪಥಗಳಿವೆ. ಅವುಗಳ ಬಗೆಗೆ ನೀವು ಅರಿವು ಹೊಂದಬೇಕೆಂದರೆ, ಆ "ಏಕತ್ವದ" ಹಂತದೊಡನೆ ಸ್ಪರ್ಶಗೊಳ್ಳುವ ಮೂಲಕ ನೀವು ಅಲ್ಲಿ ಪ್ರವೇಶ ಪಡೆದುಕೊಳ್ಳಬೇಕು. ಈ ಸ್ಪರ್ಶವು ಸಂಧಿನೀ ಶಕ್ತಿ(ಚಿತ್–ಶಕ್ತಿ)ಯೊಡನೆ ಬಂಧಗೊಂಡಿರಬೇಕು. ಏಕೆಂದರೆ ಈ ಸಂಧಿನೀ–ಶಕ್ತಿಯು ನಮ್ಮನ್ನು ವಿಶ್ವಾತ್ಮಗೊಳಿಸುವತ್ತ ಊರ್ಧ್ವದೆಡೆಗೆ ಸಾಗಲು ಅನುಮತಿಸುತ್ತದೆ. ಆದ್ಯಶಕ್ತಿಯಾಗಿರುವ ಈ ಆದಿ ಪರಾಶಕ್ತಿಯು, ಸರ್ವ ಲೋಕಗಳಿಗಿಂತಲೂ ಊರ್ಧ್ವದಲ್ಲಿಯೇ ನೆಲೆಸಿರುತ್ತಾಳೆ. ಅಲ್ಲಿಂದಲೇ, ಇನ್ನೂ ಸದಾ ಪ್ರಕಟಗೊಳ್ಳದೇ ಇರುವ ಆ ಪರಮ ಗೂಢತೆಯ ಇಲ್ಲಿನ ಸೃಷ್ಟಿಯ ಜೊತೆಗೆ ಸಂಪರ್ಕದ ಸಲುವಾಗಿ ಅವಳು ಆ ಊರ್ಧ್ವದಲ್ಲಿ ನೆಲೆಸಿದ್ದಾಳೆ. ವೈಶ್ವಿಕವಾಗಿ, ಈ ಬ್ರಹ್ಮಾಂಡ ಬ್ರಹ್ಮದ ಮಹಾಶಕ್ತಿಯು ಈ ಎಲ್ಲ ಜೀವ–ಚೈತನ್ಯಗಳಲ್ಲನ್ನೂ ಸೃಷ್ಟಿಸುತ್ತಾಳೆ. ಅವುಗಳನ್ನೇ ಒಳಗೊಂಡಿದ್ದಾಳೆ ಕೂಡ. ಅವುಗಳಲ್ಲಿಯೇ ಪ್ರವೇಶವನ್ನೂ ಪಡೆದು ಅವುಗಳನ್ನು ರಕ್ಷಿಸುತ್ತಾಳೆ. ಸಲಹುತ್ತಾಳೆ. ಹೀಗೆ ಕೋಟ್ಯಾಂತರ ಪ್ರಕ್ರಿಯೆಗಳನ್ನು ಹಾಗೂ ಬಲಗಳನ್ನೂ ರೂಪಿಸುತ್ತಾಳೆ. ವೈಯಕ್ತಿಕವಾಗಿ ಅವಳು, ಅವಳದೇ ಅಸ್ತಿತ್ವದ ಈ ಎರಡು ಅಗಾಧ ವ್ಯಾಪ್ತಿಯ ಪಥಗಳ ಮೂಲಕ ಮೂರ್ತಗೊಳ್ಳುತ್ತಾಳೆ. ಆ ಮೂಲಕವೇ ಸರ್ವಸ್ವವೂ ಜೀವಿಸುವಂತೆ, ಮತ್ತು ಸಮೀಪದಲ್ಲಿಯೇ ಇರುವಂತೆ, ಮಾನವ ವ್ಯಕ್ತಿತ್ವ ಹಾಗೂ ದೈವೀ ಪ್ರಕೃತಿಯ ಮಧ್ಯದಲ್ಲಿ ಸದಾ ಧ್ಯಾನಿಸುವಂತೆ ಮಾಡುತ್ತಾಳೆ.

## ಏಕೈಕವಾಗಿರುವ ಆದ್ಯಶಕ್ತಿ (ಆದಿಶಕ್ತಿ)

ಏಕೈಕವಾಗಿರುವ ಆದಿಮೂಲದ ಈ ಆದಿಶಕ್ತಿಯು, ಮಾತೆಯೂ ಆಗಿದ್ದಾಳೆ. ಈ ಎಲ್ಲ ಲೋಕಗಳಿಗಿಂತ ಊರ್ಧ್ವದಲ್ಲಿಯೇ ನೆಲಸಿದ್ದು ಶಾಶ್ವತದ ಚೈತನ್ಯವನ್ನು ತನ್ನಲ್ಲಿಯೇ ಧರಿಸಿಕೊಂಡು ಅವಳು 'ಪರಾಶಕ್ತಿ'ಯಾಗಿದ್ದಾಳೆ. ಏಕಾಂಗಿಯಾಗಿಯೇ, ಆ ನಿರ್ವಿಶೇಷದ ಬಲಕ್ಕೆ ಆಶ್ರಯವಿತ್ತಿದ್ದಾಳೆ. ಜೊತೆಗೆ ಅವರ್ಣನೀಯ–ಅನಿರ್ವಚನೀಯವಾದ ಸಾನಿಧ್ಯವನ್ನೂ ಹೊಂದಿದ್ದಾಳೆ. ತನ್ನಲ್ಲಿಯೇ ಅಳವಟ್ಟು–ಕೊಂಡಿರುವ ಅಥವಾ ಋತವನ್ನು ಪ್ರಕಟಗೊಳ್ಳಲು ಆಹ್ವಾನವನ್ನು ಕೊಡುತ್ತಿದ್ದಾಳೆ. ಅವಳ ಆ ಗುಹ್ಯ(ಗೂಢ)ದಿಂದಲೇ ಅವುಗಳನ್ನು ಅನಾವರಣಗೊಳಿಸುತ್ತಾಳೆ. ಅವುಗಳೆಲ್ಲವೂ ಅವಳದೇ ಅನಂತಾನಂತ ಚೇತನದ ಪ್ರಭೆಯಲ್ಲಿಯೇ ಅಂತರ್ಗತವಾಗಿದ್ದ ಹಂತದಿಂದಾಗಿ, ಅವಳು ಅವುಗಳಿಗೆ ತನ್ನದೇ ಸರ್ವಶಕ್ತ

ಬಲದಲ್ಲಿ ರೂಪಧಾರಣೆ ಕೊಡುತ್ತಾಳೆ. ಅವಳದೇ ಚಿಂತನದ ಜೀವನವನ್ನು ಹಾಗೂ ದೇಹ(ಸಂರಚನೆಯನ್ನೂ) ನೀಡುತ್ತಾಳೆ. ಈ 'ಪರಮ'ವೇ ಅವಳಲ್ಲಿ ಪ್ರಕಟಗೊಂಡು, ಚಿರಂತನವಾಗಿ ಅಭಿವ್ಯಕ್ತಗೊಂಡು ಶಾಶ್ವತವಾದ ಸಚ್ಚಿದಾನಂದವಾಗುತ್ತದೆ. ಇದು ಅವಳಲ್ಲಿಯೇ ಪ್ರಕಟಗೊಳ್ಳುವದರ ಮೂಲಕ ಈ ಲೋಕಗಳಲ್ಲಿ ದ್ವೈತ ಮತ್ತು ಅದ್ವೈತದ ಚೈತನ್ಯವಾಗಿ "ಈಶ್ವರ ಶಕ್ತಿ"ಯಾಗಿ, ಪುರುಷ–ಪ್ರಕೃತಿಯ ಈ ದ್ವೈತ ತತ್ತ್ವದಲ್ಲಿ ಪ್ರಕಟಗೊಳ್ಳುತ್ತದೆ. ಅವಳ ಮೂಲಕವೇ ಲೋಕಗಳ ರೂಪದಲ್ಲಿ ಮೂರ್ತಗೊಳ್ಳುತ್ತದೆ. ಅದೂ ಅಲ್ಲದೇ ಅವಕಾಶ(ಆಕಾಶ)ದ ಹಾಗೆ ಮತ್ತು ದೇವತೆಗಳ ಹಾಗೂ ಅವರ ಸಾಮರ್ಥ್ಯ–ಶಕ್ತಿಗಳಲ್ಲಿ ರೂಪಧಾರಣೆಗೊಳ್ಳುತ್ತದೆ. ಏಕೆಂದರೆ ಇವೆಲ್ಲವೂ ಜ್ಞಾತ ಲೋಕಗಳಲ್ಲಿ ಅದು ಅನ್ಯರಿಗೆ ಅಜ್ಞಾತವಾಗಿಯೇ ಇರುತ್ತದೆ. ಅವಳು ಈ ಪರಮ–ಲೀಲೆಗಳ ಜೊತೆಗೆ ರೂಪಿತಗೊಳ್ಳುತ್ತಲೇ ಇದ್ದರೂ ಇವೆಲ್ಲವೂ ಅವಳ ಆ ಶಾಶ್ವತದ ಮಾಯೆಗಳಾಗಿವೆ. ಅನಂತತೆಯ ಪವಾಡಗಳಾಗಿವೆ. ಸರ್ವಸ್ವವು ಇವಳೇ ಆಗಿದ್ದಾಳೆ. ಅವೆಲ್ಲವೂ ಈ ದಿವ್ಯ ಸಂಧಿನೀ ಶಕ್ತಿಯ (ಚೈತನ್ಯ ಶಕ್ತಿಯ) ಎಲ್ಲ ಅಂಶಾಂಶಗಳಾಗಿವೆ. ಅವಳ ಆ ಪರಮ ಆಣತಿ, ಕೃಪೆ ಇಲ್ಲದೇ ಅಥವಾ ಎಲ್ಲಯೂ ಸಹಿತ ಏನೂ ಇರುವದಿಲ್ಲ! ಆದರೆ, ಯಾವುದನ್ನು ಅವಳು ನಿರ್ಧರಿಸುತ್ತಾಳೆಯೋ ಅದು ಮಾತ್ರವೇ ಅಸ್ತಿತ್ವ ಪಡೆದುಕೊಳ್ಳುತ್ತದೆ. ಅವಳ ಆ ಆನಂದದ ಸೃಷ್ಟಿಯಲ್ಲಿ ಎರಕಗೊಂಡಂತಹ ರೂಪಗಳ ಮತ್ತು ಆ ಪರಮದ ಸಮ್ಮತಿ ಇಲ್ಲದೇನೇ ಇಲ್ಲಿ ಏನೊಂದೂ ಚಲನೆ ಹೊಂದಲು ಸಾಧ್ಯವೇ ಇಲ್ಲ.

* * *

**ಮಹಾಶಕ್ತಿ – ಲೋಕಮಾತೆ**

ಈ ಮಹಾಶಕ್ತಿಯು ಲೋಕಮಾತೆಯಾಗಿದ್ದಾಳೆ. ಅವಳು ಆ ಪರಾತ್ಪರದಿಂದ ಅವಳದೇ ವಿಶ್ವೋತ್ತರ ಚೈತನ್ಯದಿಂದ, ಅದರ ವಹನದಿಂದಲೇ ಅವಳು ಸರ್ವಸ್ವದಲ್ಲೂ ಕ್ರಿಯಾಪ್ರವೃತ್ತಳಾಗಿದ್ದಾಳೆ. ಮತ್ತು ಮೂಲಕವೇ ಅವಳೇ ಸೃಷ್ಟಿಸಿದ ಲೋಕಗಳಲ್ಲಿ ಅವಳು ಪ್ರವೇಶಿಸುತ್ತಾಳೆ. ಅವಳ ಈ ಉಪಸ್ಥಿತಿಯು, ದೈವೀಶಕ್ತಿಯೊಡನೆ ಹಾಗೂ ಅಸ್ತಿತ್ವದಲ್ಲಿರುವ ನಿರಂತರವಾಗಿರುವ ಸರ್ವ–ಬಲಗಳಿಗೆ ಸಮರ್ಥನೆಯನ್ನು ಒದಗಿಸುತ್ತಾಳೆ. ಅವುಗಳು ಇನ್ನೂ ಅಸ್ತಿತ್ವ ಪಡೆದುಕೊಳ್ಳದಿದ್ದರೂ ಸಹಿತ ಅವು ಸದಾ ತೋಷವನ್ನೇ ಒದಗಿಸುವಂತೆ ಸಮರ್ಥನೆ ನೀಡುತ್ತಾಳೆ. ಇದನ್ನೇ ನಾವು 'ಪ್ರಕೃತಿ' ಅಥವಾ 'ಸ್ವರೂಪ'ವೆಂದು ಕರೆಯುತ್ತೇವೆ. ಇದು ಹೆಚ್ಚಾಗಿ ಅವಳ ಬಾಹ್ಯ

ಸ್ವರೂಪದಲ್ಲಿ ಕಾರ್ಯಪ್ರವೃತ್ತವಾಗಿರುವ ವಿಷಯವಾಗಿರುತ್ತದೆ. ಅವಳು ತನ್ನ ಬಲಗಳ (ಶಕ್ತಿಗಳ) ಸೌಷಮ್ಯವನ್ನು ವ್ಯವಸ್ಥೀಕರಣಗೊಳಿಸುತ್ತ ಹಾಗೂ ಶ್ರೇಣಿಬದ್ಧತೆಯನ್ನೂ ರೂಪಿಸಿಕೊಂಡಿರುತ್ತಾಳೆ. ಈ ಮೂಲಕವೇ ಸರ್ವ ಪ್ರಕ್ರಿಯೆಗಳನ್ನೂ ನಡೆಸುತ್ತಾಳೆ. ಪ್ರಕೃತಿಯ ಸಂಚಾಲನೆಗೆ ಪ್ರೇರಣೆ ಕೊಡುತ್ತಾಳೆ. ಅವುಗಳ ಆಂತರ್ಯದಲ್ಲಿಯೇ ರಹಸ್ಯವಾಗಿ ಅವಳು ಚಲಿಸುತ್ತಾಳೆ. ಇಲ್ಲವೇ ಯಾವುದು ದೃಷ್ಟಗೊಳ್ಳಬೇಕಾಗಿದೆಯೋ, ಅಲ್ಲೆಲ್ಲವೂ ರೂಪಧಾರಣೆಯಾಗಿ ಅಭಿವ್ಯಕ್ತಗೊಳ್ಳುತ್ತಾಳೆ. ಅನುಭವಕ್ಕೆ ದಕ್ಕುವಂತೆ ಅಥವಾ ಜೀವನದ ಗತಿಯು ಸಂಚಲನವನ್ನು ಹೊಂದುವಂತೆ ಮಾಡುತ್ತಾಳೆ. ಲೋಕಗಳ ಪ್ರತಿಯೊಂದು ಘಟನೆಯೂ, ಈ ಜಗತ್ತಿನ ಹಾಗೂ ಈ ಲೋಕಗಳ ವ್ಯವಸ್ಥೆಗೆ ಅವಶ್ಯವಾಗಿರುವ ಮಹಾಶಕ್ತಿಯ ಲೀಲೆಗಳಾಗಿರುತ್ತವೆ. ಇಲ್ಲಿ ಎಲ್ಲ ಕಡೆಗೂ ಈ ಆದ್ಯಶಕ್ತಿ(ಆದಿಶಕ್ತಿ)ಯ ಬ್ರಹ್ಮಾಂಡದ ಸ್ವರೂಪ ಮತ್ತು ಆತ್ಮ ಸ್ವರೂಪವೇ ಆಗಿರುತ್ತದೆ. ಪ್ರತಿ ಹಂತದಲ್ಲಿಯೂ ಅವಳದೇ ದೃಷ್ಟಾರ ದೃಷ್ಟಿಯಲ್ಲಿ, ಅವಳ ಹೃದಯದಲ್ಲಿ ಸೌಂದರ್ಯ ಮತ್ತು ಶಕ್ತಿಯಾಗಿದ್ದು ಅವಳದೇ ಆನಂದದಲ್ಲಿ ಸೃಷ್ಟಿಗೊಂಡಿರುತ್ತದೆ.

ಆದರೂ ಅವಳ ಈ ಸೃಷ್ಟಿಯಲ್ಲಿ ಹಲವು ಸ್ತರಗಳೂ ಇರುತ್ತವೆ. ಈ ದೈವೀಶಕ್ತಿಯ ಹಲವು ಹಂತಗಳೂ ಇವೆ. ಈ ಅಭಿವ್ಯಕ್ತಿಯ ತುರೀಯಾವಸ್ಥೆಯಲ್ಲಿ (ಶೃಂಗದಲ್ಲಿ) ಯಾವುದು ಅನಂತತೆಯ ಅಸ್ತಿತ್ವ ಹೊಂದಿರುವ ಲೋಕಗಳಾಗಿವೆಯೋ, ಚೈತನ್ಯವಾಗಿದೆಯೋ ಅದು ಬಲವಾಗಿಯೇ ಮತ್ತು ಕೃಪೆಯ ಮೂಲಕವೇ ಎಲ್ಲಿ ಶ್ರೀಮಾತೆಯು ಶಾಶ್ವತದ ಶಕ್ತಿಯಿಂದ ತಾನೇ ತಾನಾಗಿ ಪ್ರಕಟಗೊಳ್ಳುತ್ತಿದ್ದಾಳೆಯೋ, ಅಲ್ಲೆಲ್ಲವೂ ನಾವೂ ಸಹಿತ ಅದರ ಒಂದು ಅಂಶಾಂಶವಾಗಿಯೇ ಇದ್ದೇವೆ.

ಎಲ್ಲ ಜೀವಿಗಳೂ(ಜೀವ–ಸಂಕುಲವೂ) ಅನಿರ್ವಚನೀಯವಾದ ಪೂರ್ಣತೆಯಲ್ಲಿ ಹಾಗೂ ಅಪರಿವರ್ತನೀಯ ಏಕತ್ವದಲ್ಲಿಯೇ ಜೀವಿಸುತ್ತಿದ್ದು, ಜೊತೆಗೆ ಸಂಚಲನವನ್ನು ಹೊಂದಿವೆ. ಏಕೆಂದರೆ, ಅವಳು (ಶ್ರೀಮಾತೆಯು) ಎಲ್ಲ ಜೀವ ಸಂಕುಲವನ್ನು ಸುರಕ್ಷಿತವಾಗಿಯೇ ತನ್ನ ಬಾಹುಗಳಲ್ಲಿ ರಕ್ಷಿಸಿದ್ದಾಳೆ, ನಮಗೆ ಅತೀ ಸಮೀಪದಲ್ಲಿರುವ ಜಗತ್ತುಗಳೆಂದರೆ ಪರಿಪೂರ್ಣದ ಅತಿಮಾನಸ (ಉನ್ಮನೀ ಮನೋಭಾವದ) ಸೃಷ್ಟಿಯೇ ಆಗಿದ್ದು, ಇಲ್ಲಿಯೇ ಶ್ರೀಮಾತೆಯು ಈ "ವಿಶ್ವೋತ್ತೀರ್ಣ ಮಹಾಶಕ್ತಿ" (ಆದ್ಯಶಕ್ತಿ)ಯಾಗಿದ್ದಾಳೆ. ದಿವ್ಯ ಸರ್ವಜ್ಞತ್ವದ 'ಇಚ್ಛೆ' ಮತ್ತು ಸರ್ವಶಕ್ತ ಜ್ಞಾನದೊಡನೆ ಇವು ಯಾವಾಗಲೂ ವಿಚಲನಗೊಳ್ಳದ ಕಾರ್ಯಗಳಾಗಿದ್ದು, ಜೊತೆಗೆ ಪ್ರತಿಯೊಂದು

ಪ್ರಕ್ರಿಯೆಯಲ್ಲಿಯೂ ಸಹಿತ ಸ್ವತಃಸ್ಫೂರ್ತ ಭಾವದಲ್ಲಿ ಪರಿಪೂರ್ಣವಾಗಿರುತ್ತಾಳೆ. ಇವೆಲ್ಲವೂ ಅಲ್ಲಿ ಆ ಋತದ ಹಂತಗಳೇ ಆಗಿವೆ. ಅಲ್ಲಿರುವ ಸರ್ವ ಆತ್ಮಗಳ ಅಸ್ತಿತ್ವವು ಮತ್ತು ಶಕ್ತಿ–ಬಲಗಳ ಹಾಗೂ ದೇಹ–ರಚನೆಗಳು ಆ ದೈವೀ ಪ್ರಕಾಶವೇ ಆಗಿರುತ್ತವೆ. ಅಲ್ಲಿನ ಅನುಭವಗಳೆಲ್ಲವೂ ಅಲ್ಲಿರುವ ಆರ್ಣವ (ಸಾಗರ) ಹಾಗೂ ಪ್ರವಾಹವಾಗಿದ್ದು, ಅಲ್ಲಿ ಸದಾ ಆ ತೀವ್ರತೆಯು ತುಂಬಿದ ಆ ನಿರ್ವಿಶೇಷ ಆನಂದದ (ಸಚ್ಚಿದಾನಂದದ) ಅಲೆಗಳೇ ಆಗಿರುತ್ತವೆ. ಆದರೆ ಇಲ್ಲಿ, ನಾವು ವಾಸಿಸುತ್ತಿರುವ ಎಡೆಯಲ್ಲಿ, ಇದು ಮಾತ್ರ ಅಜ್ಞಾನದ ಲೋಕಗಳಾಗಿವೆ. ಮನೋಲೋಕಗಳಾಚೆ, ದೇಹ ಮತ್ತು ಜೀವ(ನ)ಗಳು, ಅವುಗಳ ಮೂಲದ್ರವ್ಯವಾಗಿರುವ ಚೈತನ್ಯದಿಂದ ಭಿನ್ನವಾಗಿಯೇ (ದೂರವಾಗಿಯೇ) ರೂಪುಗೊಂಡಿರುತ್ತವೆ. ಅವುಗಳಲ್ಲಿ ನಮ್ಮ ಈ ಭೂಮಿಯೂ ಸಹಿತ ಒಂದು ಪ್ರಾಮುಖ್ಯ ಹೊಂದಿದ ಕೇಂದ್ರವಾಗಿದ್ದು, ಇದರ ವಿಕಾಸವೂ ಅತ್ಯಂತ ನಿರ್ಣಾಯಕ ಪ್ರಕ್ರಿಯೆಯಲ್ಲಿ ಇದೆ. ಇದೂ ಸಹಿತ ಅದರ ಎಲ್ಲ ಅಸ್ಪಷ್ಟತೆಯಿಂದ ಮತ್ತು ಸಂಘರ್ಷದಿಂದ ಹಾಗೂ ಅಪರಿಪೂರ್ಣತೆಯಿಂದಲೇ ಶ್ರೀಮಾತೆಯಿಂದಲೇ ರಕ್ಷಿಸಲ್ಪಡುತ್ತಿದೆ. ಇದೂ ಸಹಿತ ಈ ಮಹಾಶಕ್ತಿಯ ಗೂಢ–ಗಮ್ಯತೆಯ ಕಡೆಗೆ ಸಾಗಲು ಪ್ರೇರಣೇಯನ್ನು ಹಾಗೂ ಮಾರ್ಗದರ್ಶನವನ್ನು ಹೊಂದಿರುತ್ತದೆ.

ಅಜ್ಞಾನದಿಂದ ತುಂಬಿರುವ ಈ ತ್ರಿಪುಟೀ–ಲೋಕಗಳಲ್ಲಿ ಈ ಶ್ರೀಮಾತೆಯು ಮಹಾಶಕ್ತಿಯಾಗಿ ಮಧ್ಯಂತರದ ಒಂದು ಸ್ತರದಲ್ಲಿ ಇರುತ್ತಾಳೆ. ಅವಳು ಆ ಮೂಲಕ ಅತಿಮಾನಸ–ಪ್ರಕಾಶಕ್ಕೂ, ಪರಮ ಸತ್ಯಕ್ಕೂ ಹಾಗೂ ಋತ–ಜೀವ(ನ)ದ ಮಧ್ಯದ ಸ್ತರದಲ್ಲಿ ಮಧ್ಯವರ್ತಿಯಾಗಿದ್ದಾಳೆ, ಅವೆಲ್ಲವನ್ನೂ ಇಲ್ಲಿಗೆ ಕ್ರಮಾನುಗತವಾಗಿಯೇ ಅವತರಣಗೊಳಿಸುವ ಮೂಲಕ, ಅವತರಗೊಳ್ಳುವದ ಮೂಲಕ, ಇಲ್ಲಿರುವ ಚೈತನ್ಯದ ಸ್ತರಗಳಲ್ಲಿ ಆರೋಹ–ಅವರೋಹಣಗಳನ್ನು ಒದಗಿಸುವ ವಿಶೇಷ ವ್ಯವಸ್ಥೆಯುಳ್ಳ ಏಣಿಯ ಸ್ವರೂಪದಲ್ಲಿ ಇದ್ದು, ಅದರ ಮೂಲಕವೇ ಆ ಅವಿದ್ಯೆಯಿಂದ ಕೂಡಿದ ಭೌತಿಕ ಜಗತ್ತಿಗೆ ಬಂದು, ಮತ್ತೆ ಅದೇ ಸಾಧನದ ಮೂಲಕವೇ ಮೇಲೇರಿ ಬಂದು, ಜೀವನ–ಪುಷ್ಪದ ವಿಕಸನವನ್ನು, ಆತ್ಮದ ವಿಕಸನವನ್ನೂ, ಮನೋ ವಿಕಸನವನ್ನೂ ಆ ಅನಂತಾನಂತದವರೆಗೂ ಹಾಗೂ ಆ ಪರಮ ಆತ್ಮದ ನೆಲೆಯವರೆಗೂ ತಲುಪುವಂತೆ ಮಾಡುತ್ತಾಳೆ. ಇವೆಲ್ಲವೂ ಈ ಲೋಕದಲ್ಲಿಯೇ ಘಟಿಸಲ್ಪಡಬೇಕೆಂದು ನಿರ್ಣಿತವಾಗಿರುವದರಿಂದ, ಹಾಗೂ ಈ ಲೌಕಿಕದ ವಿಕಾಸದ ಮೂಲಕವೇ ಅವಳು ಎಲ್ಲವನ್ನೂ ಗಮನಿಸುತ್ತಾಳೆ. ಅನುಭವಿಸುತ್ತಾಳೆ. ಜೊತೆಗೆ ಅವುಗಳನ್ನೇ ಅವಳು

ಧಾರಾಕಾರಗೊಳಿಸುತ್ತಾಳೆ. ದೇವತೆಗಳಿಗಿಂತಲೂ ಉನ್ನತ ಸ್ತರದಲ್ಲಿ ಅವಳು ನೆಲೆಸಿದ್ದು, ಅವಳ ಸರ್ವ ಶಕ್ತಿಗಳೂ ಹಾಗೂ ವ್ಯಕ್ತಿತ್ವಗಳು ಅವಳ ಎದುರಿಗೇ ಸ್ಥಿತಗೊಂಡಿರುತ್ತವೆ. ಅವುಗಳ ಮೂಲಕವೇ ಅವಳು ಕ್ರಿಯೆಗೆ ತೊಡಗುತ್ತಾಳೆ. ಅವುಗಳನ್ನು ಅವರೋಹಣಗೊಳಿಸಿ, ಅವುಗಳ ಉದ್ಗಮವನ್ನೇ (ಹೊರಹೊಮ್ಮುವಿಕೆಯನ್ನು) ಈ ಕೆಳಗಿನ ಸ್ತರಗಳ ಲೋಕಗಳ ಮಧ್ಯೆ ಪ್ರವೇಶಿಸುವಂತೆ, ನಿರ್ವಹಿಸುವಂತೆ, ಹೋರಾಡಲು ಹಾಗೂ ವಿಜಯ ಸಂಪಾದಿಸಲು, ಮುಂದಾಳತ್ವ ವಹಿಸಲು ಮತ್ತು ಅವುಗಳ ಚಕ್ರೀಯ ಗತಿಯನ್ನು ಮುಂದುವರೆಸಲು, ಒಟ್ಟಿನಲ್ಲಿ, ಅವುಗಳ ಬಲಗಳನ್ನು ಪ್ರತಿ ಹಂತದಲ್ಲಿಯೂ ಪ್ರತಿ ಸ್ತರದಲ್ಲಿಯೂ ಸಮಗ್ರಗೊಳ್ಳುವಂತೆ (ಪೂರ್ಣಗೊಳ್ಳುವಂತೆ) ನಿರ್ದೇಶಿಸಲು ರೂಪಿಸುತ್ತಾಳೆ.

ಈ ಉದ್ಗಮಗಳು ಹಲವು ದಿವ್ಯ ರೂಪಗಳಲ್ಲಿ ಮತ್ತು ವ್ಯಕ್ತಿತ್ವಗಳಲ್ಲಿ ಇದ್ದು, ಇವುಗಳ ಮೂಲಕವೇ ಮನುಕುಲವು ಇವಳನ್ನು ಹಲವಾರು ನಾಮ–ರೂಪಗಳಲ್ಲಿ, ಹಲವಾರು ಯುಗಗಳಿಂದಲೂ ಆರಾಧಿಸುತ್ತ ಬಂದಿದ್ದಾರೆ. ಆದರೆ ಅವಳೂ ಸಹಿತ ಈ ಎಲ್ಲ ಶಕ್ತಿಗಳ ಮುಖಾಂತರವೇ ಸಾಕಾರ ಪಡೆಯುತ್ತಿದ್ದು, ಸಿದ್ಧಗೊಳ್ಳುತ್ತಿದ್ದು ಹಾಗೂ ಉದ್ಗಮಗಳೇ ಅವಳ ವಿಭೂತಿ (ಮಹಾತ್ಮ) ಸ್ವರೂಪದ ದೇಹಗಳು ಮತ್ತು ಮನಸ್ಸುಗಳಾಗಿವೆ. ಅಷೇ ಅಲ್ಲದೇ ಅವಳು ಈಶ್ವರನ ವಿಭೂತಿ ಲಕ್ಷಣಗಳನ್ನೂ, ಅವನ ಮನೋರೂಪವನ್ನೂ ಹಾಗೂ ದೈಹಿಕ ಸ್ವರೂಪವನ್ನೂ ಸಿದ್ಧಗೊಳಿಸುತ್ತಾಳೆ. ಅಂದರೆ ಇವೆಲ್ಲವನ್ನೂ ಅವಳು ಈ ಭೌತಿಕ (ಲೌಕಿಕ) ಜಗತ್ತಿನಲ್ಲಿ ಅಭಿವ್ಯಕ್ತಗೊಳಿಸುತ್ತಾಳೆ. ಅಲ್ಲದೇ ಮಾನವನ ಚೈತನ್ಯದಲ್ಲಿ (ಪ್ರಜ್ಞೆಯಲ್ಲಿ) ಅದೃಶ್ಯ ರೂಪದಲ್ಲಿ ಅವಳ ಕೆಲವೊಂದು ಶಕ್ತಿಯ ಕಿರಣದಲ್ಲಿ, ಗುಣದಲ್ಲಿ ಮತ್ತು ಸಾರೂಪ್ಯದಲ್ಲಿ ಪ್ರಕಟಗೊಳಿಸುತ್ತಾಳೆ. ಹೀಗಾಗಿ ಈ ಭೂಮಿಯ ಮೇಲಿನ ಎಲ್ಲ ಘಟನಾವಳಿಗಳೂ, ದೃಶ್ಯಗಳೂ ಸಹಿತ ಅವಳ ಆ ವಿಶ್ವವಿರಾಟ್–ಸ್ವರೂಪದ ದೇವ ಗಣಗಳನ್ನು ಅವಳ ಸಹಾಯಕರನ್ನಾಗಿಸಿಕೊಂಡು ರೂಪಿಸಿ ನಿರ್ದೇಶಿಸುತ್ತಿರುವ ಹಾಗೂ ವ್ಯವಸ್ಥೆಗೊಳಿಸುತ್ತಿರುವ ರಂಗಲೀಲೆಗಳಾಗಿವೆ. ಇಲ್ಲಿ ಅವಳೂ ಸಹಿತ ಅಪ್ರತ್ಯಕ್ಷವಾಗಿಯೇ ಪಾತ್ರಧಾರಿಯೂ ಆಗಿದ್ದಾಳೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/14–17**

ಈ ಶ್ರೀಮಾತೆಯು ಆ ಊರ್ಧ್ವದಿಂದಲೇ ಎಲ್ಲವನ್ನೂ ಆಡಳಿತಕ್ಕೆ ಒಳಪಡಿಸುತ್ತಾಳೆ, ಅದೇ ರೀತಿ ನಿರ್ವಹಿಸುತ್ತಿದ್ದಾಳೇ. ಅಲ್ಲದೇ ಅವಳು ಈ ಕೆಳಗಿನ ಸ್ತರದಲ್ಲಿರುವ

ತ್ರೈಗುಣದಿಂದ ಕೂಡಿರುವ ಲೋಕದೆಡೆಗೆ ಅವತರಣಗೊಳ್ಳುತ್ತಾಳೆ. ಇಲ್ಲಿರುವ ಎಲ್ಲವೂ ಸಹಿತ, ಅಜ್ಞಾನದ ಸಂಚಲನದಲ್ಲಿಯೂ ಸಹಿತ, ಅವಳದೇ ಆದ ಆಚ್ಛಾದಿತ ಸ್ವರೂಪದಲ್ಲಿ ಇದ್ದು, ನಿರಾಕಾರ ಸ್ವರೂಪದಲ್ಲಿರುತ್ತದೆ. ಜೊತೆಗೆ ಅವಳದೇ ಸೃಷ್ಟಿಯಾಗಿದ್ದರೂ ಸಹಿತ, ಕ್ಷೀಣಗೊಂಡ ಪದಾರ್ಥಗಳಲ್ಲಿ, ಅವಳ ಪ್ರಾಕೃತಿಕ ಸಂರಚನೆ (ಪ್ರಕೃತಿ ಸ್ವರೂಪದ ದೇಹ) ಹಾಗೂ ಪ್ರಕೃತಿಯ ಬಲಗಳಲ್ಲಿ ಜೊತೆಗೇ ಅವುಗಳು ಅಸ್ತಿತ್ವದಲ್ಲಿವೆ. ಏಕೆಂದರೆ, ಇವೆಲ್ಲವೂ ಆ 'ಪರಮ'ದ ನಿಗೂಢವಾದ ನಿಯೋಜನೆಯೇ ಆಗಿದೆ. ಇದು ಆ ಮೂಲಕವೇ ಕಾರ್ಯಪ್ರವೃತ್ತವಾಗುತ್ತಿದ್ದು, ಅದು ಆ ಅನಂತತೆಯ ಸಂಭಾವ್ಯತೆಯಲ್ಲಿಯೇ ಸ್ಥಿತವಿದ್ದುದಾಗಿತ್ತು. ಅವಳು ಸದಾ ಮಹತ್–ತ್ಯಾಗಕ್ಕೆ ಅನುಮತಿಸುತ್ತಿದ್ದು, ಜೊತೆಗೆ ಅದಕ್ಕಾಗಿ ಆತ್ಮಕ್ಕೆ, ಅಜ್ಞಾನದ ರೂಪಗಳ ಮೇಲೆ ಮತ್ತು ಆತ್ಮಕ್ಕೆ ಹೊದಿಸಿರುವ ಹೊದಿಕೆಯನ್ನೂ ರೂಪಿಸಿದ್ದಾಳೆ. ಆದರೆ ವೈಯಕ್ತಿಕವಾಗಿಯೂ ಅವಳು, ಇಲ್ಲಿ ಈ ತಮೋಪ್ರಧಾನ ಸ್ತರದೆಡೆಗೆ ಅವತರಣಗೊಳ್ಳಲೆಂದು ಬಾಗುತ್ತಾಳೆ. ಏಕೆಂದರೆ ಆ ಮೂಲಕವೇ ಪ್ರಕಾಶವನ್ನೂ ನೀಡಿ ಮುಂದಾಳತ್ವ ವಹಿಸಬೇಕಾಗಿದೆ. ಅನೃತವಾದುದನ್ನು (ಮಿಥ್ಯೆಗಳನ್ನು) ಹಾಗೂ ತಪ್ಪುಗಳನ್ನು ಪರಿವರ್ತಗೊಳಿಸುತ್ತ ಪರಮ ಸತ್ಯಕ್ಕೆ ತರುತ್ತಾಳೆ. ಈ ಮೃತ ಸದೃಶವಾಗಿರುವದನ್ನು, ಅವಳು ಅದನ್ನು ದೇವ ಸದೃಶ ಜೀವವನ್ನಾಗಿಸಿ ಪರಿವರ್ತಿಸುತ್ತಾಳೆ. ಈ ನೋವುಗಳಿಂದ, ಯಾತನೆಗಳಿಂದ, ಕೂಡಿದ ಜಗತ್ತಿಗೆ, ಹಠಮಾರಿತನದಿಂದಾಗಿ ರೂಪಿತಗೊಂಡ ದುಃಖದಿಂದ ಹಾಗೂ ಬಳಲುವಿಕೆಯಿಂದ ಇದ್ದುದನ್ನು ಅವಳು ಅದೆಲ್ಲಕ್ಕೂ ಮುಕ್ತಾಯ ರೂಪಿಸಿ, ಅಲ್ಲಿ ಅವಳ ಮಹೋನ್ನತವಾದ ಆನಂದದಲ್ಲಿಯೇ ರೂಪಾಂತರಣಗೊಳಿಸುತ್ತಾಳೆ.

ಅವಳ ಆತ್ಮೀಯ, ಗಾಢ ಹಾಗೂ ಮಹದ್–ಪ್ರೇಮಭಾವವು ಯಾವಾಗಲೂ ಅವಳ ಸಂತತಿಯ ಮೇಲೆಯೇ ಇದ್ದು, ಅದಕ್ಕಾಗಿಯೇ ಈ ಅಸ್ಪಷ್ಟತೆಯ ಅವಧಿಯಿಂದ ಹೊರಬರಲು ತನಗೆ ತಾನೇ ಸಮ್ಮತಿಸಿಕೊಂಡು, ಅಲ್ಲಿ ಸ್ಥಿತಗೊಳ್ಳುತ್ತಾಳೆ. ತಮದ ಹಾಗೂ ಮಿಥ್ಯಾ ಲೋಕದ ಶಕ್ತಿಗಳಿಂದಾಗಿ ಆಗಮಿಸುವ (ಉದ್ಭವಿಸುವ) ವೇದನಾಪೂರ್ಣ ಪ್ರಭಾವಗಳನ್ನು ಹಾಗೂ ಆಘಾತಗಳನ್ನು ಸಹಿಸಿಕೊಳ್ಳುವದರ ಸಲುವಾಗಿ ಅವಳು ತನ್ನನ್ನು ತಾನೇ ದಯಾಶೀಲಗೊಳಿಸಿಕೊಳ್ಳುತ್ತಾಳೆ. ಜನ್ಮ ಜನ್ಮಗಳ ಹಲವು ದ್ವಾರಗಳಿಂದಲೇ ಅವಳು ಸಂಚಲಿಸುತಿದ್ದು, ಅದು ಸಾವನ್ನೂ ಸಹಿತ ಒಳಗೊಂಡಿದೆ. ಅವಳು ತನ್ನಲ್ಲಿಯೇ ಈ ಎಲ್ಲ ನೋವುಗಳನ್ನೂ ಹಾಗು ದುಃಖಗಳನ್ನು ಮತ್ತು ಸೃಷ್ಟಿಯ ಎಲ್ಲ ಕ್ಲೇಶಗಳನ್ನು ಸ್ವೀಕರಿಸುತ್ತಾಳೆ.

ಹೀಗಾಗಿಯೇ ಇದೆಲ್ಲವೂ, ಸರ್ವಸ್ವವೂ ಏಕಾಂಗಿಯಾಗಿಯೇ ಆ ಪ್ರಕಾಶದ ಕಡೆಗೆ ಎತ್ತಲ್ಪಟ್ಟಂತೆ ಕಾಣುತ್ತದೆ. ತೋಷದೆಡೆಗೆ ಮತ್ತು ಆ ಋತದ ಹಾಗೂ ಶಾಶ್ವತದ ಜೀವನದ ಎಡೆಗೆ ಊರ್ಧ್ವಗೊಳಸಿದಂತೆ ಇರುತ್ತದೆ. ಇದನ್ನೇ ಮಹತ್ತರವಾದ ತ್ಯಾಗವೆಂದೂ ಕರೆಯಲಾಗಿದೆ. ಕೆಲವೊಂದು ಸಾರಿ ಇದು 'ಪುರುಷನ ತ್ಯಾಗ'ವೆಂದು ಕರೆಯಲಾಗಿದೆ. ಆದರೆ, ಇದು ಬಹುತೇಕವಾಗಿ, ಪ್ರಕೃತಿಯ ಪ್ರಳಯ ಸ್ವರೂಪಿ (ಪೂರ್ಣಾಹುತಿ)ಯಾಗಿರುತ್ತದೆ. ಇದೇ ಈ ದಿವ್ಯ ಮಾತೆಯ ತ್ಯಾಗವೂ ಆಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/17**

## ಶ್ರೀಮಾತೆಯ ನಾಲ್ಕು ಮಹತ್ತರ ಸ್ವರೂಪಗಳು

ಶ್ರೀಮಾತೆಯ ಈ ನಾಲ್ಕು ಮಹತ್ತರವಾದ ವಿಭಾವಗಳು, ಅವಳ ನೇತೃತ್ವದಲ್ಲಿಯೇ ಇರುವ ಅವಳದೇ ಶಕ್ತಿಯ ನಾಲ್ಕು ರೂಪಗಳಾಗಿವೆ. ಇವೇ ನಾಲ್ಕು ಸ್ವರೂಪದಲ್ಲಿಯೇ ಅವಳೆದುರೇ ಅವೆಲ್ಲವೂ ಅಸ್ತಿತ್ವವನ್ನು ಪಡೆದುಕೊಳ್ಳುತ್ತವೆ. ಈ ಲೋಕಕ್ಕೆ ಮಾರ್ಗದರ್ಶನ ಮಾಡಲು ಸ್ಥಿತಗೊಂಡಿವೆ. ಜೊತೆಜೊತೆಗೆ ಈ ಭೌತಿಕ (ಲೌಕಿಕ) ಲೀಲೆಗಳಲ್ಲಿ ಅವಳ ಈ ವ್ಯವಹರಣೆಗಳಲ್ಲಿ ಪ್ರಕಟಗೊಳ್ಳುತ್ತವೆ.

ಅವುಗಳಲ್ಲಿ ಒಂದನೇಯದು, – ಅವಳ ವ್ಯಾಪ್ತಗೊಂಡ ಪ್ರಶಾಂತ ಮತ್ತು ಸಮ್ಮಿಲಿತ ಬುದ್ಧಿಮತ್ತೆ(ಪ್ರಜ್ಞೆ)ಯಾಗಿದ್ದು, ಮತ್ತು ಘನಪ್ರಶಾಂತತೆಯ ಕೃಪಾ ಗುಣವನ್ನೂ ಹೊಂದಿದೆ. ಹಾಗೂ ಅಕ್ಷಯವಾಗಿರುವ ದಯಾಪರತೆಯನ್ನೂ ಮತ್ತು ಪ್ರಭುತ್ವವನ್ನು, ಅನುಪಮವಾದ ಮಹಿಮೆಯನ್ನು ಹಾಗೂ ಸರ್ವಸ್ವವನ್ನೂ ಸತ್ತಾರೂಢಗೊಳಿಸುವ ಮಹತ್ತರ ಭಾವವನ್ನೂ ಹೊಂದಿದ್ದಾಳೆ.

ಎರಡನೆಯದು, ಅವಳ ಭವ್ಯಾತಿಭವ್ಯವಾದ ಸಾಮರ್ಥ್ಯವನ್ನು ಮತ್ತು ಅಜೇಯವಾದ ಉತ್ಸಾಹವು ಸಾರೂಪ್ಯಗೊಂಡಿದ್ದು, ಅವಳ ಅಪ್ರತಿಮ ಹೋರಾಟದ ಮನೋಭಾವವನ್ನು ಅವಳ ಅಗಾಧದ ಇಚ್ಛೆಯನ್ನು, ಅವಳ ತೀವ್ರ(ತೀಕ್ಷ್ಣ)ವಾದ ಶೀಘ್ರತೆಯನ್ನು ಹಾಗೂ ಇಡೀ ಜಗತ್ತನ್ನೇ ಕಂಪನಗೊಳಿಸುವ ಬಲವಾಗಿದ್ದಾಳೆ.

ಮೂರನೆಯದು, ವಿವಿಧತೆಯ ಹಾಗೂ ಮಧುರಮಯ ಮತ್ತು ಆಶ್ಚರ್ಯಕರವಾಗಿ ಅವಳ ಆ ನಿಗೂಢ ಸೌಂದರ್ಯದ ರಹಸ್ಯದಿಂದ ಮತ್ತು ಮಧುರನಾದಮಯತೆಯಿಂದ ಅವಳ ಸಂಕೀರ್ಣತೆಯ ಮತ್ತು ಸೂಕ್ಷ್ಮಾತಿಸೂಕ್ಷ್ಮ

ವೈಭವದ ಸಮೃದ್ಧಿಯನ್ನು, ಅವಳ ಪ್ರಬಲವಾದ ಆಕರ್ಷಣೆ ಮತ್ತು ಮೋಡಿಗೊಳಿಸುವ ಚಿತ್ತಾಕರ್ಷದ ಕೃಪೆಯಾಗಿದ್ದಾಳೆ.

ನಾಲ್ಕನೇಯದಾಗಿ, ಅವಳಲ್ಲಿಯೇ ಅಂತರ್ನಿಹಿತಗೊಂಡಿರುವ ಅಂತರಂಗದ ಘನಿಷ್ಠ ಜ್ಞಾನವಾಗಿದ್ದು, ಮತ್ತು ಎಲ್ಲಿಯೂ ಅಡೆತಡೆಯಿರದ, ಅತ್ಯಂತ ಸುರಕ್ಷತೆಯ ಕಾರ್ಯ ಹಾಗೂ ಸಂಪೂರ್ಣವಾಗಿರುವ, ಸರ್ವ ವಸ್ತು–ವಿಷಯಗಳ ನಿಖರವಾದ ಪರಿಪೂರ್ಣತೆಯಾಗಿದ್ದಾಳೆ. ಬುದ್ಧಿಮತ್ತೆ, ಸಾಮರ್ಥ್ಯ, ಸೌಷಮ್ಯತೆ, ಪರಿಪೂರ್ಣತೆಗಳು ಅವುಗಳ ಹಲವು ಗುಣ ಧರ್ಮಗಳಾಗಿದ್ದು ಜೊತೆಗೆ ಈ ಎಲ್ಲ ಶಕ್ತಿಗಳೂ ಅವುಗಳೊಡನೆ ಈ ಜಗತ್ತಿಗೆ ಆಗಮಿಸಿವೆ. ಜೊತೆಗೆ ಮಾನವನಲ್ಲಿ ವಿಭೂತಿ ಪುರುಷನ ಸ್ವರೂಪದಲ್ಲಿ ಆಚ್ಛಾದಗೊಂಡು ಪ್ರಕಟಗೊಳ್ಳುತ್ತಾಳೆ.

ಆ ದೈವತ್ವದ ಹಂತದಲ್ಲಿಯೇ (ಸ್ತರದಲ್ಲಿಯೇ) ಅಧಿರೋಹಗೊಂಡಿರುವ ಸ್ತರದಲ್ಲಿಯೇ ಇದ್ದು, ಯಾವುದು ಮೃಣ್ಮಯದ ಸ್ವರೂಪವನ್ನು ನೇರವಾಗಿ ತೆರೆದು–ಕೊಳ್ಳುತ್ತದೆಯೋ ಮತ್ತು ಶ್ರೀಮಾತೆಯ ಜೀವನ ಪ್ರೀತಿಯ ಲವಲವಿಕೆಯ/ಸ್ವಭಾವವು ತೆರೆದುಕೊಳ್ಳುತ್ತದೆಯೋ, ಅದೂ ನೇರವಾಗಿಯೇ ತೆರೆದುಕೊಳ್ಳುತ್ತದೆಯೋ ಹಾಗೂ ಅದನ್ನು ಬಳಸಿಕೊಳ್ಳುತ್ತದೆಯೋ, ಇವೇ ಆ ನಾಲ್ಕು ಅಂಶಗಳಾಗಿವೆ. ಈ ನಾಲ್ಕು ಅಂಶಗಳಿಗೆ ನಾವು ನಾಲ್ಕು ಪ್ರಾಮುಖ್ಯವಾದ ಹೆಸರುಗಳನ್ನು ರೂಪಿಸಿದ್ದೇವೆ; **1) ಮಾಹೇಶ್ವರೀ 2) ಮಹಾಕಾಳೀ 3) ಮಹಾಲಕ್ಷ್ಮೀ 4) ಮಹಾಸರಸ್ವತೀ.**

## ಮಾಹೇಶ್ವರೀ

ಮಹಾನ್ ಜಗದ್ಧಾತ್ರಿ ಮಾಹೇಶ್ವರಿಯು, ಚಿಂತನಶೀಲ ಮನೋಭೂಮಿಕೆಗಿಂತ ಮತ್ತು ಇಚ್ಛೆಗಿಂತ ಊರ್ಧ್ವದ ಆ ವ್ಯಾಪ್ತದಲ್ಲಿ ಪೀಠಸ್ಥಳಾಗಿದ್ದಾಳೆ. ಜೊತೆಗೆ ಇವುಗಳನ್ನು ಅವಳು ಮಹತ್ತರಗೊಳಿಸುತ್ತಾಳೆ, ಬೃಹದ್‌ಗೊಳಿಸುತ್ತಾಳೆ. ಅಥವಾ ಅವುಗಳಾಚೆ ವೈಭವದ ಜ್ಯೋತಿಯೊಡನೆ ಧಾರೆಗೊಳ್ಳುತ್ತಾಳೆ. ಅದಕ್ಕಾಗಿ ಅವಳು ಸಾಮರ್ಥ್ಯಶಾಲಿ ಆಗಿದ್ದು, ಮತ್ತು ಜಾಣ್ಮೆಯಿಂದಲೂ ನಮ್ಮನ್ನು ಈ ಅಧಿಮಾನಸದ ಅನಂತತೆಯಲ್ಲಿ ವ್ಯಾಪ್ತಗೊಳ್ಳುವಂತೆ ಮಾಡುತ್ತಾಳೆ. ಬೃಹದ್–ಶೋಭೆಯ ಆ ಪರಮ ಜ್ಯೋತಿ ಪ್ರಕಾಶದ ಕಡೆಗೆ ಅದ್ಭುತಾದ್ಭುತದ ಜ್ಞಾನ ಹೊಂದಿರುವ ಭಂಡಾರದ ಆಗರಕ್ಕೆ ಎಡೆಗೆ, ಶ್ರೀಮಾತೆಯ ಶಾಶ್ವತದ ಬಲಗಳು ಚಲಿಸುತ್ತಿರುವ ಎಡೆಗೆ ಕರೆದೊಯ್ಯುತ್ತಾಳೆ.

ಶಿವಸ್ವರೂಪಿ (ಮಂಗಳರೂಪಿ) ಪ್ರಶಾಂತತೆಯು ಅವಳಾಗಿದ್ದಾಳೆ. ಆಶ್ಚರ್ಯಕಾರಕಳೂ ಆಗಿದ್ದಾಳೆ. ಮಹತ್ತಾಗಿ, ಮತ್ತು ಅಷ್ಟೇ ಪ್ರಶಾಂತವಾಗಿ ಎಂದೆಂದಿಗೂ ಇರುತ್ತಾಳೆ. ಇವಳಿಲ್ಲದೇ ಏನೊಂದೂ ಚಲನವನ್ನು ಹೊಂದಲು ಸಾಧ್ಯವೇ ಇಲ್ಲ. ಏಕೆಂದರೆ ಜ್ಞಾನವು (ಬುದ್ಧಿಮತ್ತೆಯು) ಇವಳಲ್ಲಿಯೇ ಇರುತ್ತದೆ. ಇವಳನ್ನು ತಪ್ಪಿಸಿ ಏನನ್ನೂ ಮಾಡಲು ಸಾಧ್ಯವಗುವದಿಲ್ಲ. ಇವಳು ಸರ್ವ ವಿಷಯವನ್ನೂ, ಸರ್ವ ಜೀವಿಗಳನ್ನೂ ಹಾಗೂ ಅವುಗಳ ಸ್ವಭಾವವನ್ನು ಮತ್ತು ಯಾವುದು ಇವುಗಳನ್ನು ಸದಾ ಚಲನಶೀಲತೆಯಲ್ಲಿ ಇಡುತ್ತದೆಯೋ ಆ ವಿಶ್ವ ನಿಯಮವನ್ನು (ನಿಯತಿಯನ್ನು) ಸಮಾವಿಷ್ಟಗೊಳಿಸಿಕೊಂಡಿದ್ದಾಳೆ, ಇವುಗಳ ಜೊತೆಗೇ ಇವುಗಳಿಗೆ ನಿಗದಿಗೊಂಡಿರುವ ಅವಧಿ (ದಿನಗಳ) ಹಾಗೂ ಅವುಗಳ ಮೊದಲು ಯಾವ ಸ್ವರೂಪದಲ್ಲಿ ಅಲ್ಲಿ ಇದ್ದವೋ, ಆ ಸ್ವರೂಪವೇ ಈಗಲೂ ಕಡ್ಡಾಯವಾಗಿ ಇರುವಂತೆ ಪರಿಗ್ರಹಿಸುತ್ತಾಳೆ.

ಪರಿಪೂರ್ಣ ಸಾಮರ್ಥ್ಯವೊಂದು ಅವಳಲ್ಲಿ ಇದ್ದು, ಇದು ಎಲ್ಲವನ್ನೂ ಸಂಪರ್ಕಿಸುತ್ತದೆ. ಎಲ್ಲವನ್ನೂ ಪ್ರಬುದ್ಧಗೊಳಿಸುತ್ತದೆ. ಅವಳ ಆ ಅದೃಶ್ಯ ರೂಪದಲ್ಲಿಯೇ ಇರುವ ಅಪಾರ ಪ್ರಜ್ಞೆಯಿಂದ ಯಾವುದೂ ನುಣುಚಿಕೊಳ್ಳದಂತೆ (ತಪ್ಪಿಸಿಕೊಳ್ಳದಂತೆ) ಹಾಗೂ ಮಹಾಮಹಿಮೆಯ ಪ್ರಶಾಂತತೆಯಿಂದ ನುಣುಚಿ–ಕೊಳ್ಳದಂತೆ ಕಾಪಿಡುತ್ತದೆ. ಸಮಾನತೆ, ಸಹನೆ ಹಾಗೂ ವಿಚಲನೆಗೊಳ್ಳದಂತೆ ಅವಳ ಇಚ್ಛೆಯಲ್ಲಿಯಲ್ಲಿಯೇ ಇವೆಲ್ಲವು ಅಂತರ್ಗತಗೊಂಡಿವೆ. ಅವಳು ಮಾನವರೊಡನೆ, ವಸ್ತುಗಳೊಡನೆ ಆಯಾ ಸ್ವಭಾವಕ್ಕೆ ಅನುಗುಣವಾಗಿಯೇ ವ್ಯವಹರಿಸುತ್ತಾಳೆ. ಅದರಿಂದ ಆಯಾ ಆಯಾ ಸ್ವಭಾವಗಳೂ ಸಹಿತ ಆಯಾ ಆಯಾ ಶಕ್ತಿಯನ್ನು ಅವಲಂಬಿಸಿಕೊಂಡೇ ರೂಪಿತಗೊಳ್ಳುತ್ತವೆ. ಅದರಲ್ಲೂ ಅಲ್ಲಿರುವ ಆ ಸತ್ಯದ ಪ್ರಕಾರವಾಗಿಯೇ ಅದು ಪ್ರಕಟಗೊಳ್ಳುತ್ತದೆ.

ಹಾಗೆ ನೋಡಿದರೆ ಅಂಶಿಕವಾಗಿ ಅವಳು ಏನೂ ಅಲ್ಲ. ಆದರೆ ಅವಳು ಆ ಪರಾತ್ಪರದ ನಿರ್ಣಯಗಳನ್ನು ಅನುಸರಿಸುತ್ತಾಳೆ. ಆ ಮೂಲಕ ಕೆಲವು ಅಂಶಗಳನ್ನು ಊರ್ಧ್ವಮುಖಗೊಳಿಸುತ್ತಾ ಮತ್ತೆ ಕೆಲವನ್ನು ಅವರೋಹಣಕ್ಕೆ ಒಳಪಡಿಸುತ್ತಾಳೆ. ಇಂತಹ ಅವರೋಹಣಗೊಂಡ ವಿಷಯಗಳು ತನ್ನಿಂದ ದೂರವೇ ಇರುವಂತೆ ಅ ತಮದ ಕಡೆಗೆ ತಳ್ಳುತ್ತಾಳೆ. ಯಾವುದು ಜಾಣ್ಮೆಯಿಂದ (ಶುಭದಿಂದ) ಕೂಡಿರುತ್ತದೆಯೋ ಅದಕ್ಕೆ ಮತ್ತೂ ಉಜ್ವಲವಾದ ಕಾಂತಿಮಯ

ಪ್ರಜ್ಞೆಯನ್ನು ಒದಗಿಸುತ್ತಾಳೆ. ಯಾರು ಕನಸನ್ನು (ವಿಜನ್) ಹೊಂದಿದ್ದಾರೆಯೋ ಅವರ ಆ ದೃಷ್ಟಿಕೋನವನ್ನು ಅವಳ ಚಿಂತನಕ್ಕೆ ಒಳಪಡಿಸಿಕೊಂಡು ಹರಸುತ್ತಾಳೆ. ಪ್ರತಿಕೂಲ ಸಂದರ್ಭಗಳು ಇದ್ದಲ್ಲಿ ಅವಳು ಅವರದೇ ಆದ ವಿರೋಧ ಭಾವವನ್ನೇ ಹೇರುತ್ತಾಳೆ. ಅಜ್ಞಾನಿಯಾಗಿದ್ದಲ್ಲಿ, ಮತ್ತು ಮೂರ್ಖತನದಿಂದ ಕೂಡಿದ್ದಲ್ಲಿ, ಅವಳು ಅವರ ಆಯಾ ಅಂಧತ್ವ ಗ್ರಹಿಕೆಯ ಪ್ರಕಾರವೇ ಅವರನ್ನು ಕರೆದೊಯ್ಯುತ್ತಾಳೆ. ಪ್ರತಿಯೊಬ್ಬ ಮಾನವ ಜೀವಿಯಲ್ಲಿಯೂ ಅವಳು ಉತ್ತರದಾಯಿತ್ವವನ್ನು ಹೊಂದಿದ್ದು, ಅವರ ಸ್ವಭಾವದ ವಿಭಿನ್ನ ನೆಲೆಯ ಅಂಶಗಳನ್ನು ಅವರವರ ಬಯಕೆಯಂತೆ ಅವರವರ ಬೇಡಿಕೆಯಂತೆ ಹಾಗೂ ಅವರವರ ತುಡಿತದಂತೆಯೇ ಒಪ್ಪಿ, ಅವರು ಯಾವ ಸ್ತರದಲ್ಲಿ ಕರೆಯುತ್ತಿದ್ದಾರೆಯೋ, ಅದೇ ರೀತಿಯಲ್ಲಿ ಅವರಿಗೆ ಲಭ್ಯವಾಗುತ್ತಾಳೆ. ಅವರ ಮೇಲೆ ಅವಶ್ಯವಿದ್ದ ಒತ್ತಡವನ್ನೂ ಹಾಕುತ್ತಾಳೆ, ಅಥವಾ ಅವರನ್ನು ಅವರದೇ ಆದ ವ್ಯಕ್ತಿತ್ವದಲ್ಲಿಯೇ ವಿಕಾಸಗೊಳಿಸಿಕೊಂಡಿರುವ ಸ್ವಾತಂತ್ರ್ಯದಲ್ಲಿಯೇ, ಅಜ್ಞಾನದಲ್ಲಿದ್ದ ಪಥದಿಂದ ಮುಕ್ತರಾಗಲು ಅವರದೇ ಪಥದಲ್ಲಿ ಪ್ರವೃದ್ಧರಾಗುವಂತೆ ಮಾಡುತ್ತಾಳೇ, ಇಲ್ಲವೇ ಅಲ್ಲಿಯೇ ಕರಗಿಹೋಗುವಂತೆ ಮಾಡುತ್ತಾಳೆ.

ಅದಕ್ಕಾಗಿಯೇ ಅವಳು ಸದಾ ಊರ್ಧ್ವದಲ್ಲಿಯೇ ಇರುತ್ತಾಳೆ. ಯಾವುದೂ ಅವಳನ್ನು ಬಂಧನಕ್ಕೆ ಒಳಪಡಿಸಿಲ್ಲ; ಈ ವಿಶ್ವದ ಯಾವುದಕ್ಕೂ ಅವಳು ಮಮಕಾರವನ್ನು ಹೊಂದಿಲ್ಲ (ನಿರ್ಗುಣಳಾಗಿದ್ದಾಳೆ). ಆದಾಗ್ಯೂ ಸಹಿತ, ಅವಳು ವಿಶ್ವಮಾತೆಯ ಹೃದಯಕ್ಕಿಂತಲೂ ಪ್ರಮುಖವಾದ ಹಂತದಲ್ಲಿ ಇದ್ದಾಳೆ. ಅವಳಿಗೆ ಈ ಎಲ್ಲ ಆತ್ಮೀಯತೆಯು ಯಾವಾಗಲೂ ಅನಂತವಾಗಿವೆ. ಎಂದಿಗೂ ಕರಗಿಹೋಗುವದಿಲ್ಲ. ಈ ಎಲ್ಲವೂ ಅವಳಿಗೆ ಅವಳ ಸಂತತಿಯಂತೆಯೇ ಇದ್ದು, ಅವೆಲ್ಲವೂ ಆ "ಏಕತ್ವದ" ಅಂಶಗಳೇ ಆಗಿವೆ. ಅಸುರರಾಗಲಿ, ಪಿಶಾಚಿಗಳಾಗಲಿ ಅಥವಾ ರಾಕ್ಷಸರಾಗಲಿ ಅವರೂ ಸಹಿತ ಎಷ್ಟೇ ವಿರೋಧವನ್ನು ಹೊಂದಿದ್ದರೂ ಸಹಿತ ಅವಳ ಅಂಶವಾಗಿಯೇ ಇರುತ್ತಾರೆ. ಅವರ ಆ ರೀತಿಯ ತಿರಸ್ಕಾರ ಮತ್ತು ದ್ವೇಷಗಳು ಕೇವಲ ಫಲಿತಾಂಶದ ಮುಂದೂಡಿಕೆಯಾಗಿರುತ್ತದೆಯೇ ವಿನಾ ಬೇರೆ ಏನೂ ಇಲ್ಲ. ಅಲ್ಲದೇ ಅವಳು ಕೊಡುವ ಶಿಕ್ಷೆಯೂ ಸಹಿತ ಒಂದು ಕೃಪೆಯಂತೆಯೇ ಇರುತ್ತದೆ, ಆದರೆ ಅವಳ ಕರುಣೆ (ಸಾನುಕಂಪವು) ಎಂದಿಗೂ ಅವಳ ಜಾಣ್ಮೆಯ ದೃಷ್ಟಿಯಿಂದ ದೂರವಿರುವದಿಲ್ಲ. ಅಥವಾ ಅವಳ ಕ್ರಿಯೆಗಳು ನಿಗದಿಗೊಳಿಸಲ್ಪಟ್ಟ ಆದೇಶದಿಂದ ವಿಚಲನೆ ಹೊಂದುವದಿಲ್ಲ. ಸರ್ವ ವಸ್ತುಗಳ

ಪರಮ ಸತ್ಯಕ್ಕೆ ಎಲ್ಲವೂ "ಏಕತ್ವವನ್ನೇ" ಹೊಂದಿವೆ. ಅವಳ ಜ್ಞಾನದ ಶಕ್ತಿಯ ಕೇಂದ್ರದಲ್ಲಿಯೇ ಅದು ಇದ್ದು, ನಮ್ಮ ಆತ್ಮದ ಸಂರಚನೆಗೆ ಹಾಗೂ ನಮ್ಮ ಸ್ವಭಾವವು ಆ ದಿವ್ಯ–ಸತ್ಯದ ಜೊತೆಗೆ ಮೇಳೈಸುವಂತೆ ಮಾಡುತ್ತಾಳೆ. ಈ ದಿವ್ಯ ಸತ್ಯವೇ ಅವಳ ಯೋಜನೆಯೂ ಹೌದು ಹಾಗೂ ಅವಳ ಶ್ರಮವೂ ಹೌದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/18–19**

## ಮಹಾಕಾಳೀ

ಮಹಾಕಾಳೀ ಎನ್ನುವದು ಅವಳ ಇನ್ನೊಂದು ವಿಭಾವವಾಗಿದೆ. ಇದು ವ್ಯಾಪ್ತವಾಗಿಲ್ಲ. ಆದರೆ ಔನ್ನತ್ಯವನ್ನು ಹೊಂದಿದೆ. ಜಾಣ್ಮೆಯನ್ನೂ ಹೊಂದಿರಲಿಕ್ಕಿಲ್ಲ ಆದರೆ ಅವಳದೇ ಆದ ವಿಶಿಷ್ಟ ಶಕ್ತಿಯ ಬಲವನ್ನು ಹಾಗೂ ಸಾಮರ್ಥ್ಯವನ್ನು ಹೊಂದಿದೆ. ಇಲ್ಲಿ ಅವಳ ಅಪ್ರತಿಹತವಾದ (ಪ್ರಬಲವಾದ) ಗಾಢತೆ ಇದೆ. ಮಹಾಬಲಶಾಲಿಯಾದ ಗಭೀರತೆಯೂ ಇದೆ. ಸಾಧಿಸಿಕೊಳ್ಳಬೇಕಾದ ಶಕ್ತಿಯ ಮಹಾಸಾಮರ್ಥ್ಯಶಾಲಿಯಾದ ಗಭೀರಾಸಕ್ತಿ ಇದಾಗಿದೆ. ಒಂದು ದಿವ್ಯತ್ವ ತುಂಬಿದ ಹಿಂಸೆಯೂ ಇಲ್ಲಿ ಇದ್ದು, ಉತ್ಪಾತವೂ ಇದೆ. ಅದು ಎಲ್ಲ ಅಡೆತಡೆಗಳನ್ನು ಹಾಗೂ ಬಂಧನಗಳನ್ನು ಕಿತ್ತೆಸೆದು ಆಗಮಿಸಬಲ್ಲುದು. ಅವಳ ಈ ಸರ್ವ ದಿವ್ಯತೆಯೂ ಪ್ರಕ್ಷುಬ್ಧತೆಯ ರಭಸದೊಂದಿಗೇ ಅತ್ಯುಜ್ವಲವಾಗಿಯೇ ಪ್ರಖರಗೊಳ್ಳುತ್ತದೆ. ಹೀಗಾಗಿ ಅವಳು ತೇಜತ್ವಕ್ಕೆ (ವೇಗಕ್ಕೆ) ಕಾರಣಳಾಗಿದ್ದಾಳೆ. ತತ್ಕ್ಷಣದಲ್ಲಿ ಪರಿಣಾಮಕಾರೀ ಪ್ರಕ್ರಿಯೆಯಾಗಿಸಬಲ್ಲಳು. ತೀವ್ರಾತಿತೀವ್ರ ಹಾಗೂ ನೇರಾನೇರವಾಗಿಯೇ ಅಪ್ಪಳಿಸುತ್ತಾಳೆ. ಈ ಮೊದಲು ಅಸ್ತಿತ್ವದಲ್ಲಿ ಇದ್ದುದೆಲ್ಲವನ್ನೂ ತನ್ನ ಸಮಕ್ಷಮದಲ್ಲಿಯೇ ಧ್ವಂಸಗೊಳಿಸುತ್ತಾಳೆ. ಅಸುರರಿಗೆ ಅವಳು ಭಯಾವಹ ಮುಖಮುದ್ರೆಯಲ್ಲಿದ್ದಾಳೆ. ದೈವತ್ವವನ್ನು ವಿರೋಧಿಸುವವರಿಗೆ ಭಯಂಕರಳೂ ಮತ್ತು ನಿರ್ದಯಳೂ ಆಗಿದ್ದಾಳೆ. ಸಂಗ್ರಾಮದಿಂದ ಎಂದಿಗೂ ಹಿಂದೆ ಸರಿಯದ ಜಗದೇಕವೀರತ್ವ ಹೊಂದಿದ ಯೋಧಾ ಆಗಿದ್ದಾಳೆ. ಅಸಹನೆಯಲ್ಲಿ (ಅಶಾಂತಿಯಲ್ಲಿ) ಹಾಗೂ ಅಪರಿಪೂರ್ಣತೆಯಲ್ಲಿ ಯಾರು ಆಸಕ್ತಿ ಹೊಂದಿದ್ದಾರೆಯೋ ಅವರಿಗೂ ಅವಳು ಜೊತೆಯಾಗಿಯೇ ಇರುತ್ತಾಳೆ. ಯಾವುದು ಅಜ್ಞಾನದ ಹಠಮಾರಿತನದಿಂದ ಕೂಡಿದೆಯೋ ಅದಕ್ಕೂ ಅವಳು ಸೇವೆಯನ್ನು ನೀಡುತ್ತಾಳೆ. ಅಲ್ಲದೇ ವಿಶ್ವಾಸ–ಘಾತಕತನಕ್ಕೆ ಘಟನೆಗಳಿಗೆ ತಕ್ಷಣದಲ್ಲಿಯೇ ಅವಳಲ್ಲಿ ಈ ಕಡುಕೋಪವು ರೂಪಣೆಗೊಳ್ಳುತ್ತದೆ. ದುರೇಚ್ಛೆ ಇದ್ದಲ್ಲಿ ಅಲ್ಲಿಯೇ ಅವಳ ಆ ತೀಕ್ಷ್ಣವಾದ

ಚಾಟಿಯಿಂದ ತಕ್ಷಣವೇ ಪ್ರಹಾರ ಮಾಡುತ್ತಾಳೆ. ದೈವೀ ಕಾರ್ಯದಲ್ಲಿ ನಿರ್ಲಕ್ಷ್ಯವನ್ನು ಮತ್ತು ಸೋಮಾರಿತನವನ್ನು ಅವಳು ಎಂದಿಗೂ ಸಹಿಸುವದಿಲ್ಲ. ಅವಳು ಅತ್ಯಂತ ತೀವ್ರತರವಾದ ಯಾತನೆಯನ್ನು ನೀಡುವ ಮೂಲಕವೇ ಎಚ್ಚರಿಕೆಯನ್ನೂ ಕೊಡುತ್ತಾಳೆ. ಅದರಲ್ಲೂ ಸೋಮಾರಿಯಾದವರಿಗೆ ಹಾಗೂ ಚಂಚಲ ಮನೋಭಾವ ಹೊಂದಿದವರಿಗೆ ಶಿಕ್ಷೆ ನೀಡುತ್ತಾಳೆ. ಈ ಉತ್ತೇಜನಾ ಪ್ರವೃತ್ತಿಗಳು ಯಾವಾಗಲೂ ತೀವ್ರ ವೇಗದಲ್ಲಿಯೇ ಇದ್ದು, ನೇರಾನೇರವಾಗಿಯೇ ಘಟಿಸುತ್ತವೆ ಮತ್ತು ಮುಕ್ತ ಭಾವವನ್ನೂ ಹೊಂದಿವೆ. ಅಲ್ಲಿನ ಚಲನವಲನಗಳು ಎಂದಿಗೂ ನಿರ್ವಿಶೇಷತ್ವದಲ್ಲಿಯೇ ಮತ್ತು ನಿಃಶೇಷದಲ್ಲಿಯೇ ಇರುತ್ತವೆ. ಅಗ್ನಿಯ ಜ್ವಾಲೆಗಳಲ್ಲಿ ಅಭೀಪ್ಸೆಯು ಶಿಖರಸದೃಶವಾಗಿಯೇ ಇದ್ದು, ಇದೇ **"ಮಹಾಕಾಳಿಯ"** ಸಂಚಲನವೂ ಆಗಿದೆ.

ಅವಳ ಶಕ್ತಿಯನ್ನು ನಿಯಂತ್ರಿಸಲು ಅಸಾಧ್ಯವಾಗಿದೆ. ಅವಳ ದೃಷ್ಟಿಕೋನ ಮತ್ತು ಅವಳ ಇಚ್ಛೆ ಯಾವಾಗಲೂ ಉದಾತ್ತವಾಗಿಯೇ ಇದ್ದು, ಮತ್ತು ಅದು ಗರುಡನ ರೀತಿಯಲ್ಲಿ ಸದಾ ತುರೀಯವನ್ನು ತಲುಪುವ ಉಡ್ಡಯನದಂತೆಯೇ ಇರುತ್ತದೆ. ಅವಳ ಪಾದಗಳು ಅತ್ಯಂತ ತೀವ್ರಗತಿಯಲ್ಲಿ ಇದು ಸದಾ ಊರ್ಧ್ವಮುಖೀ ಪಥದಲ್ಲಿರುತ್ತವೆ. ಅವಳ ಬಾಹುಗಳು ಸದಾ ತೆರೆದುಕೊಂಡೇ ಇದ್ದು, ಅಪ್ಪಳಿಸಲು ಮತ್ತು ಜೊತೆಗೆ ಕರುಣಾಪೂರಿತ ಭಾವದಿಂದ ರಕ್ಷಿಸಲು ಸಿದ್ಧಗೊಂಡೇ ಇರುತ್ತವೆ. ಅದಕ್ಕಾಗಿ ವಿಸ್ತಾರಗೊಂಡೇ ಇರುತ್ತವೆ. ಅದಕ್ಕಾಗಿಯೇ ಅವಳು ಮಾತೆಯೂ ಆಗಿದ್ದಾಳೆ. ಅವಳ ಪ್ರೇಮವೂ ಸಹಿತ ಅವಳ ಸರೋಷದಂತೆಯೇ ತೀಕ್ಷ್ಣವಾಗಿಯೇ ಇರುತ್ತದೆ. ಅವಳು ಅತ್ಯಂತ ಗಾಢವಾದ ಅನುರಾಗಪೂರ್ಣ ದಯಾಳುತನವನ್ನು ಹೊಂದಿದ್ದಾಳೆ. ಯಾವಾಗ ಅವಳು ಅವಳ ಸಾಮರ್ಥ್ಯಧಲ್ಲಿ ತನ್ನನ್ನು ಅಳವಡಿಸಿಕೊಳ್ಳಲು ಇಚ್ಛಿಸುತ್ತಾಳೆಯೋ, ಆಗ ಒಂದು ಕ್ಷಣದಲ್ಲಿಯೇ ಸರ್ವಸ್ವವೂ ಧ್ವಂಸಗೊಳ್ಳುತ್ತದೆ. ಅಲ್ಲಿ ಬೇರೆ ಯಾವುದೇ ಪ್ರತಿರೋಧವೂ ಇರುವದಿಲ್ಲ. ಯಾವುದೇ ಅಡೆತಡೆಗಳಿಗೂ ಅಲ್ಲಿ ಅವಕಾಶವೇ ಇರುವದಿಲ್ಲ. ಅಥವಾ ಅಲ್ಲಿ ಯಾವುದೇ ಆಕ್ರಮಣಕಾರೀ ಶತ್ರುಗಳೂ ಸಹಿತ ನೋಡಲೂ ಸಿಗುವದಿಲ್ಲ.

ಒಂದು ವೇಳೆ ಅವಳ ಕೋಪವು ಶತ್ರುಗಳಿಗೆ ಧ್ವಂಸಾತ್ಮಕವಾಗಿ ಮತ್ತು ಒತ್ತಡವೂ ಸಹಿತ ತೀಕ್ಷ್ಣಾತಿತೀಕ್ಷ್ಣದಲ್ಲಿಯೇ ಯಾತನಾಮಯವಾಗಿದ್ದರೂ ಸಹಿತ, ಅವಳು ಎಲ್ಲರಿಂದಲೂ ಸದಾ ಭಯ–ಭಕ್ತಿಯಿಂದಲೇ ಆರಾಧನೆಗೊಳ್ಳುತ್ತಿದ್ದಾಳೆ. ಅವಳು ಪರಾಕ್ರಮಶಾಲಿಯಾಗಿಯೂ, ಸಾಮರ್ಥ್ಯಶಾಲಿಯಾಗಿಯೂ ಮತ್ತು

ಪವಿತ್ರಳಾಗಿಯೂ ಆರಾಧಿಸಲ್ಪಡುತ್ತಾಳೆ. ಅದಕ್ಕಾಗಿ ಅವರ ಭೌತಿಕಾವಸ್ಥೆಯಲ್ಲಿ ವಿದ್ರೋಹಕಾರಕವಾಗಿಯೇ ಇರುವದರಿಂದ, ಅದು ಪರಿವರ್ತಗೊಂಡು, ಪರಿಪೂರ್ಣ ಸತ್ಯದ ಸ್ವರೂಪಕ್ಕೆ ಪರಿವರ್ತಗೊಳಿಸುವಲ್ಲಿ, ಅವಳ ಆ ಅಬ್ಬರಗಳ, ಮತ್ತು ಅಪ್ಪಳಿಸುವಿಕೆಯ ಮೂಲಕವೇ ದೊರೆಯುತ್ತಿರುವ ಅವಳ ತೀಕ್ಷ್ಣಾತಿತೀಕ್ಷ್ಣವಾದ ಕೃಪೆ ಎಂದೇ ಸ್ವೀಕರಿಸುತ್ತಾರೆ. ಯಾವುದು ವಿಕೃತವಾಗಿದೆಯೋ ಅದನ್ನು ನೇರಗೊಳಿಸಲು ಬಲವಾದ ಸುತ್ತಿಗೆಯಿಂದ ಪ್ರಹಾರ ಮಾಡುತ್ತಾಳೆ. ಯಾವುದು ಅಶುದ್ಧವಾಗಿದೆಯೋ ಅಥವಾ ದೋಷಪೂರಿತಗೊಂಡಿದೆಯೋ, ಅದನ್ನು ಪರಿಷ್ಕರಿಸಿ ಪರಿಶುದ್ಧಗೊಳಿಸಿ ಸಲಹುತ್ತಾಳೆ.

ಆದರೆ ಯಾವುದು ಅವಳಿಂದ ಒಂದೇ ದಿನದಲ್ಲಿ ಘಟಿಸಿದೆಯೋ, ಅದು ತಾನು ಆ ಸ್ವರೂಪ ಪಡೆದುಕೊಳ್ಳುವಲ್ಲಿ ಸುದೀರ್ಘಾವಧಿಯನ್ನೆ ತೆಗೆದುಕೊಂಡಿತ್ತು. ಅವಳ 'ಆನಂದ'ವಿಲ್ಲದೇ ಯಾವುದು ಎಷ್ಟೇ ವಿಶಾಲವಾಗಿದ್ದರೂ ಮತ್ತು ಗುರುತರವಾಗಿದ್ದರೂ ಅಥವಾ ಮೃದುತ್ವವನ್ನು ಹೊಂದಿದ್ದರೂ, ಮಧುರತೆಯಿಂದ ತುಂಬಿಕೊಂಡಿದ್ದರೂ ಅವಳ 'ಆನಂದದ' ಕೃಪೆ ಇಲ್ಲದೇ ತೋಷದ ಮನಮೋಹಕವಾದ ಕಾಂತಿ ಜ್ವಾಲೆಗಳು ಬೆಳಗುವದಿಲ್ಲ. ಅದರಲ್ಲೂ ಆ ನಿರ್ವಿಶೇಷತ್ವದ ಆಂತರ್ಯದ ಕೃಪೆಯಿಲ್ಲದೇ ಇವು ಕಾಂತಿಮಯತೆಯಲ್ಲಿ ಶಿಖರಪ್ರಾಯ ತಾಳುವದಿಲ್ಲ.

ಸದಾ ವಿಜಯಶಾಲಿಯಾಗುವಂತಹ ಸಾಮರ್ಥ್ಯವನ್ನು ಅವಳು ಜ್ಞಾನಕ್ಕೆ ನೀಡುತ್ತಾಳೆ. ಸೌಂದರ್ಯವನ್ನು ಹಾಗೂ ಸೌಷಮ್ಯವನ್ನು ಒಂದು ಉನ್ನತೋನ್ನತ ಹಂತಕ್ಕೆ ತರುತ್ತಾಳೆ. ಅತ್ಯಂತ ನಿಧಾನಗತಿಯ ಪ್ರಯತ್ನಗಳಿಗೆ ಸೂಕ್ತ ಸಂಚಲವನ್ನು ಹಾಗೂ ಕಠಿಣ ಶ್ರಮಗಳಿಗೆ, ಕಷ್ಟಗಳಿಗೆ ಹಾಗೂ ಸಾಧನೆಗೆ ಪರಿಪೂರ್ಣತೆಯ ನಂತರದಲ್ಲಿ ಚಂಡಪ್ರಚಂಡತೆಯಲ್ಲಿ ಅವಳು ಶಕ್ತಿಯನ್ನು ಬಲವನ್ನು ದ್ವಿಗುಣ-ಗೊಳಿಸುತ್ತಾಳೆ. ಅದನ್ನು ಸಾಧಿಸಲು ಬೇಕಾಗಿದ್ದ ಬಲು ದೀರ್ಘಾವಧಿಯನ್ನು ಕಡಿಮೆ ಮಾಡುತ್ತಾಳೆ.

ಆ ಪರಮೋಚ್ಚವಾದ ಪ್ರಹರ್ಷದ ತುರೀಯಾವಸ್ಥೆಯಿಲ್ಲದೇ ಇಲ್ಲಿ ಯಾವುದೂ ಅವಳನ್ನು ತೃಪ್ತಿ ಪಡಿಸಲು ಸಾಧ್ಯವೇ ಇಲ್ಲ. ಊರ್ಧ್ವಾತಿಊರ್ಧ್ವಗಳ, ಪರಮಾತಿಪರಮ ಪಾವಿತ್ರ್ಯ ಹೊಂದಿದ ಗುರಿಗಳ ಹಾಗೂ ಅತ್ಯಂತ ವ್ಯಾಪ್ತವಾದ ವಿಸ್ತಾರ ಪಥವಿಲ್ಲದೇ ಇದ್ದರು ಅವಳನ್ನು ತೃಪ್ತಿ ಪಡಿಸಲು ಸಾಧ್ಯವಿಲ್ಲ.

ಆದ್ದರಿಂದ ಅವಳೊಡನೆ ಸದಾ ಆ ದೇವರ ವಿಜಯಶಾಲೀ ಬಲವೇ ಇದ್ದು, ಮತ್ತು ಅದೂ ಸಹಿತ ಅವಳ ಕೃಪೆಯಿಂದಲೇ, ಸಾನುಕಂಪನದ ಜ್ವಾಲಾಗ್ನಿಯಿಂದಲೇ ಮತ್ತು ಮಹೋನ್ನತವಾದ ಸಾಧನೆಯತ್ತ ವೇಗವಾಗಿಯೇ ಸಾಗುತ್ತಿದ್ದು, ಈ ಕ್ಷಣದಿಂದಲೇ ಘಟಿಸಲಿರುವ ಸಾಧನೆಗಳಾಗಿರುತ್ತವೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/19–20**

## ಮಹಾಲಕ್ಷ್ಮೀ

ಪ್ರಜ್ಞಾನ ಮತ್ತು ಶಕ್ತಿಗಳು ಮಾತ್ರವೇ ಈ ಪರಾಶಕ್ತಿಯ ಅಭಿವ್ಯಕ್ತಿಗಳಾಗಿಲ್ಲ. ಅಲ್ಲಿ ಅವಳ ಸ್ವಭಾವದ ಸೂಕ್ಷ್ಮ ಮಾಯೆಯೂ ಇದೆ. ಅದಿಲ್ಲದೇ ಈ ಪ್ರಜ್ಞಾನ ಮತ್ತು ಶಕ್ತಿಗಳು ಅಪರಿಪೂರ್ಣದ ವಸ್ತುಗಳಾಗುತ್ತವೆ. ಇದರ ಪರಿಪೂರ್ಣತೆಯು ಇಲ್ಲದೇ ಪರಿಪೂರ್ಣತೆಯೂ ಸಾಧ್ಯವಾಗುವದಿಲ್ಲ. ಇವುಗಳಿಗಿಂತ ಮುಖ್ಯವಾಗಿ, ಆ ಶಾಶ್ವತ ಸೌಂದರ್ಯದ ಅದ್ಭುತಾದ್ಭುತವೂ ಒಂದು ಇದೆ. ಎಂದಿಗೂ ಗ್ರಹಿಸಲಾಗದ ದಿವ್ಯ ಸೌಷಮ್ಯದ ರಹಸ್ಯವೊಂದಿದೆ. ವಿಶ್ವ ಸೌಂದರ್ಯದ ಅನಿವಾರ್ಯತೆಯ ಸಂಯೋಗದ ಮಾಯೆಯೂ (ಲೀಲೆಯೂ) ಬಲಗಳನ್ನು ಪಡೆದುಕೊಂಡು, ಜೀವಗಳಲ್ಲಿ ಒಂದನ್ನೊಂದು ಹೊಂದಿಕೊಂಡು ಹಾಗೂ ಪರಸ್ಪರ ಭೇಟಿಯಾಗುವದನ್ನು ಸಂಪೂರ್ಣ ಒಪ್ಪಿಕೊಂಡು (ಬಾಧ್ಯಸ್ಥಗೊಳಿಸಿಕೊಂಡು) ಮತ್ತು ಇವೆಲ್ಲವುಗಳ ಹಿಂದೆ ಒಂದು ಗೂಢವಾದ ರಹಸ್ಯವಾಗಿರುವ ಆನಂದವೊಂದು ತನ್ನ ಲೀಲೆಯನ್ನು ತೋರುತ್ತಿದೆ. ಅದು ಪರದೆಯ ಹಿಂದೆಯೇ ಇದ್ದುಕೊಂಡೇ ನಾದಮಯತೆಯಲ್ಲಿ ಹಾಗೂ ರೂಪಗಳನ್ನು ಸಿದ್ಧಗೊಳಿಸುತ್ತದೆ.

ಇದು ಮಹಾಲಕ್ಷ್ಮೀಯ ಶಕ್ತಿಯಾಗಿದೆ. ಇಲ್ಲಿ ರೂಪುಗೊಂಡಿರುವ ಜೀವಗಳ ಹೃದಯಕ್ಕೆ ಆಕರ್ಷಣೀಯವಾಗಿರುವ ಆ ದೈವೀ ಶಕ್ತಿಯ ಯಾವುದೇ ಭಾವವೂ (ಆಯಾಮವೂ) ಇರುವದಿಲ್ಲ. ಏಕೆಂದರೆ **ಮಾಹೇಶ್ವರಿ**ಯು ತುಂಬ ಪ್ರಶಾಂತಳಾಗಿಯೇ ದೃಷ್ಟಗೊಳ್ಳುತ್ತಾಳೆ. ಮಹತ್ತಮವಾಗಿ ಮತ್ತು ಈ ಮೃಣ್ಮಯದಿಂದ ಅವಳನ್ನು ತಲುಪಲು, ಅವಳಲ್ಲಿ ಶರಣಾಗತಿ ಹೊಂದಲು ಬೇಕಾದ ಭಾವಗಳ ಕ್ಷೀಣಪ್ರಭಾವದಿಂದ ಅವಳು ದೂರದೂರವಾಗಿಯೇ ಇರುತ್ತಾಳೆ. ಇನ್ನು **ಮಹಾಕಾಳಿಯಾದರೋ** ಅಶಕ್ತತನಕ್ಕೆ ಎಂದಿಗೂ ಅವಳು ಧಾರಣಕ್ಕೆ ಸಿಗದೆ ಇರುವಂತಹ ತೀವ್ರತೆಯನ್ನು ಹೊಂದಿದ್ದಾಳೆ. ಭಯಾವಹಳೂ ಆಗಿದ್ದಾಳೆ. ಆದರೆ

ಇವರೆಲ್ಲರೂ ತೋಷದಲ್ಲಿ ಪರಿವರ್ತಗೊಂಡು **ಮಹಾಲಕ್ಷ್ಮಿ**ಯಲ್ಲಿ ಸಾರೂಪ್ಯ ಪಡೆದುಕೊಳ್ಳುತ್ತಾರೆ. ಅದಕ್ಕಾಗಿಯೇ ಇವಳು ದಿವ್ಯತ್ವದ ಮಾದಕಮಯ ಮೋಹಪೂರಿತ ಮಧುರತೆಯನ್ನು ಧಾರಾಕಾರಗೊಳಿಸುತ್ತಾಳೆ. ಅವಳಿಗೆ ಅತ್ಯಂತ ಆತ್ಮೀಯವಾಗುವಷ್ಟು ಸಾಮೀಪ್ಯಗಳಿಸಿಕೊಳ್ಳುವದೇ ಅತ್ಯಂತ ಪ್ರಮುಖವಾದ ವಿಷಯವಾಗಿದೆ. ಅವಳನ್ನು ಹೃತ್ಪೂರ್ವಕವಾಗಿಯೇ ಅನುಭಾವಿಸಿಕೊಳ್ಳುವದೂ ಒಂದು ಚಿತ್ತಾಕರ್ಷಕ ಹಾಗೂ ಮನಮೋಹಕವಾದ ಅಸ್ತಿತ್ವವಾಗಿದೆ. ಕೃಪೆ ಮತ್ತು ಸೌಂದರ್ಯಗಳು ಹಾಗೂ ಮಾರ್ದವತೆಗಳು, ಸೂರ್ಯನಿಂದ ಪ್ರಜ್ವಲಿಸುತ್ತಿರುವ ಕಿರಣಗಳಂತೆಯೇ ಪ್ರಶಾಂತವಾಗಿಯೇ ಆಗಮಿಸುವ ಧಾರೆಗಳಾಗಿವೆ. ಯಾವಾಗ ಯಾವಾಗ ಅವಳು ತನ್ನ ದೃಷ್ಟಿಯನ್ನು ಹರಿಸುತ್ತಾಳೆಯೋ, ಮತ್ತು ಯಾವಾಗ ತನ್ನ ಮಂದಸ್ಮಿತದ ಮೂಲಕ ಪ್ರೇಮವನ್ನು ನೀಡುತ್ತಾಳೆಯೋ, ಆಗ, ಆತ್ಮವು ಸಂಪೂರ್ಣವಾಗಿ ಅಲ್ಲಿ ಅಪರಿಮೇಯವಾಗಿರುವ ತೋಷದ ಆಂತರ್ಯದಲ್ಲಿ ಲೀನಗೊಂಡು ವಶವರ್ತಿಯಾಗುತ್ತದೆ. ಅವಳ ಹಸ್ತ ಸ್ಪರ್ಶವು ಚುಂಬಕದ ಸ್ವರೂಪದ್ದು, ಅವಳ ಆ ಗೂಢ ಹಾಗೂ ಮಾರ್ದವದ ಪ್ರಭಾವಗಳು (ಕೃಪೆಗಳು) ಮನಸ್ಸನ್ನು, ಜೀವನವನ್ನೂ, ದೇಹವನ್ನೂ ಪರಿಶುದ್ಧಗೊಳಿಸುತ್ತದೆ. ಎಲ್ಲೆಲ್ಲಿ ಅವಳ ಪಾದದ ಸ್ಪರ್ಶವಾಗುತ್ತದೆಯೋ, ಅಲ್ಲೆಲ್ಲವೂ ಆನಂದವು ಚಿಲುಮೆಯಿಂದ ಚಿಮ್ಮುವಂತೆ ಉಕ್ಕುತ್ತದೆ.

ಅದೂ ಅಲ್ಲದೇ, ಈ ಸುನಾದಪೂರಿತ ಶಕ್ತಿಯನ್ನು ಸಂಪರ್ಕಿಸುವದು ಅಷ್ಟೊಂದು ಸುಲಭ ಸಾಧ್ಯವೇನಲ್ಲ. ಅಲ್ಲದೇ ಅವಳ ಉಪಸ್ಥಿತಿಯನ್ನು ಪಡೆಯುವದೂ ಸಹಿತ ಅಷ್ಟೊಂದು ಸುಲಭವಲ್ಲ. ಮನಸ್ಸು ಮತ್ತು ಆತ್ಮದ ಸೌಷಮ್ಯತೆ ಹಾಗೂ ಸೌಂದರ್ಯಗಳು, ಚಿಂತನದ ಮತ್ತು ಅನುಭವಗಳ ಸೌಷಮ್ಯತೆ ಹಾಗೂ ಸೌಂದರ್ಯಗಳು, ಬಾಹ್ಯದ ಎಲ್ಲ ಚಟುವಟಿಕೆಗಳ ಮತ್ತು ಚಲನವಲನಗಳ ಸೌಷಮ್ಯತೆ ಮತ್ತು ಸೌಂದರ್ಯಗಳು, ಜೀವನದ ಹಾಗೂ ವಾತಾವರಣದ ಸೌಷಮ್ಯತೆ ಹಾಗೂ ಸೌಂದರ್ಯಗಳು ಇವೆಲ್ಲವೂ ಮಹಾಶಕ್ತಿಯು ಬಯಸುವ ಬೇಡಿಕೆಗಳಾಗಿವೆ.

ಎಲ್ಲೆಲ್ಲಿ ರಹಸ್ಯಮಯ–ಜಗತ್ತಿನ–ತೋಷದ ನಾದಗಳಿಗೆ ಆತ್ಮೀಯತೆಯು ಇರುತ್ತದೆಯೋ, ಹಾಗೂ ನಿತ್ಯಸೌಂದರ್ಯಕ್ಕೆ ಎಲ್ಲಿ ಈ ರೀತಿಯ ಪ್ರತಿಸ್ಪಂದನಗಳು ಇರುತ್ತವೆಯೋ, ವಿಜಯಗಳಿಗೆ ಬೇಕಾದ ಸಂಘಟನಾತ್ಮಕವಾದ ಐಕ್ಯತೆಗೆ ಹಾಗೂ ಸಂತೋಷದ ಸುಲಲಿತ ಸಲಿಲಕ್ಕೆ ಯಾವ ಜೀವ(ನ)ಗಳು ಈ ದಿವ್ಯತ್ವದೆಡೆಗೆ

ಸಾಗುತ್ತವೆಯೋ ಅಂತಹ ಎಲ್ಲ ಸಂದರ್ಭಗಳಲ್ಲಿಯೂ, ವಾತಾವರಣದಲ್ಲಿ ಅವಳು ಅದರೊಡನೆ ಸಂಯೋಗಗೊಳ್ಳಲು ಸಮ್ಮತಿಸುತ್ತಾಳೆ.

ಆದರೆ ಎಲ್ಲಿ ಎಲ್ಲವೂ ಕುರೂಪಮಯವಾಗಿದೆಯೋ, ಸಂಕುಚಿತತೆಯಿಂದ ಕೂಡಿದೆಯೋ, ಹಾಗೂ ತಳದಲ್ಲಿಯೇ ಉಳಿದಿದೆಯೋ, ಅಂತಹ ಎಲ್ಲವೂ (ಬಲಹೀನವಾಗಿ) ಬಡವಾಗಿ, ದೀನತ್ವದಲ್ಲಿ ಹಾಗೂ ಮಲಿನತೆಯಲ್ಲಿ, ಅತ್ಯಂತ ಕ್ರೂರತೆಯಲ್ಲಿ, ನಿಕೃಷ್ಟತೆಯಲ್ಲಿ ಪ್ರಕ್ಷಿಪ್ತಗೊಂಡಿರುತ್ತವೆ. ಆದರೆ ಪ್ರೇಮ ಮತ್ತು ಸೌಂದರ್ಯಗಳು ಎಲ್ಲಿ ಇಲ್ಲವೋ ಅಥವಾ ಯಾವುದು ಸ್ಥೂಲಗೊಳ್ಳಲು ಸಿದ್ಧವಿಲ್ಲವೋ, ಅಲ್ಲಿ ಅವಳು (ಮಹಾಲಕ್ಷ್ಮೀ) ಆಗಮಿಸುವದೇ ಇಲ್ಲ. ಎಲ್ಲಿ ಇವುಗಳೆಲ್ಲ ಮಿಶ್ರಣಗೊಂಡು ಸಾರೂಪ್ಯವನ್ನು ಹಾಗೂ ಅವಶ್ಯವಾಗಿರುವ ಆಕಾರಗಳನ್ನು ಕಳೆದುಕೊಂಡಿವೆಯೋ ಅಲ್ಲಿಂದ ಅವಳು ಶೀಘ್ರದಲ್ಲಿಯೇ ವಿಮುಖಳಾಗಿ ಹೊರಟು ಹೋಗುತ್ತಾಳೆ. ಅಥವಾ ತನ್ನ ಸಮೃದ್ಧತೆಯನ್ನು ಧಾರೆ ಎರೆಯಲು ಕಳಕಳಿ ಹೊಂದುವದಿಲ್ಲ. ಒಂದು ವೇಳೆ ಮನುಕುಲದ ಹೃದಯಗಳಲ್ಲಿ ಕೇವಲ ಸ್ವಾರ್ಥ ಹಾಗೂ ದ್ವೇಷ ಮತ್ತು ಅಸೂಯೆಗಳು ಜೊತೆಗೆ ದುರ್ಬುದ್ಧಿ ಹಾಗೂ ವೈರತ್ವ, ಕಲಹಗಳು ತುಂಬಿಕೊಂಡಿರುವ ಹಂತದಲ್ಲಿ, ಅವಳು (ಮಹಾಲಕ್ಷ್ಮೀಯು) ಅಲ್ಲಿಯೇ ಅವಳನ್ನೇ ಕಾಣುವಂತಹ ಸ್ಥಿತಿ ಇದ್ದಲ್ಲಿ, ವಿಶ್ವಾಸಭಂಗ, ದ್ವೇಷ ಮತ್ತು ಅಸೂಯೆಗಳು, ಅವಿಧೇಯತೆಗಳು ಒಟ್ಟಾಗಿ, ಈ ಪವಿತ್ರ ಸಂದರ್ಭದಲ್ಲಿ ಮಿಶ್ರಣಗೊಂಡಲ್ಲಿ, ಇವುಗಳಿಗೆ ಮತ್ತೆ ಜೊತೆಯಾಗಿ ಲೌಕಿಕ–ರಾಗಗಳೇ ಸಾಂದ್ರೀಕೃತವಾಗಿ–ಘನಗೊಂಡು, ಪರಿವರ್ತನೆಗೊಳ್ಳುವ ಸಲುವಾಗಿ ಅವಶ್ಯವಿದ್ದ ಸಮರ್ಪಣೆಯನ್ನು ಅವನತಿಗೊಳಿಸುತ್ತಿದ್ದಲ್ಲಿ, ಅಂತಹ ಹೃದಯಗಳಲ್ಲಿ ಈ ಕೃಪಾಪೂರ್ಣ ಹಾಗೂ ಸೌಂದರ್ಯದ ಅಧಿದೇವತೆಯಾದ ಮಹಾಲಕ್ಷ್ಮೀಯು ಅಲ್ಲಿ ವಾಸ ಮಾಡುವದಿಲ್ಲ.

ಒಂದು ದಿವ್ಯತ್ವದ ತಿರಸ್ಕಾರವೇ ಅವಳನ್ನು ಆವರಿಸಿ, ಅವಳು ಆ ಸ್ಥಳದಿಂದ ದೂರವೇ ಉಳಿದು ಬಿಡುತ್ತಾಳೆ. ಅವಳು ಏಕಾಕಿಯಾಗಿ ಅವುಗಳನ್ನು ಅನ್ವಯಿಸುವದೂ ಇಲ್ಲ. ಅನುಮತಿಸುವದೂ ಇಲ್ಲ. ವಿರೋಧಿಸುವದೂ ಇಲ್ಲ. ಅಥವಾ ಅವಳ ಮುಖವನ್ನು (ಉಪಸ್ಥಿತಿಯನ್ನು) ಮುಚ್ಚಿಕೊಂಡ ಅವಳು ಈ ರೀತಿಯ ಯಾತನಾಮಯ (ಕಠೋರ), ವಿಷಪೂರಿತ ಭೂತದ ಅಂಶಗಳಿರುವ ಪ್ರಸಂಗಗಳನ್ನು ಅಷ್ಟೇ ಶೀಘ್ರವಾಗಿಯೇ ತಿರಸ್ಕರಿಸುತ್ತಾಳೆ ಹೀಗಾಗಿ ಅವಳು

ಸಂತೋಷದಾಯಕ ಪ್ರಭಾವವನ್ನು ಕಾಣಲೆಳಸುವ ಸ್ಥಿತಿಯು ಅಲ್ಲಿಂದ ಮಾಯವಾಗಿ ಬಿಡುತ್ತದೆ. ಆದರೆ ಅದೇ ಸಮಯದಲ್ಲಿ ಇಂತಹ ಸಂತೋಷಪ್ರದಾಯಕವಾದ ಅಂಶಗಳು ಘಟಿಸುತ್ತಿರುವ ಎಡೆಗೆ ಅವಳು ತಕ್ಷಣವೇ ತನ್ನ ಉಪಸ್ಥಿತಿಯನ್ನು ತೋರಲು ಆಗಮಿಸುತ್ತಾಳೆ. ವೈರಾಗ್ಯಪೂರ್ಣ ಶೂನ್ಯತೆ ಮತ್ತು ರೂಕ್ಷವಾಗಿರುವ ಕಠಿಣತೆಗಳು ಎಂದಿಗೂ ಅವಳ ಸಂತೋಷವನ್ನು ಹೆಚ್ಚಿಸುವದಿಲ್ಲ. ಅಲ್ಲದೇ ಹೃದಯದ ಸಹಜ ಭಾವನೆಗಳನ್ನು ನಿಗ್ರಹಿಸುವದಕ್ಕಾಗಿಯೇ ಮತ್ತು ಆತ್ಮನಿಗ್ರಹದ ಸಂಕೀರ್ಣತೆಯಲ್ಲಾಗಲಿ ಹಾಗೂ ಜೀವನದ ಸೌಂದರ್ಯರಹಿತದ ಕ್ಷಣಗಳಲ್ಲಾಗಲಿ, ಒಟ್ಟಿನಲ್ಲಿ ಇಂತಹ ಪ್ರಸಂಗವಿದ್ದಲ್ಲಿ ಅವಳು ಅಲ್ಲಿ ಕಾಣಲು ಇಚ್ಛಿಸುವದಿಲ್ಲ.

ಹೀಗಾಗಿ ಪ್ರೇಮ ಮತ್ತು ಸೌಂದರ್ಯದ ಮೂಲಕವೇ ಅವಳು ಮಾನವನಿಗೆ ಲಭ್ಯವಿದ್ದು, ಈ ಅನುಭವವನ್ನೇ ದೈವತ್ವದ ಹಂತಕ್ಕೆ ಅರೋಹಣಗೊಳಿಸುವ ಹೊಣೆಗಾರಿಕೆಯ ನೊಗವನ್ನು ಅವಳು ಮಾನವನ ಹೆಗಲಿಗೇರಿಸುತ್ತಾಳೆ. ಜೀವನವು ಅವಳ ಪರಮೋಚ್ಚ ಸೃಷ್ಟಿಯಲ್ಲಿಯೇ ಸಮೃದ್ಧಶೀಲ ಕಾರ್ಯತತ್ಪರತೆಯಲ್ಲಿ ಅಲೌಕಿಕವಾದ ಕಲೆಯಲ್ಲಿ ಮತ್ತು ಅಸ್ತಿತ್ವದಲ್ಲಿರುವದೆಲ್ಲವೂ ಒಂದು ಪವಿತ್ರಮಯ ಕಾವ್ಯದ ರೀತಿಯಲ್ಲಿ ಪ್ರಕಾಶನಗೊಳ್ಳುತ್ತದೆ. ಜಗತ್ತಿನ ಶ್ರೀಮಂತಿಕೆಯನ್ನೆಲ್ಲ ಒಟ್ಟುಗೂಡಿಸಿ, ಆ ಪರಮೋಚ್ಚದ ಆದೇಶದ ಪ್ರಕಾರ ಆ ದಿಸೆಯತ್ತ ಕೇಂದ್ರೀಕರಿಸಲು ಮತ್ತು ಅತ್ಯಂತ ಸರಳಾತಿಸರಳವಾದ ಅತೀ ಸಾಮಾನ್ಯವಾಗಿರುವ ವಸ್ತು–ವಿಷಯಗಳನ್ನೂ ಸಹಿತ ಅವಳ ಪ್ರಜ್ಞೆಯೊಡನೆ ಮೇಳೈಸಿಕೊಂಡು, ಅವಳಾತ್ಮದುಸಿರಿನೊಡನೆ ಏಕತ್ವಗೊಳಿಸಿಕೊಂಡು ಅವಳು ಆಸರೆ ನೀಡುತ್ತಾಳೆ. ಅವಳು ಹೃದಯಪೂರ್ವಕವಾಗಿಯೇ ಒಪ್ಪಿಕೊಂಡು ಹರಸಿ, ವಿಕಸನಗೊಂಡ ಅಲ್ಲಿನ ದೈವೀ ಸೌಂದರ್ಯದ ಅದ್ಭುತದ ಗೂಢತೆಗಳನ್ನು, ಹಾಗೂ ಯಾವುದು ಸರ್ವಸ್ವವನ್ನೂ, ಜ್ಞಾನವನ್ನೂ ಆವರಿಸಿಕೊಳ್ಳಬಲ್ಲುದೋ ಅದೇ ಅತ್ಯುನ್ನತವಾದ ಆಕರ್ಷಣೆಯಲ್ಲಿಯೇ ಆಗಮಿಸುವ ಭಕ್ತಿಯಾಗಿರುತ್ತದೆ. ಇದು ಸಾಮರ್ಥ್ಯವನ್ನೂ ಕಲಿಸುತ್ತದೆ. ಯಾವುದು ಮಹಾಬಲದ ಮೂಲಕ ಸೌಷಮ್ಯಪೂರ್ವಕವಾದ ಕ್ರಿಯೆಗಳನ್ನೂ ಲೀಲೆಗಳನ್ನೂ ಸುಸಂಗತವಾಗಿ ನಾದಮಯದಿಂದ ಘಟಿಸುವಂತೆ ಮಾಡುತ್ತಾಳೆ, ಈ ಎಲ್ಲ ಮಾನಕಗಳಲ್ಲಿ ಪರಿಪೂರ್ಣತೆಯಲ್ಲಿ ಎರಕ ಹೊಯ್ಯುತ್ತಾ ಈ ಸೌಂದರ್ಯವು ಸದಾ ಕಾಲದಲ್ಲೂ ಉತ್ಸಾಹದಿಂದ ಇರುವಂತೆ ಮಾಡುತ್ತಾಳೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/21–22**

## ಮಹಾಸರಸ್ವತೀ

ಶ್ರೀಮಾತೆಯ ಕ್ರಿಯಾಶಕ್ತಿಯೇ **ಮಹಾಸರಸ್ವತೀ** ಆಗಿದ್ದಾಳೆ. ಅಲ್ಲದೇ ಅವಳ ಪರಿಪೂರ್ಣತೆಯ ಹಾಗೂ ನಿಯತಿಯೂ ಆಗಿದೆ. ಇವಳು ಶ್ರೀಮಾತೆಯ ನಾಲ್ಕು ಅಂಶಗಳಲ್ಲಿ ಅತ್ಯಂತ ಕಿರಿಯಳು. ಅನುಷ್ಠಾನಗೊಳಿಸುವ ಕ್ರಿಯೆಯಲ್ಲಿ ಈ **ಸರಸ್ವತಿಯು** ಅತ್ಯಂತ ಕುಶಲಿಯಾಗಿದ್ದಾಳೆ. ಅದಕ್ಕಿಂತ ಹೆಚ್ಚಾಗಿ ಇವಳು ಈ ಪ್ರಕೃತಿಯ ಭೌತಿಕ ಅಂಶಕ್ಕೆ ಅತ್ಯಂತ ಆಪ್ತತೆಯನ್ನು ಹೊಂದಿದ್ದಾಳೆ.

**ಮಾಹೇಶ್ವರಿಯು** ಜಗತ್ತಿನ ಅತಿ ವಿಶಾಲವಾದ ಹಾಗೂ ವೈಶ್ವಿಕ ಶಕ್ತಿಗಳ (ಬಲಗಳ) ಜೊತೆಗೆ ಇದ್ದರೆ,

**ಮಹಾಕಾಳಿಯು** ಅವುಗಳ ಬಲಗಳನ್ನು ಹಾಗೂ ಸಂಚಲನಗಳನ್ನು ಸಂವೇಗಗೊಳಿಸುತ್ತಿದ್ದರೆ,

**ಮಹಾಲಕ್ಷ್ಮಿಯು** ಅವುಗಳ ನಾದಮಯತೆಯನ್ನು ಹಾಗೂ ಮಾನಕಗಳನ್ನು ಶೋಧಿಸುತ್ತಿದ್ದರೆ, ಇಲ್ಲಿ

**ಮಹಾಸರಸ್ವತಿಯು** ಕಾರ್ಯಕರಣಗೊಳ್ಳುತ್ತಿರುವ ಹಾಗೂ ಸಂಘಟನಾತ್ಮಕ–ವಾಗುತ್ತಿರುವ ಈ ಎಲ್ಲ ವಿವರಗಳನ್ನೂ, ಅವುಗಳ ಮಧ್ಯದ ಸಂಪರ್ಕ ಸಂಬಂಧಗಳ ಅಂಶಗಳನ್ನು ಹಾಗೂ ಬಲಗಳ ಪರಿಣಾಮಕಾರೀ ಹೊಂದಾಣಿಕೆಗಳನ್ನು ಮತ್ತು ಅಧಃಪತನಗೊಳ್ಳದ ನಿಖರ ನಿರ್ದಿಷ್ಟತೆಯ ಫಲಿತಾಂಶಗಳನ್ನು ಪಡೆಯುವ ಸಲುವಾಗಿನ ವಿವರಗಳನ್ನು ಗಮನಿಸುವ ಸರ್ವಾಧ್ಯಕ್ಷಳಾಗಿದ್ದಾಳೆ. ವಿಜ್ಞಾನ ಮತ್ತು ಕರಕುಶಲತೆ ಹಾಗೂ ವಸ್ತುಗಳ ಪಾರಿಭಾಷಿಕ ತಾಂತ್ರಿಕತೆಗಳು **ಮಹಾಸರಸ್ವತಿಯ** ಸಾಮ್ರಾಜ್ಯವಾಗಿವೆ. ಇವಳು ಯಾವಾಗಲೂ ತನ್ನದೇ ಸ್ವಭಾವದಲ್ಲಿ ಇವುಗಳನ್ನು ಹೊಂದಿದ್ದು, ಅವಳು ಯಾರನ್ನು ಆತ್ಮೀಯತೆಯಿಂದ ಆಯ್ಕೆ ಮಾಡಿಕೊಳ್ಳುತ್ತಾಳೆಯೋ, ಯಾರು ಸೂಕ್ಷ್ಮತೆಯಲ್ಲಿ ಹಾಗೂ ಸಹನೆಯಿಂದ ಇರುತ್ತಾರೆಯೋ, ಪ್ರಜ್ಞಾಪೂರ್ವಕವಾದ ಮನಸ್ಸಿನಿಂದ ನಿಖರತೆಯತ್ತಲೇ ಪೂರ್ಣ ಕರ್ತೃತ್ವ ಶಕ್ತಿಯಿಂದ ಸಾಗುತ್ತಾರೆಯೋ, ಅದರಲ್ಲೂ ಪರಿಪಕ್ವವಾದ ಶಕ್ತಿಯ ಕುರಿತು ವಿವೇಚನಾಪೂರ್ಣ ದೃಷ್ಟಿಕೋನವನ್ನು ಹೊಂದಿರುತ್ತಾರೆಯೋ, ಅವರಿಗೆ ಮಾತ್ರ ತನ್ನ ಕೃಪೆಯನ್ನು ಎರೆಯುತ್ತಾಳೆ. ಇಂತಹ ಕೃಪೆಯು ಅತ್ಯಂತ ಸಾಮರ್ಥ್ಯಶಾಲಿ–ಯಾಗಿದ್ದು, ಅದು ಎಂದಿಗೂ ನಿವೃತ್ತಿಯನ್ನು ಬಯಸುವದಿಲ್ಲ. ಅತ್ಯಂತ ಕಾಳಜೀಪೂರ್ವಕ ಹಾಗೂ ಸಕ್ಷಮತೆಯನ್ನು ಹೊಂದಿದ ಕಟ್ಟಡ ರಚನೆಯಾಗಲಿ,

ವ್ಯವಸ್ಥಾಪನಾ ಕಾರ್ಯವಾಗಲಿ, ಆಡಳಿತಾತ್ಮಕ ವಿಷಯವಾಗಲಿ, ಯಂತ್ರ–ತಂತ್ರ ಶಿಲ್ಪದಲ್ಲಾಗಲಿ, ಕಲಾ ಪ್ರದರ್ಶನದಲ್ಲಾಗಲಿ ಮತ್ತು ಈ ರೀತಿ ಹಲವು ವಿಧದಲ್ಲಿ ಈ ಜಗತ್ತು ರೂಪಣೆ ಹೊಂದುವಂತೆಯೇ ಸೃಷ್ಟಿಸಲ್ಪಟ್ಟಿದೆ. ಯಾವಾಗ ಇವಳು ರೂಪಾಂತರಣಕ್ಕೆ ಸಿದ್ಧಳಾಗಿ, ಪ್ರಕೃತಿಯ (ಸಹಜ ಸ್ವಭಾವದ) ನವೀನ ಸಂರಚನೆಯನ್ನು ಬಯಸುತ್ತಾಳೆಯೋ ಆಗ ಅವಳ ಆ ಕ್ರಿಯೆಯು ಅಂತಹ ಪರಿಶ್ರಮದಲ್ಲಿಯೇ ಇರುತ್ತದೆ. ಇದರ ಸೂಕ್ಷ್ಮತೆಯೂ ಸಹಿತ ನಮ್ಮ ಉತ್ಕಂಠಿತಗೊಂಡ, ಶೀಘ್ರ ಫಲಿತಾಂಶ ಬಯಸುವ ಉತ್ಸುಕತೆಯ ತಹತಹಿಕೆಗೆ ಇವೆಲ್ಲವೂ ಅತ್ಯಂತ ನಿಧಾನ ಗತಿಯಲ್ಲಿ, ಅದೂ ಅನಂತಾನಂತದಲ್ಲಿ ಘಟಿಸುತ್ತಿರುವ ವಿಷಯದಂತೆ ಕಾಣುತ್ತದೆ. ಆದರೆ ಇದು ಸಮಗ್ರತೆಯಿಂದ ಕೂಡಿದ್ದು, ಸ್ಥಿರತೆಯಿಂದ ಇದ್ದು, ಯಾವುದೇ ಏರಿಳಿತಗಳು ಇಲ್ಲಿ ಇರುವದಿಲ್ಲ.

ಯಾವುದು ಅವಳಿಚ್ಛೆಯಂತೆ ಅವಳಲ್ಲಿ ಕಾರ್ಯತತ್ಪರತೆಗೆ ತೊಡಗಿ–ಕೊಳ್ಳುತ್ತದೆಯೋ ಅದು ಅತ್ಯಂತ ಋಜು ಸ್ವಭಾವದ್ದೇ ಆಗಿರುತ್ತದೆ. ಎಂದಿಗೂ ಜಡಗೊಳ್ಳುವದಿಲ್ಲ. ಯಾವಾಗಲೂ ಅವಿಶ್ರಾಂತವಾಗಿಯೇ ಕಾರ್ಯತತ್ಪರತೆಯಲ್ಲಿ ಇರುತ್ತದೆ. ಈ ರೀತಿಯಾಗಿಯೇ ಅವಳು ನಮ್ಮನ್ನು ಹರಸುವದರ ಮೂಲಕ, ಅವಳು ಅತ್ಯಂತ ಸೂಕ್ಷ್ಮಾತಿಸೂಕ್ಷ್ಮ ವಿಷಯಗಳನ್ನೂ ಗಮನಿಸುತ್ತಾ ಹಾಗೂ ಅವುಗಳನ್ನು ಸ್ಪರ್ಶಿಸುತ್ತಾ, ಪ್ರತಿಕ್ಷಣವೂ ತಪ್ಪುಗಳನ್ನು ಪರಿಷ್ಕರಿಸುತ್ತಾ, ಕಂದಕಗಳು ಬೀಳದ ಹಾಗೆ, ತಿರುಚಿಕೊಳ್ಳದ ಹಾಗೆ ಅಥವಾ ಅಪರಿಪೂರ್ಣವಾಗಿಯೇ ಉಳಿಯದ ಹಾಗೆ ಅವುಗಳೆಲ್ಲವನ್ನೂ ಪರಿಗಣಿಸಿ, ಸಮಯೋಚಿತವಾಗಿ ಸಮತೋಲನಗೊಳಿಸಿ ನಿಖರತೆಯತ್ತ ಎಲ್ಲವೂ ಘಟಿಸುವಂತೆ ಮಾಡುತ್ತಾಳೆ. ಅವಳ ದೃಷ್ಟಿಗೆ ಯಾವುದೂ ಕಡಿಮೆಯಲ್ಲ; ಯಾವುದೂ ಅಲ್ಪವೂ ಅಲ್ಲ. ಅದು ಎಷ್ಟೇ ದುರ್ಗಮವಾದ ಅಥವಾ ನಿಗೂಢತೆಯಲ್ಲಿಯೇ ಮುಳುಗಿದ್ದರೂ ಅವಳಿಂದ ತಪ್ಪಿಸಿಕೊಳ್ಳಲು ಸಾಧ್ಯವೇ ಇಲ್ಲ. ಅದಕ್ಕಾಗಿ ಎರಕಗೊಳಿಸುತ್ತ ಮತ್ತೆ ಮತ್ತೆ ಮರುಎರಕಗೊಳಿಸುತ್ತ ಅವಳು ಆ ನಿಗದಿತ ರೂಪವನ್ನು ಪಡೆಯುವವರೆಗೂ, ಪ್ರತಿಯೊಂದು ಭಾಗವೂ ಸಮಗ್ರತೆಯಲ್ಲಿ ಸ್ಪಂದಿಸುವಂತೆ ಮಾಡಲು ಸದಾ ಶ್ರಮಿಸುತ್ತಾಳೆ. ಅದು ನಿಗದಿತವಾದ ಸ್ಥಳದಲ್ಲಿಯೇ ಸ್ಥಿತಗೊಂಡು ನಿಗದಿತಗೊಂಡಿರುವ ಪರಮೋದ್ದೇಶಕ್ಕೆ ಪೂರಕವಾಗಿಯೇ ಹಾಗೂ ಒಟ್ಟಂದದಲ್ಲಿ ಭಾಗವಹಿಸಿ ಫಲಪ್ರದವಾಗುವಂತೆ ಮಾಡುತ್ತಾಳೆ. ಅವಳ ಈ ನಿರಂತರತೆಯ ಮತ್ತು ವಸ್ತುಗಳ ವಿಧಿಬದ್ಧ ವ್ಯವಸ್ಥಾಪನೆಗಳು ಹಾಗೂ ಪುನರ್–ವ್ಯವಸ್ಥಾಪನೆಗಳಲ್ಲಿ ಅವಳ ದೃಷ್ಟಿಕೋನವು

ಏಕಕಾಲಕ್ಕೆ ಸರ್ವ ವಸ್ತುಗಳ ಸರ್ವ ವಿಷಯದ ಮೇಲೆಯೂ ಇರುತ್ತದೆ. ಅವಳ ಅಂತಃಪ್ರಜ್ಞೆಯು ಯಾವುದನ್ನು ಸ್ವೀಕರಿಸಬೇಕು, ಯಾವುದನ್ನು ದೂರವಿಡಬೇಕು ಎನ್ನವುದನ್ನು ನಿರ್ಣಯಿಸುತ್ತದೆ. ಹೀಗಾಗಿ ಯಶಸ್ವಿಯಾಗಿಯೇ ಸೂಕ್ತವಾದ ಅರ್ಹತೆಯುಳ್ಳ ಸಾಧನವನ್ನೇ ಅವಳು ಆಯ್ಕೆ ಮಾಡಿಕೊಳ್ಳುತ್ತಾಳೆ. ಅದು ಸೂಕ್ತ ಸಮಯದಲ್ಲಿ ಮತ್ತೆ ನಿಖರವಾದ ನಿಯಮದಲ್ಲಿಯೇ ರೂಪುಗೊಂಡಿರುತ್ತದೆ.

ನಿಷ್ಕಾಳಜಿ, ತಿರಸ್ಕಾರ, ಆಲಸ್ಯಗಳನ್ನು ಇವಳು ತೊಡೆದು ಹಾಕುತ್ತಾಳೆ. ವಿಚ್ಛಿದ್ರಗೊಳಿಸುವಂತಹ, ದ್ವೇಷಪೂರಿತ ಹಾಗೂ ಅಲ್ಲೋಲಕಲ್ಲೋಲಮಯ ಕಾರ್ಯಗಳನ್ನೂ ಛಿದ್ರಗೊಳಿಸುತ್ತಾಳೆ. ಜಟಿಲತಮದ ಎಲ್ಲವನ್ನೂ ಮತ್ತು ಪ್ರಮಾದಗಳನ್ನೂ, ಸರ್ವ ತಪ್ಪುಗಳನ್ನೂ ಹಾಗೂ ಉಪಕರಣಗಳ ದುರುಪಯೋಗ ಅಲ್ಲದೇ ಪರಿಣಿತರು ಕಾರ್ಯವಿಮುಖರಾಗಿರುವದನ್ನು, ಅಪರಿಪೂರ್ಣತೆಯತ್ತಲೇ ಸಾಗುತ್ತಿರುವವದನ್ನು ಅಪರಾಧೀ ಕೃತ್ಯವೆಂದು ಭಾವಿಸಿ, ಇದು ಅವಳ ಸ್ವಭಾವಕ್ಕೆ ವಿರುದ್ಧವಾದುದೆಂದು ಸ್ವೀಕಾರಾರ್ಹವಲ್ಲವೆಂದು ಅವುಗಳನ್ನು ಹುಡಿಗುಟ್ಟಿಸುತ್ತಾಳೆ.

ಯಾವಾಗ ಅವಳ ಕಾರ್ಯವು ಪೂರ್ಣಗೊಳ್ಳುತ್ತದೆಯೋ, ಆಗ ಯಾವುದೂ ಮರೆತಿರುವದಿಲ್ಲ. ಯಾವ ಭಾಗವೂ ಸಹಿತ ಸೂಕ್ತವಲ್ಲದ ಜಾಗೆಯಲ್ಲಿ ಸ್ಥಿತಗೊಂಡಿರುವದಿಲ್ಲ. ಅಥವಾ ಆ ಭಾಗದಲ್ಲಿ ಅಳವಡಿಸುವದನ್ನೇ ಮರೆತಿರುವ ಸಂಭವವೂ ಇರುವದಿಲ್ಲ. ದೋಷಪೂರಿತ ಸ್ಥಾನದಲ್ಲಿ ಸ್ಥಿತಗೊಳಿಸಿರುವದಿಲ್ಲ. ಎಲ್ಲವೂ ಘನವಾಗಿಯೇ, ನಿಖರವಾಗಿಯೇ ಪೂರ್ಣವಾಗಿರುತ್ತದೆ. ಸರ್ವರೂ ಮೆಚ್ಚುವಂತೆಯೇ ಇರುತ್ತದೆ.

ಪರಿಪೂರ್ಣ ಪಕ್ವತೆಗೆ ಯಾವುದು ಕಡಿಮೆ ಇದ್ದರೂ ಸಹಿತ ಅವಳು ತೃಪ್ತಳಾಗುವದಿಲ್ಲ. ಅದನ್ನು ಎದುರಿಸಲು ಅವಳು ಶತ್ರುತ್ವ ಭಾವವನ್ನೂ ಸಹಿತ ತಾಳಬಲ್ಲಳು. ಅದನ್ನೆ ಎದುರಿಸಲೂ ಸಿದ್ಧಳಾಗಿರುತ್ತಾಳೆ. ಏಕೆಂದರೆ ಇಂತಹ ಶತ್ರುತ್ವವು ಪರಿಪೂರ್ಣತೆಯ ಸೃಷ್ಟಿಗೆ ಅತ್ಯಾವಶ್ಯವಾಗಿರುವ ಸಂಗತಿಯಾಗಿದೆ. ಆದ್ದರಿಂದ ಶ್ರೀಮಾತೆಯ ಸರ್ವಶಕ್ತಿಗಳಲ್ಲಿ ಇವಳು ಮಾತ್ರ ಮನುಕುಲದ ಜೊತೆಗೆ ಅತ್ಯಂತ ಸುದೀರ್ಘವಾದ ತೊಂದರೆಯನ್ನೇ ಎದುರಿಸಬೇಕಾಗಿದೆ. ಏಕೆಂದರೆ, ಮಾನವನು ಸದಾ ಅಪರಿಪೂರ್ಣತೆಯ ಮಾಯೆಯಲ್ಲಿಯೇ ಇರಲು ಯತ್ನಿಸುವವನಾಗಿದ್ದಾನೆ.

ದಯೆ, ಮುಗುಳ್ನಗೆ, ಆತ್ಮೀಯತೆ ಹಾಗೂ ಸಹಕಾರಗಳು ಅಷ್ಟೊಂದು ಸುಲಭದಲ್ಲಿ ಮಾನವನಲ್ಲಿ ಕಾಣಲು ಸಾಧ್ಯವಿಲ್ಲ. ಇವಿಲ್ಲದಿದ್ದರೆ ಅವನ ಬದುಕನ್ನು

ಶ್ರುತಿಬದ್ಧಗೊಳಿಸಲೂ ಸಾಧ್ಯವಿಲ್ಲ. ಅದರಲ್ಲೂ ಹಲವಾರು ಸೋಲಿನ ನಂತರದಲ್ಲಿ ಮಾನವನಲ್ಲಿ ಮೂಡುವ ಹತಾಶೆ, ಅಧೈರ್ಯದಿಂದ ಹೊರತರುವದೂ ಅಷ್ಟು ಸುಲಭದಲ್ಲಿ ಸಾಧ್ಯವಾಗುವದಿಲ್ಲ. ಆದರೆ ಇಂತಹ ಎಲ್ಲ ಸಂದರ್ಭಗಳಲ್ಲಿ ಈ ಶ್ರೀಮಾತೆಯ ಕೃಪಾ ಹಸ್ತಗಳು ನಮ್ಮನ್ನು ಸಂರಕ್ಷಿಸುತ್ತವೆ. ನಮ್ಮ ಪ್ರತಿಯೊಂದು ಹೆಜ್ಜೆಯನ್ನೂ ನಮ್ಮ ಇಚ್ಛೆಯಲ್ಲಿಯೇ ಏಕಾಂಗಿಯಾಗಿ ಸಾಧಿಸುವ ಸಲುವಾಗಿ ಇರುವ ಅಭಿಲಾಷೆಯೊಂದಿಗೆ ಪ್ರಾಮಾಣಿಕರಾಗಿರುವಂತೆ ಹಾಗೂ ನೇರ ಪಥದಲ್ಲಿ ಸಾಗುವಂತೆ ಮಾಡುತ್ತಾಳೆ.

ದ್ವಂದ್ವ ಮನೋಭಾವವನ್ನು ಅವಳು ಎಂದಿಗೂ ಸಹಿಸುವದಿಲ್ಲ. ಕೇವಲ ಮೇಲ್ತೋರಿಕೆಗಾಗಿ ಇರುವ ಸಂಧರ್ಭಗಳನ್ನು ಕಂಡಾಗಲೆಲ್ಲ ಅವಳ ಪ್ರತಿಕಾರವು ತೀಕ್ಷ್ಣವಾಗಿಯೇ ಇರುತ್ತದೆ. ಜೊತೆಗೆ ಅಷ್ಟೇ ನಾಟಕೀಯವಾಗಿರುವಂತೆಯೇ ಇರುತ್ತದೆ.

ಇವಳು ನಮ್ಮ ಬಯಕೆಗಳನ್ನು ಈಡೇರಿಸುವ ಮಾತೆಯಾಗಿದ್ದಾಳೆ. ಕಷ್ಟ ಕಾಲದಲ್ಲಿ ಸಹಾಯಕ್ಕೆ ಬರುವ ಮಿತ್ರನೋಪಾದಿ ಇದ್ದಾಳೆ. ಸದಾ ಸ್ಥಿತಪ್ರಜ್ಞೆಯಲ್ಲಿರುವ ಅಪ್ರತಿಮ ಸಲಹೆಗಾರಳಾಗಿದದ್ದಾಳೆ. ಹಾಗೂ ಜೀವನ ಶಿಲ್ಪಿಯೂ ಆಗಿದ್ದಾಳೇ. ಅಲ್ಲಲ್ಲಿ ದಟ್ಟಯಿಸಿಕೊಂಡು ಬರುವ ಹತಾಶೆಯ, ಭಯದ ಮೋಡಗಳನ್ನು ಅವಳು ತನ್ನ ಕಾಂತಿಯುಕ್ತ ಮಂದಸ್ಮಿತದಲ್ಲಿಯೇ ಚೆದುರಿಸಿ ಬಿಡುತ್ತಾಳೆ. ಯಾವಾಗಲೂ ಸಹಾಯಕ್ಕೆ ಬರುವದನ್ನು ಪದೇಪದೇ ನೆನಪಿಸುತ್ತಾಳೆ. ಆ ಶಾಶ್ವತದ ಸೂರ್ಯೋದಯದ ಕಡೆಗೆ ನಮ್ಮ ದೃಷ್ಟಿಕೋನವನ್ನು ಗುರಿ ಇರಿಸುವಂತೆ ಮಾರ್ಗದರ್ಶನ ಮಾಡುತ್ತಾಳೆ. ಅವಳು ನಿಶ್ಚಿಂತಳು. ಪ್ರಶಾಂತಳು. ಯಾವಾಗಲೂ ನಿರಂತರವಾಗಿರುವ ಆತ್ಮಗತವಾಗಿರುವ ಅಭೀಪ್ಸೆಯಲ್ಲಿಯೇ ತನ್ನನ್ನು ಸ್ಥಿತಗೊಳಿಸಿ–ಕೊಂಡಿದ್ದಾಳೆ. ಈ ಅಭೀಪ್ಸೆಯೂ ನಮ್ಮನ್ನು ಆ ಊರ್ಧ್ವದ ಪರಮೋಚ್ಚ ಭಾವಕ್ಕೆ ಕರೆದುಕೊಂಡು ಹೋಗುವ ಸದಿಚ್ಛೆಯಾಗಿದೆ. ಇಲ್ಲಿಯೇ ಉಳಿದೆಲ್ಲ ಶಕ್ತಿಗಳೂ ಸಹಮತದಿಂದ ಮಹಾಸರಸ್ವತಿಯ ಪರಿಪೂರ್ಣತೆಗೆ ಸಹಕರಿಸುತ್ತವೆ. ಭೌತಿಕದ ಆಧಾರದ ಸಲುವಾಗಿ ಭರವಸೆಯನ್ನೂ, ಆಂತರ್ಯದ ಸಾರವನ್ನು ವಿಶದೀಕರಿಸುವ ಹಾಗೂ ಇಡೀ ವಿನ್ಯಾಸದ ಸವಿವರಗಳನ್ನು ಆನ್ವೇಷಿಸುವ ಹಾಗೂ ರೂಪಣೇಗೊಳಿಸುವ ಶಕ್ತಿ ಇವಳಾಗಿದ್ದಾಳೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/22–23 – ಶ್ರೀ ಅರವಿಂದರು**

# ಹನ್ನೆರಡು ಗುಣಲಕ್ಷಣಗಳು

**– ಅನು: ಡಾ॥ ಬಿ.ಆರ್. ಭೀಡ್, ರಾಯಚೂರು**

ಈ ಹನ್ನೆರಡು ಗುಣಗಳಿಗಾಗಿ ನಾನು ಹುಡುಕಾಡುತ್ತಿದ್ದೆ ಎಂದು ಕಳೆದ ಬಾರಿ ಹೇಳಿದ್ದೆ. (ಶ್ರೀಮಾತೆಯವರು ಒಂದು ಹಾಳೆ ಹೊರತೆಗೆಯುತ್ತಾರೆ) ಅವುಗಳನ್ನು ಯಾರೋ ಹುಡುಕಿ ಕೊಟ್ಟಿದ್ದಾರೆ, ಅವು ಹೀಗಿವೆ.

1) ಪ್ರಾಮಾಣಿಕತೆ 2) ವಿನಮ್ರತೆ 3) ಕೃತಜ್ಞತೆ 4) ತಾಳ್ಮೆ 5) ಅಭೀಪ್ಸೆ 6) ಗ್ರಹಣಶೀಲತೆ 7) ಪ್ರಗತಿ 8) ಧೈರ್ಯ 9) ಒಳ್ಳೆಯತನ 10) ಔದಾರ್ಯ 11) ಸಮಾನತೆ 12) ಶಾಂತಿ.

ಮೊದಲ ಎಂಟು ಗುಣಗಳು ಭಗವಂತನೆಡೆಗಿನ ಒಲವಿಗೆ ಸಂಬಂಧಪಟ್ಟಿದ್ದರೆ ಉಳಿದ ನಾಲ್ಕು ಗುಣಗಳು ಮಾನವೀಯತೆಗೆ ಸಂಬಂಧಪಟ್ಟಿವೆ.

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, ಜನವರಿ 19, 1972**

ಇವುಗಳ ಆಳವಾದ ವೈಶಿಷ್ಟ್ಯಗಳ ಬಗ್ಗೆ ನಾನು ಲೆಮ್ಸೆನ್‌ನಲ್ಲಿ ಇದ್ದಾಗ ತಿಳಿಯಿತು. ನಾನು ಆಗ ಅಧಿಮಾನಸ ಸ್ತರದಲ್ಲಿ ಇದ್ದೆ. ಈ ಬೇರೆಬೇರೆ ಲೋಕಗಳಿಗೆ ಥಿಯಾನ್ ಯಾವ ಯಾವ ಹೆಸರು ಕೊಟ್ಟಿದ್ದ ಎಂಬುದು ನನಗೀಗ ಸರಿಯಾಗಿ ನೆನಪಿಲ್ಲ. ಆದರೆ ಅದು ಶ್ರೀ ಅರವಿಂದರು ಹೇಳುವ ಉನ್ನತವಾದ ಹಾಗೂ ಪ್ರಕಾಶಮಾನವಾದ ಅಧಿಮಾನಸಕ್ಕೆ ಮಾತ್ರ ಖಂಡಿತವಾಗಿ ಸಂವಾದಿಯಾಗಿತ್ತು ಎಂದು ಅನಿಸುತ್ತದೆ. ಅದು ದೇವತೆಗಳ ಸ್ತರಕ್ಕಿಂತ ತುಸು ಮೇಲೆ, ಸ್ವಲ್ಪ ಮೇಲೆ ಇತ್ತು. ಅಷ್ಟೇ ಅಲ್ಲ, ಅದು ಅಧಿಮಾನಸದ ಸೃಷ್ಟಿಯ ಜೊತೆಗೆ ಸಮರಸವಾಗಿತ್ತು. ಅಂದರೆ ದೇವತೆಗಳ ಪ್ರಭಾವದಡಿಯಲ್ಲಿ ಇರುವ ಭೂಮಿಯ ಜೊತೆ ಸಹಭಾಗಿಯಾಗಿತ್ತು. ಅಲ್ಲಿ ಇವೆಲ್ಲವೂ ಜೀವಂತ ಅರ್ಥವನ್ನು ಪ್ರತಿನಿಧಿಸುತ್ತಿರುವಂತೆ ತೋರುವು. – ಇದೇನೂ ಕೇವಲ ಮಾನಸಿಕ ಪರಿಕಲ್ಪನೆ ಅಲ್ಲ, ಜೀವಂತವಾಗಿ ಅರ್ಥೈಸಿಕೊಳ್ಳುವಿಕೆ. – ಆಗ ಶ್ರೀಮತಿ ಥಿಯಾನ್ ನನ್ನನ್ನು ಗುರುತಿಸಿದಳು. ನನ್ನ ತಲೆಯ ಮೇಲೆ ಆಕೆ ಹನ್ನೆರಡು ಮುತ್ತುಗಳ ಕಿರೀಟದಾಕಾರದ ರಚನೆಯನ್ನು ಕಂಡಳು. ಆಕೆ ನನಗೆ ಹೇಳಿದ್ದೇನೆಂದರೆ, "ನೀನು ಸಾಕ್ಷಾತ್ತಾಗಿ ಆ ತತ್ ಆಗಿರುವಿ. ಕೇವಲ ಆ ತತ್ ಮಾತ್ರ ಇದನ್ನು ಹೊಂದಿರಲು ಸಾಧ್ಯ".

**– ಶ್ರೀಮಾತೆ**

## ಪ್ರಾಮಾಣಿಕತೆ

ಮೊಟ್ಟಮೊದಲ ಸಂಗತಿ ಏನೆಂದರೆ, ನಮ್ಮನ್ನು ನಾವು ಮೋಸಗೊಳಿಸಿಕೊಳ್ಳಬಾರದು. ಎಲ್ಲರಿಗೂ ಗೊತ್ತು, ಆ ಭಗವಂತನನ್ನು ಯಾರೂ ಮೋಸಗೊಳಿಸಲಾರರು. ಅತ್ಯಂತ ಚಾಣಾಕ್ಷನಾದ ಅಸುರನೂ ಕೂಡ ಭಗವಂತನನ್ನು ಮೋಸಗೊಳಿಸಲಾರನು. ಆದರೆ ಇದೆಲ್ಲಾ ಗೊತ್ತಿದ್ದೂ, ತನ್ನದೆ – ಬದುಕಿನಲ್ಲಿ, ತನ್ನ ದೈನಂದಿನ ಜೀವನದಲ್ಲಿ, ಮನುಷ್ಯ ತನ್ನನ್ನು ತಾನೇ ಮೋಸಗೊಳಿಸುವುದನ್ನು ನಾವು ಅನೇಕ ಬಾರಿ ಕಾಣುತ್ತೇವೆ. ಮನುಷ್ಯ ತನಗೆ ಗೊತ್ತಿಲ್ಲದೇ ಕೂಡ ಹಾಗೆ ಮಾಡುತ್ತಿರುತ್ತಾನೆ. ಏನೋ ಸಹಜವಾಗಿ ಹಾಗೆ ಮಾಡಿ ಬಿಡುತ್ತಾನೆ. ಆಮೇಲೆ ತಾನು ಮಾಡಿದುದನ್ನು ಸಮರ್ಥಿಕೊಳ್ಳಲು ಅನೇಕ ಕಾರಣಗಳನ್ನು ನೀಡುತ್ತ ಹೋಗುತ್ತಾನೆ. ತನ್ನ ಮಾತು, ತನ್ನ ಕೃತಿ ಎಲ್ಲವನ್ನೂ ಸಮರ್ಥಿಸುತ್ತ ಹೋಗುತ್ತಾನೆ. ಮೊದಮೊದಲು ಇದು ಹೀಗೆಯೇ, ಮೊದಲು ಜಗಳ ಆಡುವುದು, ಆನಂತರ ನನ್ನದೇನೂ ತಪ್ಪಿಲ್ಲ, ಇದೆಲ್ಲ ಅವರದೇ ತಪ್ಪು. ಅವರೇ ಮಾಡಿದ್ದು ಎಂದು ವಾದಿಸುತ್ತಾ ಹೋಗುತ್ತಾರೆ. ನಾನು ಇಲ್ಲಿ ಇಂಥ ಸ್ಪಷ್ಟ ಸಂಗತಿಗಳ ಬಗ್ಗೆ ಹೇಳುತ್ತಿಲ್ಲ, ಕೇವಲ ಸಣ್ಣ, ತೀರ ಸಣ್ಣ ಸಂಗತಿಗಳನ್ನು ಕುರಿತು ಇಲ್ಲಿ ಹೇಳುತ್ತಿದ್ದೇನೆ.

ಒಂದು ಮಗು ಮೊದಲು ಒಂದುಸಲ ಬಾಗಿಲು ತಟ್ಟುತ್ತದೆ, ಆಮೇಲೆ ಕಾಲಿನಿಂದ ಒದ್ದು ನೂಕಿ ತೆರೆಯಲು ಪ್ರಯತ್ನ ಮಾಡುತ್ತದೆ. ಈ ಸಂಗತಿ ಕೂಡ ಅದೇ ರೀತಿಯದು. ಯಾವಾಗಲೂ ತಪ್ಪು ಬೇರೆಯವರದೇ, ಬೇರೆಯವರೇ ತಪ್ಪು ಮಾಡುತ್ತಾರೆ, ತಾನು ಮಾಡುವುದಿಲ್ಲ ಎನ್ನುವ ಮನೋಭಾವ ಇದು. ಇಂತಹ ಮಗುವಿನ ಮನಃಸ್ಥಿತಿಯನ್ನು ನೀವು ದಾಟುತ್ತೀರಿ, ನಿಮಗೆ ಒಂದಿಷ್ಟು ಬುದ್ಧಿ, ತರ್ಕ ಬಂದಿರುತ್ತದೆ, ಆಗಲೂ ಸಹ ನೀವು ಏನುಮಾಡುತ್ತೀರಿ ಅಂದರೆ – "ಅವನು ಹಾಗೆ ಮಾಡದೇ ಇದ್ದಿದ್ದರೆ ನಾನೂ ಹೀಗೆ ಮಾಡುತ್ತಿರಲಿಲ್ಲ" ಎಂದು ಕ್ಷುಲ್ಲಕ ನೆಪಗಳನ್ನು ಹೇಳುತ್ತಾ ಹೋಗುತ್ತೀರಿ. ಆದರೆ ವಾಸ್ತವಿಕತೆಯು ಇದಕ್ಕೆ ವಿರುದ್ಧವಾಗಿಯೂ ಇದ್ದಿರಲು ಸಾಧ್ಯ!

ನಾನು ಇದನ್ನು ನಿಷ್ಠೆ ಅಥವಾ ಪ್ರಾಮಾಣಿಕತೆ ಎಂದು ಕರೆಯುತ್ತೇನೆ. ಈಗ ನೀವು ಬೇರೆ ಯವರ ಜೊತೆಗೆ ಇರುವಿರಿ ಎಂದುಕೊಳ್ಳಿ, ನಿಮ್ಮ ತಕ್ಷಣದ ಪ್ರತಿಕ್ರಿಯೆ ಹೇಗಿರಬೇಕು ಎಂದರೆ, ಬೇರೆಯವರು ಏನೇ ಮಾಡಿದರೂ, ತಪ್ಪೇ ಮಾಡಿದರೂ

ಕೂಡ ನೀವು ಮಾತ್ರ ಸರಿಯಾದುದನ್ನೇ ಮಾಡಬೇಕು. ನಿಮ್ಮ ಜೊತೆಗಿದ್ದವರು ಹಾಗೆ ಮಾಡಲಿಕ್ಕಿಲ್ಲ, ನೀವು ಮಾತ್ರ ಯೋಗ್ಯವಾದದ್ದನ್ನೇ ಮಾಡಬೇಕು. ಯಾರೊಬ್ಬರು ಸಿಟ್ಟಿಗೇಳುವಂತಹ ಸಾಮಾನ್ಯ ಸಂಗತಿಯನ್ನು ತೆಗೆದುಕೊಳ್ಳಿ, ಅವರಿಗೆ ನೋವು ಆಗುವಂತಹ ಮಾತು ಹೇಳುವ ಬದಲು ನೀವು ಏನೂ ಮಾತನಾಡಬೇಡಿ, ಸುಮ್ಮನಿದ್ದುಬಿಡಿ, ಶಾಂತವಾಗಿ ಕುಳಿತುಕೊಂಡುಬಿಡಿ, ನಿಮಗೆ ಆಗ ನಿಜವಾಗಿಯೂ ಸಿಟ್ಟು ಬರುವುದಿಲ್ಲ, ಸಿಟ್ಟಿನ ಸಂಸರ್ಗ ಆಗುವುದೇ ಇಲ್ಲ. ಇಷ್ಟೇ, ಆದರೆ ನೀವು ಮಾಡಬೇಕಾದುದೇನೆಂದರೆ ಹೀಗೆ ಮಾಡುವುದು ಸುಲಭವೋ ಅಲ್ಲವೋ, ಸಾಧ್ಯವೋ ಅಲ್ಲವೋ ಎಂಬುದನ್ನು ನಿಮ್ಮೊಳಗೆ ನೀವೇ ನೋಡಿಕೊಳ್ಳಬೇಕು. ಇದು ಅತಿ ಪ್ರಾಥಮಿಕ ಸಂಗತಿ. ನೀವು ಎಷ್ಟರಮಟ್ಟಿಗೆ ಪ್ರಾಮಾಣಿಕರಾಗಿರುವಿರಿ ಎಂಬುದನ್ನು ತಿಳಿದುಕೊಳ್ಳುವ ಆರಂಭದ ಕ್ರಿಯೆ ಮಾತ್ರ. ಕೆಲವರಂತೂ ಎಲ್ಲಾ ತರಹದ ಸಂಸರ್ಗಗಳಿಗೂ ಒಳಗಾಗುವಂಥವರಿರುತ್ತಾರೆ – ಹಾಸ್ಯಕ್ಕೂ ಹಾಗೆಯೇ ಒಳಗಾಗುತ್ತಾರೆ, ಬೇರೆಯವರು ಮಾಡಿದ ತಪ್ಪುಗಳನ್ನು ತಾವೂ ಮಾಡುತ್ತಾರೆ. ಅಂಥವರ ಬಗ್ಗೆ ನಾನು ಇಲ್ಲಿ ಹೇಳುತ್ತಿಲ್ಲ.

ನಾನು ಹೇಳುವುದೇನೆಂದರೆ, ನಿಮ್ಮನ್ನು ನೀವೇ ತೀಕ್ಷ್ಣವಾಗಿ ಪರಿಶೀಲಿಸಿಕೊಂಡರೆ, ನಿಮ್ಮೊಳಗೆ ಇರುವ ಅನೇಕ ಅಪ್ರಾಮಾಣಿಕ ಅಂಶಗಳು, ನಿಷ್ಠಾರಹಿತ ಭಾಗಗಳು ನಿಮಗೆ ಗೊತ್ತಾಗುತ್ತವೆ. ನೀವು ಪ್ರಾಮಾಣಿಕವಾಗಿ ಮಾಡುತ್ತಿದ್ದರೂ ಅಂಥ ನೂರಾರು ಅಂಶಗಳು ನಿಮ್ಮೊಳಗೆ ಇರುವುದು ನಿಮಗೆ ಗೊತ್ತಾಗುವುದು. ಹಾಗೂ ನಿಜವಾಗಿಯೂ ಪ್ರಾಮಾಣಿಕವಾಗಿರುವುದು ಎಷ್ಟು ಕಠಿಣ ಎಂಬುದು ಅರಿವಾಗುವುದು.

ಪರಿಪೂರ್ಣವಾಗಿ ಪ್ರಾಮಾಣಿಕರಾಗಿರಬೇಕೆಂದರೆ ನಿಮಗೆ ನಿಮ್ಮದೇ ಆದ ಬೇಕು ಬೇಡಗಳಿರಬಾರದು, ಬಯಕೆಗಳಿರಬಾರದು, ಆಕರ್ಷಣೆ ವಿಕರ್ಷಣೆಗಳಿರಬಾರದು, ವೈಯಕ್ತಿಕ ಸಹಾನುಭೂತಿ ಅಸಹನೆ ಇರಬಾರದು, ವಸ್ತುವನ್ನು ಅದು ಇರುವಂತೆ, ವಾಸ್ತವವಾಗಿ, ಇಡಿಯಾಗಿ ಹಾಗೂ ಸಮಗ್ರವಾಗಿ ನೋಡಲು ಬರಬೇಕು. ಆಗ ಎಲ್ಲವೂ ತಮ್ಮ ತಮ್ಮ ಜಾಗೆಯಲ್ಲಿ ಸರಿಯಾಗಿ ಇವೆ ಎನ್ನುವುದು ಗೊತ್ತಾಗುವುದು. ಎಲ್ಲವನ್ನೂ ಒಂದೇ ದೃಷ್ಟಿಯಿಂದ ನೋಡಲು ಬರುವುದು. ಅದು ನಿಜವಾದ ದೃಷ್ಟಿ!

*

ನಿಷ್ಠೆ ಅಥವಾ ಪ್ರಾಮಾಣಿಕತೆ ಸತ್ತೆಯ ಎಲ್ಲಾ ಕ್ರಿಯೆಗಳನ್ನು, ಚಲನೆಗಳನ್ನು ಅತ್ಯಂತ ಉನ್ನತವಾದ ಪ್ರಜ್ಞೆಯ ಸ್ತರಕ್ಕೆ ಹಾಗೂ ಅದಾಗಲೇ ಸಿದ್ಧಿಸಿರುವ ಸಾಕ್ಷಾತ್ಕಾರದ ಮಟ್ಟಕ್ಕೆ ಎತ್ತರಿಸುವುದೇ ಆಗಿದೆ.

ನಿಷ್ಠೆಯು ಅಥವಾ ಪ್ರಾಮಾಣಿಕತೆಯು ಇಡೀ ಸತ್ತೆಯನ್ನು ಅದರ ಎಲ್ಲಾ ಭಾಗಗಳನ್ನು ಕ್ರಿಯೆಗಳನ್ನು ದೈವೀ ಕೇಂದ್ರದ ಸುತ್ತ ಒಟ್ಟುಗೂಡಿಸಿ, ಎಲ್ಲವನ್ನೂ ಸಮನ್ವಯಗೊಳಿಸಿ ಏಕೀಕೃತ ಮಾಡುತ್ತದೆ.

*

ನಿಮ್ಮಲ್ಲಿ ನಿಷ್ಠೆ ಪ್ರಾಮಾಣಿಕತೆ ಇದ್ದರೆ ಖಂಡಿತವಾಗಿಯೂ ಸಹಾಯ ಸಹಕಾರ ದೊರೆಯುವುದು. ಖಂಡಿತವಾಗಿಯೂ ಮಾರ್ಗದರ್ಶನ ಲಭಿಸುವುದು. ದೈವೀ ಅನುಗ್ರಹ ಸದಾ ಇದ್ದೇ ಇರುವುದು. ನೀವು ಬಹುಕಾಲ ಕಾಯಬೇಕಾಗಿಲ್ಲ ದೈವೀ ಪ್ರತಿಕ್ರಿಯೆ ಶೀಘ್ರ ದೊರೆಯುವುದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 5/6; 8/398; 14/65; 3/98**

## ವಿನಮ್ರತೆ

ವಿನಮ್ರತೆಯ ಅವಶ್ಯಕತೆ ಕುರಿತು ಸದಾ ಚರ್ಚೆ ಆಗುತ್ತಲೇ ಇರುತ್ತದೆ, ಆದರೂ ಇದರ ಬಗ್ಗೆ ತಪ್ಪು ಕಲ್ಪನೆ ತಪ್ಪಿದ್ದಲ್ಲ. ಇದನ್ನು ಯಾವಾಗಲೂ ಎಲ್ಲರೂ ಅಪಾರ್ಥ ಮಾಡಿಕೊಳ್ಳುತ್ತಾರೆ, ತಪ್ಪಾದ ರೀತಿಯಲ್ಲಿಯೇ ಬಳಸುತ್ತಾರೆ ಕೂಡಾ. ಸರಿಯಾದ ರೀತಿಯಲ್ಲಿ ಇರುವುದು ಸಾಧ್ಯವಾದರೆ ನೀವು ನಿಜವಾಗಿಯೂ ವಿನಯಶೀಲರಾಗಿರಿ. ಆದರೆ ತಪ್ಪು ರೀತಿಯಲ್ಲಿ ವಿನಯ ತೋರಿಸಬೇಡಿರಿ. ಅದರಿಂದ ಯಾರಿಗೂ ಏನೂ ಉಪಯೋಗವಿಲ್ಲ. ಒಂದು ಸಂಗತಿ ನೆನಪಲ್ಲಿಡಿ, ಒಣ ಜಂಭ ಎನ್ನುವ ಕೆಟ್ಟ ಕಳೆ ಇದೆಯಲ್ಲ ಅದನ್ನು ಕಿತ್ತು ಎಸೆಯಿರಿ. ಅಂದಾಗ ಮಾತ್ರ ನೀವು ಏನನ್ನಾದರೂ ಸಾಧಿಸಿದಂತೆ ಆದೀತು. ಅದು ಎಷ್ಟು ಕಠಿಣ ಎಂಬುದು ನಿಮಗೂ ಗೊತ್ತಿದೆ. ಒಳಗಿಂದೊಳಗೇನೇ ಉಬ್ಬಿಕೊಳ್ಳದೇ (ನಿಮಗೆ ಅರಿವಿದ್ದರೂ ಸಹ) ನಿಮ್ಮ ಅಹಂ ಅಥವಾ ಜಂಭ ತೃಪ್ತಿ ಆಗದ ಹೊರತು ಯಾವ ಒಳ್ಳೆಯ ಕೆಲಸ ಮಾಡುವುದೂ ನಿಮ್ಮಿಂದ ಸಾಧ್ಯವಾಗುವುದಿಲ್ಲ. ಒಂದು ಒಳ್ಳೆಯ ಸಣ್ಣ ಆಲೋಚನೆ ಕೂಡ ನಿಮಗೆ ಬರುವುದಿಲ್ಲ. ನೀವು ಸರಿಯಾಗಿ ಕೆಲಸ ಮಾಡುವುದು ಸಾಧ್ಯವಿಲ್ಲ. ತುಸು ಮಾತ್ರದ

ಪ್ರಗತಿಯೂ ಆಗುವುದಿಲ್ಲ. ಆದ್ದರಿಂದ ನೀವು ನಿಮ್ಮ ಜಂಭವನ್ನು, ಅಹಮಿಕೆಯನ್ನು ಜೋರಾಗಿ ಕುಟ್ಟಿ ಪುಡಿ ಮಾಡಬೇಕು; ಆಮೇಲೆ ಕೂಡ ನೀವು ಪುಡಿ ಮಾಡಿದ ಕಣಗಳೇ ಪುನಃ ಬೆಳೆಯುವ ಸಾಧ್ಯತೆ ಇದೆ. ಆ ಕಸ ಪುನಃ ಪುನಃ ನಿಮ್ಮನ್ನು ವಂಚಿಸುತ್ತ ಬೆಳೆಯಬಹುದು. ನಿಮ್ಮ ಜೀವನವಿಡೀ ಅದನ್ನು ಬೇರುಸಹಿತ ಕಿತ್ತುಹಾಕಲು ನೀವು ಪ್ರಯತ್ನ ಮಾಡುತ್ತಾ ಹೋದರೂ ನಿಮ್ಮ ಕಣ್ಣಿಗೆ ಕಾಣದಂತೆ ಅದು ಸಣ್ಣದಾಗಿ ಬೆಳೆಯುತ್ತ ಹೋಗಬಹುದು. ನೀವೇನೋ ಅದು ಹೋಗಿದೆ ಎಂದು ಭಾವಿಸಿ, ನಮ್ರತೆ ನಟಿಸುತ್ತ "ವೈಯಕ್ತಿಕವಾಗಿ ನಾನು ಅದನ್ನು ಮಾಡಲಿಲ್ಲ, ಭಗವಂತನೇ ಅದನ್ನು ಸಾಧ್ಯವಾಗಿಸಿದ್ದಾನೆ, ಅವನಿಲ್ಲದೆ ಇದು ಸಾಧ್ಯವಿಲ್ಲ, ಅವನಿಲ್ಲದೆ ನಾನೆಷ್ಟರವನು?" ಎಂದು ಹೇಳುತ್ತೀರಿ, ಮರುಕ್ಷಣವೇ ನಿಮಗೆ ಈ ತೆರನಾದ ಆಲೋಚನೆ ಹೊಳೆದದ್ದಕ್ಕೇ ಸಂತೋಷವಾಗಿಬಿಡುತ್ತದೆ, ತೃಪ್ತಿಯಾಗಿ ಬಿಡುತ್ತದೆ (ಇದೂ ಕೂಡ ಜಂಭದ ಲಕ್ಷಣವೇ).

*ಪ್ರಶ್ನೆ: ಹಾಗಾದರೆ, ನಮ್ರತೆಯ ಸರಿಯಾದ ದಾರಿ ಯಾವುದು, ತಪ್ಪು ದಾರಿ ಯಾವುದು?*

ತುಂಬ ಸರಳ, ನೀವು ನಮ್ರತೆಯಿಂದ ಇರಬೇಕು ಎಂದು ಹೇಳಿದಾಕ್ಷಣ ಬೇರೆಯವರ ಎದುರಿನಲ್ಲಿ ನಮ್ರರಾಗಿ ನಡೆದುಕೊಳ್ಳಬೇಕೆಂದು ಅರ್ಥವಲ್ಲ. ಅಂಥ ನಮ್ರತೆ ತಪ್ಪು, ನೀವು ಭಗವಂತನ ಎದುರಲ್ಲಿ ನಮ್ರರಾಗಿರಬೇಕು. ಅಂಥ ನಮ್ರತೆ ಜೀವಂತಿಕೆಯಿಂದ ಕೂಡಿರಬೇಕು. ಆ ಭಗವಂತನ ವಿನಃ ಏನೂ ನಡೆಯುವುದಿಲ್ಲ, ಅವನ ವಿನಃ ಯಾವುದೂ ಅರ್ಥ ಕೂಡ ಆಗುವುದಿಲ್ಲ, ಯಾರು ಎಷ್ಟೇ ಸಮರ್ಥರಾಗಿದ್ದರೂ, ಅಸಾಧಾರಣ ಬುದ್ಧಿಯುಳ್ಳವರಾಗಿದ್ದರೂ ದೈವೀ ಪ್ರಜ್ಞೆಯ ಸಮ್ಮುಖದಲ್ಲಿ ಯಾರೂ ಏನೂ ಅಲ್ಲ ಎಂಬ ಭಾವ ನಿರಂತರ ಜೀವಂತವಾಗಿ ಜಾಗೃತವಾಗಿರಬೇಕು. ಅಂದರೆ ಮಾತ್ರ ನಿಜವಾದ ರೀತಿಯಲ್ಲಿ ಏನನ್ನಾದರೂ ಸ್ವೀಕರಿಸಲು, ಏನನ್ನಾದರೂ ಸಾಧಿಸಲು ಬರುತ್ತದೆ. ಇಂಥ ವಿನಮ್ರ ಮನೋಭಾವವು ಭಗವಂತನಿಗೆ ವಿರೋಧವಾಗಿ ಯಾವ ನೆಪವನ್ನೂ ಒಡ್ಡುವುದಿಲ್ಲ.

*ಪ್ರಶ್ನೆ: ಶ್ರೀಮಾತೆಯವರೇ, ನಾವು ಏನನ್ನಾದರೂ ಮಾಡಿದಾಗ ನಮ್ಮೊಳಗಿನದೇ ಯಾವುದೋ ಒಂದು ಅಂಶವು ತೃಪ್ತಿ ಹೊಂದುತ್ತದೆ, ಆತ್ಮ ಪ್ರಶಂಸೆ ಮಾಡಿಕೊಂಡು ಸಂತಸ ಪಡುತ್ತದೆ. ಈ ಸ್ಥಿತಿ ಎಲ್ಲವನ್ನೂ ಹಾಳುಗೆಡವುತ್ತದೆ. ಇದರಿಂದ ಪಾರಾಗುವುದು ಹೇಗೆ?*

ಓಹ್, ಇದರಿಂದಲೇ ತಿಳಿಯುತ್ತದೆ ಆ ಒಣ ಜಂಭ, ಅಥವಾ ಆತ್ಮ ಪ್ರಶಂಸೆ ಏನು ಮಾಡುತ್ತದೆ ಎಂಬುದು! ಯಾರು ಏನೇ ಮಾಡುತ್ತಿರಲಿ ಅವರ ಒಳಗಿನ ಒಂದು ಅಂಶವು ಅವರು ಮಾಡುವುದನ್ನು ನೋಡುತ್ತಿರುತ್ತದೆ. ಯಾರಿಗೇ ಆಗಲಿ ಗರ್ವ ಅಥವಾ ಹೆಮ್ಮೆ ಅಡರಿಕೊಂಡಿತೆಂದರೆ ಅದು ಅವರ ಪ್ರಯತ್ನದ ಬಹುಪಾಲು ಶಕ್ತಿಯನ್ನು ಕಸಿದುಕೊಂಡು ಬಿಡುತ್ತದೆ. ಅಂತೆಯೇ ಅದು ಕೆಡುತ್ತದೆ. ನಾವು ಮಾಡುವುದನ್ನು ಗಮನಿಸುವುದು ನಮಗೆಲ್ಲ ಸುಮಾರಾಗಿ ಅಭ್ಯಾಸವಾಗಿ ಹೋಗಿದೆ. ಮತ್ತು ಇದು ನಿಜವಾಗಿಯೂ ಅವಶ್ಯಕ ಎಂದು ನಾನೂ ಕೂಡ ಭಾವಿಸುತ್ತೇನೆ. ಆದರೆ ಅತಿ ಮುಖ್ಯವಾದುದೇನೆಂದರೆ ನೀವು ಅತ್ಯಂತ ಪ್ರಾಮಾಣಿಕರಾಗಿರಬೇಕು, ಅತ್ಯಂತ ನಿಷ್ಠಾವಂತರಾಗಿರಬೇಕು, ಸಹಜವಾಗಿ, ಅತ್ಯಂತ ಸಹಜವಾಗಿ ಇರಲು ಪ್ರಯತ್ನಿಸಬೇಕು. ಬರೀ ಗಮನಿಸುತ್ತ, ಪರಿಶೀಲಿಸಿಕೊಳ್ಳುತ್ತ ಇರುವುದಲ್ಲ, ಪರೀಕ್ಷಿಸಿಕೊಳ್ಳುತ್ತಿರಬೇಕು, ಕೆಲಸಲ ಅತಿ ಕಠಿಣ ತೀರ್ಮಾನ ತೆಗೆದುಕೊಳ್ಳುವ ಪ್ರಸಂಗ ಬಂದರೆ ಸಂಪೂರ್ಣ ಸಿದ್ಧರಾಗಿರಬೇಕು. ನಮ್ಮ ಬೆನ್ನು ನಾವೇ ಚಪ್ಪಡಿಸಿಕೊಳ್ಳುವುದು ಅಹಿತವೋ ಇದೂ ಕೂಡ ಅಷ್ಟೇ ಕೆಟ್ಟದ್ದು. ಎರಡೂ ಅಷ್ಟೇ ಅಹಿತಕರ. ತಾನು ಅಭೀಪ್ಸೆ ಪಡುತ್ತಿರುವುದು ಕೂಡ ತನಗೆ ಗೊತ್ತಾಗಬಾರದು. ಹಾಗಿರಬೇಕು. ಅಷ್ಟು ನಿಷ್ಠೆ ಇರಬೇಕು. ತಾನು ಅಭೀಪ್ಸೆಯೇ ಆಗಿಬಿಡಬೇಕು. ತಾನೇ ಅದಾಗಿಬಿಡಬೇಕು.

## ಕೃತಜ್ಞತೆ

ಭಕ್ತಿಗೆ ಅನುರೂಪವಾದ ಇನ್ನೊಂದು ಅಂಶ ಅದರ ಜೊತೆಗೆ ಸದಾ ಇರಲೇಬೇಕು... ಅದು ಭಗವಂತ ಇದ್ದಾನೆ ಎಂಬ ನೈಜವಾದ ಕೃತಜ್ಞತಾ ಭಾವ ಯಾವಾಗಲೂ ಇರಬೇಕು. ನಿಜವಾದ ಕೃತಜ್ಞತೆಯ ಭಾವನೆಯು ನಿಮ್ಮಲ್ಲಿ ಅದ್ಭುತ ಆನಂದವನ್ನು ತುಂಬುವುದು. ಭಗವಂತ ಇದ್ದಾನೆ, ವಿಶ್ವದಲ್ಲಿ ಎಲ್ಲೆಲ್ಲೂ ತುಂಬಿದ್ದಾನೆ, ನಾವು ಎಲ್ಲೆಲ್ಲೂ ಕಾಣುವುದು, ಅನುಭವಿಸುವುದು ಅವನನ್ನೇ, ಭಯಾನಕವೆನ್ನಬಹುದಾದ ಯಾವ ವಿರೋಧಿ ಶಕ್ತಿಯೂ ಅವನಿಗೆದುರಾಗಿ ನಿಲ್ಲಲಾರದು. ಪರಮಾತ್ಮನ ಸಾನಿಧ್ಯದ ದೃಢವಾದ ವಿಶ್ವಾಸವು ನಮಗೆ ಅಪಾರ ಸಂತೋಷ ತರುವುದು. ಯಾವಾಗಲೇ ಆಗಲಿ, ಒಂದೇ ಕ್ಷಣವೇ ಆಗಲಿ, ಆ ಪರಮ ಸತ್ಯದ ಜೊತೆಗೆ ನೇರವಾದ ಅಥವಾ ತುಸು ಅಪ್ರತ್ಯಕ್ಷವಾದರೂ ಅಡ್ಡಿಯಿಲ್ಲ ಅಲ್ಪ ಸಂಬಂಧ ಏರ್ಪಟ್ಟರೆ ಸಾಕು ನಿಮ್ಮ ಹೃದಯವು ತೀವ್ರವಾದ ಅದ್ಭುತವಾದ

ಆನಂದದಿಂದ, ಕೃತಜ್ಞತೆಯಿಂದ ತುಂಬಿ ಹೋಗುವುದು. ಆಗ ಎಲ್ಲಾ ಸಂಗತಿಗಳು ಆಸಕ್ತಿದಾಯಕವಾಗಿಯೇ ತೋರುವುದು.

ಕೃತಜ್ಞತೆ ನೀಡುವ ಆನಂದಕ್ಕೆ ಸರಿಸಮನಾದ ಸಂಗತಿ ಇನ್ನೊಂದಿಲ್ಲ. ಹಕ್ಕಿ ಇಂಪಾಗಿ ಹಾಡುವುದನ್ನು ಕೇಳಿದಾಗ, ಸುಂದರವಾದ ಹೂ ಅರಳುವುದನ್ನು ನೋಡಿದಾಗ, ಚಿಕ್ಕ ಮಗು ನಗುವುದನ್ನು ಕಂಡಾಗ, ಯಾವುದಾದರೂ ಔದಾರ್ಯದ ಕಾರ್ಯವನ್ನು ವೀಕ್ಷಿಸಿದಾಗ, ಸುಂದರವಾದ ವಾಕ್ಯವನ್ನು ಓದಿದಾಗ, ಸೂರ್ಯ ಮುಳುಗುವುದನ್ನು ಕಾಣುತ್ತಿರುವಾಗ ಒಂದು ತೆರನಾದ ಸುಂದರವಾದ ಭಾವ ಮೂಡುವುದು – ತೀವ್ರವಾದ, ಆಳವಾದ ಭಾವ ಉದಯಿಸುವುದು – ವಿಶ್ವವೆಲ್ಲವೂ ಪರಮಾತ್ಮನ ಪ್ರಕಟಣೆ, ವಿಶ್ವದ ಎಲ್ಲ ವಸ್ತು, ಸಂಗತಿಗಳ ಹಿಂದೆ ಪರಾತ್ಪರನಾದ ಪರಮಾತ್ಮ ಇದ್ದಾನೆ ಎಂಬ ತೀವ್ರ ಸಂವೇದನೆ, ಭರವಸೆ ಜಾಗೃತವಾಗುವುದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 8/40**

ಎಲ್ಲೋ ಕೆಲವೇ ಕೆಲವು ಜನರು ಮಾತ್ರ, ತೀರಾ ನಗಣ್ಯ ಎನಿಸುವಷ್ಟು ಕಡಿಮೆ ಜನರು, ಚರ್ಚ್‌ಗಳಿಗೆ, ಗುಡಿಗಳಿಗೆ ನಿಜವಾದ ಧಾರ್ಮಿಕ ಭಾವನೆಯಿಂದ ಹೋಗುತ್ತಾರೆ. ಅವರು ತಮಗಾಗಿಯೇ ಆಗಲಿ ಅಥವಾ ಇನ್ನಾರಿಗಾಗಿಯೋ ಆಗಲಿ ಏನನ್ನೂ ಕೇಳಲು, ಪ್ರಾರ್ಥಿಸಲು ಹೋಗುವುದಿಲ್ಲ. ಬದಲಾಗಿ ಪರಮಾತ್ಮನಿಗೆ ಕೃತಜ್ಞತೆ ಸಲ್ಲಿಸಲು, ತಮ್ಮನ್ನು ತಾವು ಅವನಿಗೆ ಸಮರ್ಪಿಸಿಕೊಳ್ಳಲು ಹೋಗುತ್ತಾರೆ. ಎಲ್ಲೋ ಕೋಟಿಗೊಬ್ಬರು ಹಾಗೆ ಮಾಡುತ್ತಾರೊ ಏನೊ!

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 6/194–95**

ನೀವು ಎಷ್ಟೇ ಅಜ್ಞಾನದಲ್ಲಿ ಇರಲಿ, ಎಷ್ಟೇ ತಪ್ಪು ತಿಳಿದುಕೊಂಡಿರಲಿ, ನಿಮ್ಮ ಅಹಂಕಾರ ಅದರ ವಿರೋಧ ಪ್ರತಿರೋಧ ಏನೇ ಇರಲಿ, ಭಗವಂತನು ನಿಮ್ಮನ್ನು, ಪ್ರತಿಯೊಬ್ಬರನ್ನು ಅತಿ ಸಮೀಪದ ಹಾಗೂ ಸುಲಭವಾದ ದಾರಿಯಲ್ಲಿ ತನ್ನೆಡೆಗೆ ಕರೆದೊಯ್ಯುತ್ತಾನೆ. ನೀವು ಇದನ್ನು ಯಾವ ಕ್ಷಣದಲ್ಲಿಯೂ ಮರೆಯಬಾರದು. ಸದಾ ಕೃತಜ್ಞರಾಗಿರಬೇಕು.

ಕೃತಜ್ಞತೆಯ ಪರಿಶುದ್ಧ ಜ್ವಾಲೆಯು ನಿಮ್ಮ ಹೃದಯಗಳಲ್ಲಿ ನಿರಂತರವಾಗಿ ಪ್ರಜ್ವಲಿಸುತ್ತಿರಬೇಕು. ಅದು ಎಲ್ಲ ಅಹಂಭಾವ, ಅಸ್ಪಷ್ಟತೆ, ಸಂದಿಗ್ಧತೆಗಳನ್ನು

ಕರಗಿಸಿಬಿಡುವಷ್ಟು ಪ್ರಖರವಾಗಿರಬೇಕು. ಪರಮಾತ್ಮನ ಅನುಗ್ರಹವು ಸಾಧಕನನ್ನು ಅವನ ಗಮ್ಯದೆಡೆಗೆ ಕರೆದೊಯ್ಯುವುದು. ಆದ್ದರಿಂದ ಈ ಅನುಗ್ರಹದ ಬಗೆಗೆ ಇರುವ ಕೃತಜ್ಞತೆಯ ಭಾವವು ಎಷ್ಟು ತೀವ್ರವಾಗಿರುವುದೋ, ಆ ಅಗ್ನಿ ಎಷ್ಟು ಪ್ರಖರ–ವಾಗಿರುವುದೋ ಹಾಗೂ ಅನುಗ್ರಹದ ಪ್ರಭಾವ ಮತ್ತು ಪರಿಣಾಮವನ್ನು ಎಷ್ಟು ಕೃತಜ್ಞತೆಯಿಂದ ಸ್ಮರಿಸಲಾಗುವುದೋ ಅಷ್ಟರಮಟ್ಟಿಗೆ ಆ ದಾರಿ ಸಮೀಪದ್ದಾಗುವುದು.

*

... ಎಲ್ಲ ಸಂವೇದನೆಗಳಿಗಿಂತ ಅತ್ಯಂತ ಹೆಚ್ಚು ಆನಂದ ನೀಡುವಂಥದು ಯಾವುದೆಂದರೆ, ಪರಿಶುದ್ಧವಾದ, ತುಸು ಅಹಂಭಾವದಿಂದ ಕೂಡ ಕಲುಷಿತವಾಗಿರದ ಸಂತೋಷವನ್ನು ನೀಡಬಲ್ಲದ್ದು ಯಾವುದೆಂದರೆ, ತಾನೇ ತಾನಾಗಿ ಸಹಜವಾಗಿ ಇರುವ ಕೃತಜ್ಞತೆಯ ಭಾವ.

ಅದು ಅತ್ಯಂತ ವಿಶಿಷ್ಟವಾದುದು. ಅದು ಪ್ರೇಮವಲ್ಲ, ಭಕ್ತಿ ಅಲ್ಲ, ಸಮರ್ಪಣೆ ಅಲ್ಲ, ಅದು ಪೂರ್ಣವಾದ ಆನಂದ, ತುಂಬಿದ ಪರಿಪೂರ್ಣ ಆನಂದ.

ಅದು ಎಲ್ಲದರಿಗಿಂತ ಬೇರೆಯಾದ ವಿಶಿಷ್ಟ ಕಂಪನ ಮತ್ತು ತರಂಗವಾಗಿದೆ. ಅದು ನಿಮ್ಮನ್ನು ವಿಶಾಲಗೊಳಿಸುವುದು. ನಿಮ್ಮಲ್ಲಿ ತುಂಬಿದ ಅನುಭವ ನೀಡುವುದು. ಹಾಗೂ ಆ ಅನುಭವ ಅತ್ಯಂತ ಉತ್ಕಟವಾಗಿರುವುದು.

ಮಾನವ ಪ್ರಜ್ಞೆಗೆ ಸಾಧ್ಯವಿರುವ ಎಲ್ಲ ಚಲನೆಗಳಲ್ಲಿ ನಿಮ್ಮನ್ನು ಅಹಂಭಾವದಿಂದ ಹೊರತರಬಲ್ಲ ಅತ್ಯಂತ ಸಮರ್ಥವಾದ ಹಾಗೂ ನಿಶ್ಚಿತವಾದ ಚಲನೆ ಅಂದರೆ ಇದೇ ಆಗಿದೆ.

ಈ ತರಂಗಾವರ್ತನಗಳಲ್ಲಿ ಪ್ರವೇಶಿಸುವುದು ಸಾಧ್ಯವಾದರೆ ಇವು ಪರಮ ದಿವ್ಯ ಪ್ರೇಮದ ತರಂಗಗಳ ಗುಣಧರ್ಮಗಳನ್ನೇ ಹೊಂದಿವೆ ಎಂಬುದು ತಕ್ಷಣ ಗೊತ್ತಾಗುತ್ತದೆ. ಇದು ನಿಶ್ಚಿತವಾದ ದಿಕ್ಕಿನಲ್ಲಿಯೇ ಸಾಗುವುದು ಎಂದೇನೂ ಇಲ್ಲ, ಇದು ದಿಕ್ಕು, ಪರಿಮಾಣ ಏನೊಂದೂ ಇಲ್ಲದ್ದು. ಪರಿಣಾಮ ಸ್ವರೂಪತಃ ಕೃತಜ್ಞತೆಯ ತರಂಗಗಳು ತುಸು ದೈವೀ ಪ್ರೇಮದ ವರ್ಣಛಾಯೆಯನ್ನೇ ಹೊಂದಿರುವವು.

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, ಡಿಸೆಂಬರ್ 21, 1963**

## ಸಹನೆ

... ಎಲ್ಲಕ್ಕಿಂತ ಅತ್ಯಂತ ಅವಶ್ಯವಾದ ಗುಣವೆಂದರೆ ಸಹನೆ, ತಾಳ್ಮೆ ಮತ್ತು ಅದನ್ನು ಮತ್ತೇನೆಂದು ಕರೆಯುವುದು, – ಅದೊಂದು ಒಳ್ಳೆಯ ಆಂತರಿಕ ಹಾಸ್ಯ, ಅದು ನಿಮ್ಮನ್ನು ನಿರಾಶರಾಗಲು ಬಿಡುವುದಿಲ್ಲ, ದುಃಖಿತರಾಗಲು ಬಿಡುವುದಿಲ್ಲ. ಏನೇ ಕಠಿಣ ಪ್ರಸಂಗಗಳು ಬರಲಿ ಎಲ್ಲವನ್ನೂ ನಗುನಗುತ್ತಲೇ ಎದುರಿಸಲು ಕಲಿಸುವುದು. – ಇದನ್ನು ಚೆನ್ನಾಗಿ ವಿವರಿಸಬಲ್ಲ ಇಂಗ್ಲಿಷ್ ಶಬ್ದವೊಂದಿದೆ – cheerfulness – ಹರ್ಷಚಿತ್ತತೆ. ಇದನ್ನು ನಿಮ್ಮೊಳಗೆ ಕಾಯ್ದುಕೊಳ್ಳಲು ಸಮರ್ಥರಾದರೆ ನೀವು ಅತಿ ಚೆನ್ನಾಗಿ ಹೋರಾಡಬಲ್ಲಿರಿ, ಚೆನ್ನಾಗಿ ಪ್ರತಿರೋಧ ಮಾಡಲು ಸಾಧ್ಯವಾಗುವುದು. ನಿಮ್ಮ ಪ್ರಗತಿಗೆ ತಡೆಯುಂಟುಮಾಡುವ ಎಲ್ಲವನ್ನೂ ಚೆನ್ನಾಗಿ ಎದುರಿಸಬಲ್ಲಿರಿ, ಹೋರಾಡಿ ಗೆಲ್ಲಬಲ್ಲಿರಿ.

*

ನಿಮ್ಮ ಭರವಸೆ, ನಿಮ್ಮ ಖಚಿತತೆ ನೀವೇ ಕಂಡುಕೊಳ್ಳಬೇಕು. ಏನೇ ಪ್ರಸಂಗ ಬರಲಿ ಅದನ್ನು ಕಾಯ್ದುಕೊಳ್ಳಬೇಕು. ಏನೇ ಆಗಲಿ, ಏನೇ ಸಂಭವಿಸಲಿ, ಎಂಥ ಬೆಲೆ ತೆರಬೇಕಾದ ಸಂದರ್ಭ ಬಂದರೂ ಅಡ್ಡಿಯಿಲ್ಲ, ಕೊನೆಯ ತನಕ ಹೋರಾಡುವ ತಾಳ್ಮೆ ಕಳೆದುಕೊಳ್ಳಬಾರದು. ಮಹಾವಿಜಯವೆಂಬುದು ಯಾವಾಗಲೂ ಯಾರು ಹೆಚ್ಚು ಸಹನಶೀಲರಾಗಿರುತ್ತಾರೋ ಅವರಿಗೇ ದಕ್ಕುತ್ತದೆ.

ಎಂಥ ಪ್ರತಿಕೂಲ ಪರಿಸ್ಥಿತಿಗಳಲ್ಲಿಯೂ ಸಹನೆ ಸ್ಥಿರವಾಗಿ ಇರಬೇಕೆಂದರೆ ಆಧಾರ ಮಾತ್ರ ಅತ್ಯಂತ ಗಟ್ಟಿಯಾಗಿರಬೇಕು, ದೃಢವಾಗಿರಬೇಕು. ಅಂಥ ಸುಸ್ಥಿರವಾದ ಆಧಾರವು ದೈವೀ ಸತ್ಯ, ಪರಮೋಚ್ಚ ಸತ್ಯದ ಮೂಲಕ ಮಾತ್ರ ದೊರೆಯಬಲ್ಲದು.

ಅದನ್ನು ಬಿಟ್ಟು ಬೇರೆ ಕಡೆಗೆ ಹುಡುಕುವುದು ನಿರರ್ಥಕ, ಅದೊಂದು ಮಾತ್ರ ಎಂದೆಂದಿಗೂ ಕೈಬಿಡದು.

*

ಕಠಿಣ ಪ್ರಸಂಗ ಬಂದಾಗ ಅಧೈರ್ಯಗೊಳ್ಳದೆ ಇರಲು ಸಾಧ್ಯವಿಲ್ಲ, ಅದು ತುಂಬ ಕಠಿಣವಾಗಿದೆ, ಆದ್ದರಿಂದ ನಡುವೆಯೇ ನಿಲ್ಲಿಸಿಬಿಡಬೇಕಾಗುವುದೋ ಏನೋ, ನಿಮ್ಮಲ್ಲಿ ಅದನ್ನು ಮಾಡಿ ಮುಗಿಸಿ ಬಿಡುವ ಶಕ್ತಿ ಇಲ್ಲ, – ಅಂದರೆ, ಎಂಥ ಹೊಡೆತ

ಬಿದ್ದರೂ ಅಡ್ಡಿಯಿಲ್ಲ ಹಿಡಿದ ಕೆಲಸವನ್ನು ಪೂರ್ತಿಗೊಳಿಸಿಯೇ ಸಿದ್ಧ ಎಂಬ ಛಲವೂ ಇಲ್ಲ, ಸಾಮರ್ಥ್ಯವೂ ಇಲ್ಲ, ಅಡ್ಡಿ, ಆತಂಕ, ಆಘಾತಗಳನ್ನು ಭರಿಸುವ ಶಕ್ತಿ ಇಲ್ಲ – ಏನೋ ಹೇಳುತ್ತಾರಲ್ಲ, ನೀವು ತಪ್ಪು ಮಾಡಿದ್ದೀರಿ, ಅಂತೆಯೇ ಆಘಾತಗಳು ಬರುತ್ತವೆ, ಅವುಗಳನ್ನು ಹಾಗೆಯೇ ಜೇಬಿಗಿಳಿಸಿಕೊಂಡು ಯಾರಿಗೂ ಗೊತ್ತಾಗದಂತೆ ಮುನ್ನಡೆದುಬಿಡುವುದು – ಇಂಥ ತಾಳ್ಮೆ, ಸಹನೆ ಹಾಗೂ ಶಕ್ತಿ ಇಲ್ಲದೇ ಹೋದರೆ, ನೀವು ಬಹಳ ದೂರ ಮುಂದುವರಿಯಲಾರಿರಿ. ಮೊದಲ ತಿರುವಿನಲ್ಲಿಯೇ, ಅಂದರೆ ನಿಮ್ಮ ರೂಢಿಗತ ಜೀವನ ಪದ್ಧತಿ ಬದಲಾಗುತ್ತದೆ ಎಂದು ಅನಿಸಿದ ಕ್ಷಣವೇ ನೀವು ನಿರಾಶರಾಗಿ ಬಿಡುತ್ತೀರಿ. ಕೆಲಸವನ್ನು ಅರ್ಧದಲ್ಲೇ ಬಿಟ್ಟುಬಿಡುತ್ತೀರಿ.

ತೀರ ಲೌಕಿಕವಾಗಿ ಹೇಳಬೇಕೆಂದರೆ, – ಅಂದರೆ ತೀರ ಪ್ರಾಪಂಚಿಕವಾದ ರೀತಿಯಲ್ಲಿ ಹೇಳಬೇಕೆಂದರೆ ಸಹನೆ ಎಂಬುದು ಭೌತಿಕ ರೂಪದಲ್ಲಿ ಇರಬೇಕು. ಅವಶ್ಯಕತೆ ಬಿದ್ದರೆ ಸಾವಿರ ಸಲ ಆದರೂ ಚಿಂತೆ ಇಲ್ಲ, ಹಿಡಿದ ಕೆಲಸವನ್ನು ಪೂರ್ತಿಗೊಳಿಸುತ್ತೇನೆ ಎಂಬ ಗಟ್ಟಿ ನಿರ್ಧಾರ ಇರಬೇಕು. ನಿಮಗೆ ಗೊತ್ತಿರುವಂತೆ ನನ್ನ ಬಳಿಗೆ ಅನೇಕ ಜನರು ತೀರ ನಿರಾಶರಾಗಿಯೇ ಬರುತ್ತಾರೆ; ‘ಎಲ್ಲಾ ಮುಗಿದುಹೋಗಿದೆ ಎಂದು ಭಾವಿಸಿದ್ದೆ, ಆದರೆ ಮಾಡಿದ್ದನ್ನೇ ಮತ್ತೆ ಮಾಡಬೇಕಾಗಿ ಬಂದಿದೆ’ ಎಂದು ಅಲವತ್ತುಕೊಳ್ಳುತ್ತಾರೆ. ಅದೇನೂ ದೊಡ್ಡದಲ್ಲ, ಇದನ್ನು ನೀವು ನೂರು ಸಲ, ಎರಡು ನೂರು ಸಲ ಅವಶ್ಯಕತೆ ಬಿದ್ದರೆ ಸಾವಿರ ಸಲ ಮಾಡಬೇಕಾಗಿ ಬರಬಹುದು, ಏನೋ ಒಂದು ಹೆಜ್ಜೆ ಮುಂದೆ ಹೋಗಿ ಹ್ಞಾ, ಹ್ಞಾ, ಇನ್ನು ಮುಗಿಯಿತು ಎಂದು ನೀವು ಅಂದುಕೊಳ್ಳಬಹುದು, ಆದರೆ ಅನತಿ ದೂರ ಹೋಗುವಷ್ಟರಲ್ಲಿ ಪುನಃ ಅಂಥದೇ ಕಠಿಣ ಪರಿಸ್ಥಿತಿ ಬಂದೊದಗಬಹುದು. ಸಮಸ್ಯೆ ನಿಮ್ಮ ಪಾಲಿಗೆ ಮುಗಿದುಹೋಗಿದೆ ಎಂದು ತೋರಬಹುದು, ಆದರೆ ಅದೇ ಸಮಸ್ಯೆ ಮತ್ತೆ ತಲೆದೋರಬಹುದು, ತುಸು ಬೇರೆ ಎಂದು ತೋರಬಹುದೇನೋ ಆದರೆ ಅದು ಮೊದಲಿನ ಸಮಸ್ಯೆಯೇ ಆಗಿರಬಹುದು. ನೀವು ದೃಢವಾದ ಸಂಕಲ್ಪ ಕೈಕೊಳ್ಳಲೇಬೇಕು, ಈ ಸಮಸ್ಯೆ ಸಾವಿರಾರು ಸಲ ಬಂದರೂ ನಾನು ಎದುರಿಸುತ್ತೇನೆ, ಪರಿಹರಿಸಿಯೇ ತೀರುತ್ತೇನೆ ಎಂಬ ಛಲ ಇರಲೇಬೇಕು, ಅಂಥ ಛಲ ತಾಳ್ಮೆ ಇಲ್ಲದೇ ಹೋದರೆ ನೀವು ಯೋಗವನ್ನು ಕೈಕೊಳ್ಳಲು ಯೋಗ್ಯರಲ್ಲ. ಇದು ತೀರ ಅನಿವಾರ್ಯವಾದ ಗುಣ.

*

ಸಹನೆಯ ಮೂಲಕ ಮಾತ್ರ ನೀವು ಎಂಥ ಕಠಿಣ ಪರಿಸ್ಥಿತಿಗಳನ್ನಾದರೂ ಗೆಲ್ಲಬಲ್ಲಿರಿ. ಸಮಸ್ಯೆಗಳಿಂದ ದೂರ ಓಡಿ ಹೋಗುವುದರಿಂದಲ್ಲ. ಯಾರಲ್ಲಿ ತಾಳ್ಮೆ ಎಂಬುದಿದೆಯೋ ಅವರ ವಿಜಯ ನಿಶ್ಚಿತ. ಯಾರು ಹೆಚ್ಚು ತಾಳಿಕೊಳ್ಳಬಲ್ಲರೋ ಅವರೇ ಗೆಲ್ಲುತ್ತಾರೆ. ನಿಮ್ಮ ಶಕ್ತಿ ಮೀರಿ ಉತ್ತಮವಾಗಿ ಕೆಲಸ ಮಾಡಿರಿ, ನಿಮಗೆ ಪ್ರತಿಫಲ ನೀಡುವ ಬಗ್ಗೆ ಪರಮಾತ್ಮನೇ ನೋಡಿಕೊಳ್ಳುತ್ತಾನೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 8/23; 9/255; 8/41–42; 14/163**

## ಅಭೀಪ್ಸೆ

ಅಭೀಪ್ಸೆ ಅಂದರೆ ಉನ್ನತವಾದ ಸಂಗತಿಗಳಿಗಾಗಿ ಸತ್ತ್ವೆಯ ಹಾತೊರೆಯುವಿಕೆ ಅಥವಾ ಕರೆ, – ಪರಮಾತ್ಮನಿಗಾಗಿ, ಉನ್ನತವಾದ ಅಥವಾ ದೈವೀ ಪ್ರಜ್ಞೆಗೆ ಸಂಬಂಧಿಸಿದ ಎಲ್ಲಾ ಸಂಗತಿಗಳಿಗಾಗಿ ಕರೆ.

*

ಅಭೀಪ್ಸೆಯು ಬಯಕೆಯ ರೂಪದಲ್ಲಿ ಇರಬಾರದು. ಅದು ಅಂತರಂಗದಲ್ಲಿ ಇರುವ ಆತ್ಮದ ಅವಶ್ಯಕತೆ ಆಗಿರಬೇಕು, ಸಮಾಧಾನಕರವಾದ, ದೃಢವಾದ ಸಂಕಲ್ಪ, ಪರಮಾತ್ಮನೆಡೆಗೆ ಹೊರಳುವ, ಅವನಿಗಾಗಿ ಶೋಧಿಸುವ ಸಂಕಲ್ಪ ಆಗಿರಬೇಕು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/56, 60–61**

ಆದರ್ಶ ಸಾಧಕನಾದವನು ಬೈಬಲ್ ಹೇಳುವ ಪ್ರಕಾರ “ಪರಮ ಪ್ರಭುವಿಗಾಗಿ ನನ್ನಲ್ಲಿರುವ ಉತ್ಸಾಹ ನನ್ನನ್ನು ತಿಂದುಹಾಕಿಬಿಟ್ಟಿದೆ” ಎಂದು ಹೇಳುವಷ್ಟು ಸಮರ್ಥವಾಗಿರಬೇಕು. ಪರಮಾತ್ಮನ ಬಗೆಗೆ ಇರುವ ಉತ್ಸಾಹವು ದೈವೀ ಪರಿಣಾಮಕ್ಕಾಗಿ ಸಮಗ್ರ ಸತ್ತ್ವೆಯಲ್ಲಿರುವ ಉತ್ಸಾಹ, ವ್ಯಾಕುಲತೆ – ಪರಮಾತ್ಮನನ್ನು ಪಡೆದೇತೀರಬೇಕೆಂಬ ಹೃದಯದ ಕಾತರತೆ – ಇದು ಅಹಂಭಾವವನ್ನು ನಾಶಪಡಿಸುವುದು. ತಾನು ಯಾವುದಕ್ಕಾಗಿ ಅರಸುತ್ತಾ ಇದೆಯೋ ಅದರ ವೈಶಾಲ್ಯ, ಅಪರಂಪಾರತೆಯನ್ನು ಸ್ವೀಕರಿಸಲು ತನ್ನ ಎಲ್ಲಾ ಕ್ಷುದ್ರತೆ, ಸಂಕುಚಿತತೆ, ಮಿತಿಗಳನ್ನು ಒಡೆದುಹಾಕುವುದು. ಏಕೆಂದರೆ ಅದು ವಿಶಾಲವಾಗಿದೆ, ವಿಶ್ವಾತ್ಮಕವಾಗಿದೆ,

ವಿಶ್ವಾತ್ಮಕವಾಗಿದೆ, ಬೃಹತ್ ಆಗಿರುವ, ಉನ್ನತವಾಗಿರುವ ವ್ಯಕ್ತಿಗತ ಆತ್ಮ ಮತ್ತು ಪ್ರಕೃತಿಯನ್ನು ಮೀರಿ ನಿಲ್ಲುವಂತಹದಾಗಿದೆ ಎಂಬುದನ್ನು ಅರಿತಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 23/58**

ಆಧ್ಯಾತ್ಮಿಕ ಅಭೀಪ್ಸೆಯು ಮಾನವನಲ್ಲಿ ಸಹಜವಾಗಿಯೇ ಇರುತ್ತದೆ. ಏಕೆಂದರೆ ಅವನು ಪ್ರಾಣಿಯಂತಲ್ಲ, ಅವನಿಗೆ ತನ್ನ ಅಪರಿಪೂರ್ಣತೆಯ, ಸೀಮಿತತೆಯ ಅರಿವು ಇರುತ್ತದೆ. ತಾನು ಸದ್ಯಕ್ಕೆ ಏನಿರುವುನೋ ಅದಕ್ಕಿಂತಲೂ ಆಚೆಗಿರುವುದನ್ನು ಪಡೆಯಬೇಕೆಂಬ ಹಂಬಲ ಅವನಲ್ಲಿ ಸಹಜವಾಗಿಯೇ ಇರುತ್ತದೆ.

ಜಡವಾದ ಭೌತಿಕದಲ್ಲಿ ವಿಚಾರಶೀಲವಾದ ಮನಸ್ಸು ಬರುವವರೆಗೆ ವಿಕಾಸವು ಪ್ರಜ್ಞಾಯುಕ್ತವಾಗಿರಲಿಲ್ಲ. ಸ್ವ–ಇಚ್ಛೆಯಿಂದ ಅಥವಾ ಬಯಕೆಯ ಮೂಲಕ ಅಥವಾ ಸಂಕಲ್ಪ ಹಾಗೂ ಜೀವಿಯ ಸಜೀವ ಶೋಧನೆಯ ಮೂಲಕ ಅದು ಸಾಧ್ಯವಾಗಿರುವುದಿಲ್ಲ. ಬದಲಾಗಿ ಜೀವಿಗೆ ಅರಿವಿಲ್ಲದಂತೆಯೇ ಅದರ ಅವಚೇತನದ ಮೂಲಕವೋ, ಅಂತಃಸ್ತರದ ಮೂಲಕವೋ ತಾನಾಗಿ ಪ್ರಕೃತಿಯ ಸ್ವಯಂಚಾಲಿತ ಕ್ರಿಯೆಯ ಮೂಲಕವೋ ಆಗಿದೆ. ಮಾನವನಿಗೆ ಮಾತ್ರ ತನಗಿಂತ ಎಷ್ಟೋ ಪಟ್ಟು ಮಿಗಿಲಾದ, ಉನ್ನತವಾದ ಪ್ರಜ್ಞೆಯ ಸ್ತರಗಳಿರುವುದು ತಿಳಿದಿದೆ. ಅವನ ಮನಸ್ಸು ಹಾಗೂ ಪ್ರಾಣಗಳಲ್ಲಿ ವಿಕಾಸದ ತಪನೆ ಇದೆ, ತನ್ನನ್ನು ಮೀರಿ ಬೆಳೆಯಬೇಕೆಂಬ ಹಂಬಲ ಇದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 21/875–76**

ಶಬ್ದಗಳಿಗೆ ಅತೀತವಾದ, ವಿಚಾರಗಳಿಗೆ ಅತೀತವಾದ, ಅತ್ಯಂತ ತೀವ್ರವಾದ ಅಭೀಪ್ಸೆಯ ಅಗ್ನಿ ನಿರಂತರವಾಗಿ ಪ್ರಖರವಾಗಿ ಒಂದೇ ರೀತಿಯಾಗಿ ಉರಿಯುತ್ತಿರಬೇಕು.

*

*ಪ್ರಶ್ನೆ: ನಿಷ್ಠಾಪೂರ್ಣವಾದ ಅಭೀಪ್ಸೆ ಅಂದರೆ ಏನು?*

ಯಾವುದೇ ವೈಯಕ್ತಿಕ ಹಿತಾಸಕ್ತಿ ಹಾಗೂ ಅಹಂ ಕೇಂದ್ರಿತ ಲೆಕ್ಕಾಚಾರ ಇಲ್ಲದ ಶುದ್ಧವಾದ ಅಭೀಪ್ಸೆಯೇ ನಿಜವಾದ ಅಭೀಪ್ಸೆ.

ನೀವು ನಿರಂತರವಾದ ಅಭೀಪ್ಸೆಯ ಸ್ಥಿತಿಯಲ್ಲಿ ಇರುವಿರಿ, ನಿಮ್ಮ ಅಭೀಪ್ಸೆ ತುಂಬಾ ಪ್ರಾಮಾಣಿಕವಾಗಿದೆ ಎನ್ನುವುದಾದರೆ, ಎಲ್ಲವೂ ನಿಮ್ಮ ಅಭೀಪ್ಸೆಗೆ ಅನುಕೂಲವಾಗುವಂತೆ, ಸಹಾಯಕವಾಗುವಂತೆ ವ್ಯವಸ್ಥಿತಗೊಳ್ಳುತ್ತ ಹೋಗುವುದು. ನೇರವಾಗಿಯೋ ಅಥವಾ ಅಪ್ರತ್ಯಕ್ಷವಾಗಿಯೋ, ನೀವು ಪ್ರಗತಿ ಸಾಧಿಸಲು, ತೀರಾ ಹೊಸದಾಗಿರುವ ಯಾವುದೋ ಅಜ್ಞಾತವಾಗಿರುವುದರ ಜೊತೆಗೆ ಸಂವಹನ ಸಾಧಿಸಲು ಹಾಗೂ ಯಾವುದು ಅನಿಷ್ಟವಾಗಿದ್ದು ತ್ಯಾಜ್ಯವಾಗಿದೆಯೋ ಅದನ್ನು ಉಚ್ಚಾಟನೆ ಮಾಡಲು ಸಹಾಯ ಮಾಡುವುದು. ಇದು ನಿಜವಾಗಿಯೂ ತುಂಬಾ ಗಂಭೀರ ಹಾಗೂ ಗಮನಾರ್ಹವಾದ ಸಂಗತಿಯಾಗಿದೆ. ನೀವು ನಿಜವಾಗಿಯೂ ತೀವ್ರವಾದ ಅಭೀಪ್ಸೆಯ ಸ್ಥಿತಿಯಲ್ಲಿ ಇದ್ದರೆ, ನಿಮ್ಮ ಅಭೀಪ್ಸೆಯು ಸಾಕಾರಗೊಳ್ಳುವದಕ್ಕೆ ನೆರವಾಗಲು ಸಹಾಯ ಮಾಡದೆ ಹೋಗುವಂಥ ಯಾವ ಸಂಗತಿಯೂ ಜಗತ್ತಿನಲ್ಲಿ ಇರುವುದಿಲ್ಲ. ಎಲ್ಲವೂ ನೆರವು ನೀಡಲು ಬರುವುವು, ಪರಿಪೂರ್ಣವಾದ, ನಿರುಪಾಧಿಕವಾದ ಪ್ರಜ್ಞೆಯೇ ನಿಮ್ಮ ಸುತ್ತಲೂ ಎಲ್ಲವನ್ನೂ ವ್ಯವಸ್ಥಿತಗೊಳಿಸುವದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 14/75, 72; 6/176**

ಗ್ರಹಣಶೀಲತೆ ಅಥವಾ ಗ್ರಹಿಸುವಿಕೆ – ದೈವೀ ಶಕ್ತಿಯನ್ನು ಸ್ವೀಕರಿಸುವ, ಅದರ ಸಾನಿಧ್ಯವನ್ನು ಅನುಭವಿಸುವ, ಅದರಲ್ಲಿ ಶ್ರೀಮಾತೆಯ ಇರುವಿಕೆಯನ್ನು ಮನಗಾಣುವ , ಆ ಶಕ್ತಿ ಕೆಲಸ ಮಾಡಲು ಅನುಮತಿ ನೀಡುವ, ತನ್ನ ದೃಷ್ಟಿ, ಸಂಕಲ್ಪ ಮತ್ತು ಕಾರ್ಯಗಳಿಗೆ ದಾರಿ ತೋರಿಸುವುದನ್ನು ಮನಃಪೂರ್ವಕವಾಗಿ ಸಮ್ಮತಿಸುವ ಸಾಮರ್ಥ್ಯವನ್ನು ಗ್ರಹಣಶೀಲತೆ ಎಂದು ಕರೆಯಲಾಗುತ್ತದೆ.

*

ಹೀಗೆ ತೆರೆದುಕೊಳ್ಳುವುದು ಅಂದರೆ ವ್ಯಕ್ತಿಯು ತನ್ನೆಲ್ಲ ಸ್ವಭಾವ ಅಥವಾ ಪ್ರಕೃತಿಯನ್ನು ಎಲ್ಲಾ ಹಂತದಲ್ಲಿ, ಎಲ್ಲಾ ಭಾಗಗಳಲ್ಲಿ ಸಮಗ್ರವಾಗಿ ಸ್ವೀಕರಿಸುವ ಶಕ್ತಿ. ಅಲ್ಲಿ ಯಾವುದೇ ರೀತಿಯ ಸಂಕುಚಿತತೆ, ಸೀಮಿತತೆ ಇರಬಾರದು. ದೈವೀ ಪ್ರಜ್ಞೆಯು ಎಲ್ಲೆಲ್ಲೂ, ಮೇಲೂ ಕೆಳಗೂ, ಹೊರಗೂ ಒಳಗೂ ಎಲ್ಲಾ ಕಡೆಗಳಲ್ಲಿಯೂ ಇದೆ,

ಅದನ್ನು ಇಡಿಯಾಗಿ ಸ್ವೀಕರಿಸಬೇಕು. ಈ ಮೃತ್ಯುವಶ, ಅರೆ–ಪ್ರಜ್ಞೆಯ ಅಸ್ತಿತ್ವವನ್ನು ವಿಶ್ವಾತ್ಮಕಗೊಳಿಸುವ ತತ್ತ್ವ ಅದೇ ಆಗಿದೆ.

**SABCL (ಶ್ರೀ ಅರವಿಂದೋ ಜನ್ಮ ಶತಾಬ್ದಿ ಸಂಪುಟ) 29/266**
**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 12/169**

ನನ್ನ ಪ್ರೇಮವು ನಿನ್ನ ಜೊತೆ ಸದಾಕಾಲವೂ ಇರುತ್ತದೆ; ನಿನಗದರ ಅನುಭವ ಆಗುತ್ತಿಲ್ಲವೆಂದರೆ ಅದನ್ನು ಸ್ವೀಕರಿಸುವ ಅರ್ಹತೆ ನಿನ್ನಲ್ಲಿ ಇನ್ನೂ ಬಂದಿಲ್ಲ ಎಂದು ಅರ್ಥ. ನಿನ್ನಲ್ಲಿ ಅದನ್ನು ಸ್ವೀಕರಿಸುವ ಸಾಮರ್ಥ್ಯ ಇನ್ನೂ ಬಂದಿಲ್ಲ, ಎಲ್ಲೋ ಕೊರತೆ ಇದೆ, ಅದು ಬೆಳೆಯಬೇಕು, ಅದಕ್ಕಾಗಿ ನೀನು ಇನ್ನೂ ಇನ್ನೂ ಮತ್ತಷ್ಟು ತೆರೆದುಕೊಳ್ಳುತ್ತ ಹೋಗಬೇಕು. ವ್ಯಕ್ತಿಯು ತನ್ನನ್ನು ಸಂಪೂರ್ಣವಾಗಿ ಕೊಟ್ಟುಕೊಳ್ಳುವ ಹಾಗೆ ಆದಾಗ ಮಾತ್ರ ಆ ರೀತಿ ತೆರೆದುಕೊಳ್ಳುವುದು ಸಾಧ್ಯವಾಗುವುದು. ವೈಯಕ್ತಿಕವಾಗಿ ನೀನು ತುಸು ಹೆಚ್ಚು ಕಡಿಮೆ ಇರಬಹುದು, ದೈವೀ ಶಕ್ತಿಯನ್ನು, ದೈವೀ ಪ್ರೇಮವನ್ನು ನಿನ್ನೊಳಗೆ ಎಳೆದುಕೊಳ್ಳುತ್ತಿರುವಿ ಎನ್ನುವುದು ನಿಜ, ಆದರೆ ಕ್ರಮ ಸರಿ ಇಲ್ಲ. ಇಲ್ಲಿ ಯಾವುದೇ ರೀತಿಯ ಲೆಕ್ಕಾಚಾರ ಇರಬಾರದು, ಪ್ರತಿಯಾಗಿ ಏನನ್ನೂ ನಿರೀಕ್ಷಿಸಬಾರದು. ಸಂಪೂರ್ಣವಾಗಿ ಸಮರ್ಪಿಸಿಕೊಳ್ಳಬೇಕು. ಅಂದಾಗ ಮಾತ್ರ ನೀನು ಸ್ವೀಕರಿಸಲು ಅರ್ಹನಾಗುವಿ.

*

ನಿನ್ನ ಕೆಲಸ ಮಾತ್ರ ಜ್ಯೋತಿಯನ್ನು ಬೆಳಗಿಸುತ್ತದೆ ಅಂತಲ್ಲ, ನಾನು ಇದೀಗ ಹೇಳಿದಂತೆ, ಸದಾಕಾಲವೂ ನಿನಗಾಗಿ ಅದನ್ನು ಬೆಳಗಿಸುತ್ತಿರುತ್ತೇನೆ. ಅದನ್ನು ಸ್ವೀಕರಿಸುವುದಕ್ಕೆ ನೀನು ನಿನ್ನನ್ನು ತೆರೆದು ಇಟ್ಟುಕೊಳ್ಳಬೇಕು, ಅಷ್ಟೇ. ನಿನ್ನ ಸದಿಚ್ಛೆ ಸಂಕಲ್ಪಗಳ ಮೂಲಕ ಅದನ್ನು ಪೋಷಿಸಬೇಕು.

*

ಇದೆಲ್ಲವೂ ಮೊದಲು ನಿಷ್ಠೆಯ ಮೇಲೆ ಅವಲಂಬಿತವಾಗಿದೆ. – ವ್ಯಕ್ತಿಗೆ ಅದನ್ನು ಸ್ವೀಕರಿಸಬೇಕೆಂಬ ಬಲವಾದ ಇಚ್ಛೆ ನಿಜವಾಗಿಯೂ ತೀವ್ರವಾಗಿ ಇದೆಯೋ ಇಲ್ಲವೋ,.. ಆನಂತರ.. ಹೌದು, ನನಗನಿಸುವಂತೆ, ಅತ್ಯಂತ ಮುಖ್ಯವಾದ ಸಂಗತಿಗಳೆಂದರೆ, ನಿಷ್ಠೆ ಮತ್ತು ನಮ್ರತೆ. ಒಣ ಜಂಭಕ್ಕಿಂತ ದೊಡ್ಡದಾವುದೂ

ನಿಮ್ಮನ್ನು ಮುಸುಗಲಾರದು. ಸ್ವಯಂ ತೃಪ್ತಿ ಆದಾಗ ನಿಮಗೊಂದು ರೀತಿಯ ಜಂಭ ಬರುತ್ತದೆ, ನಿಮ್ಮಲ್ಲಿ ಕೊರತೆ ಇದೆ ಎಂದು ಒಪ್ಪಲು ನೀವು ಸಿದ್ಧರಾಗುವುದೇ ಇಲ್ಲ. ನೀವು ತಪ್ಪು ಮಾಡಬಹುದು, ನೀವು ಅಪರಿಪೂರ್ಣ.. ನೀವು.. ಹೀಗೆ ಒಪ್ಪಿಕೊಳ್ಳಲು ತಯಾರಾಗುವುದೇ ಇಲ್ಲ. ನಿಮಗೇ ಗೊತ್ತಿದೆಯಲ್ಲ, ಈ ಪ್ರಕೃತಿಯಲ್ಲಿ ಹೀಗೆ ಹಠಮಾರಿಯಾಗಿ ಬೆಳೆಯುವಂಥದು ಯಾವುದು, ಇದನ್ನೆಲ್ಲ ಒಪ್ಪಿಕೊಳ್ಳಲು ನಿರಾಕರಿಸುದು ಯಾವುದೆಂದು! – ಅದೇ ಗ್ರಹಣಶೀಲತೆಯನ್ನು ತಡೆಯವುದು. ನೀವು ಅದನ್ನು ಕಿತ್ತುಬಿಸಾಡಲು ತಯಾರಾಗಬೇಕು. ಪ್ರಯತ್ನಪಟ್ಟು ಅನುಭವ ಪಡೆಯಬೇಕು. ನಿಮ್ಮೊಳಗಿನ ಒಂದು ಅತಿ ಸಣ್ಣ, ಅತಿ ಸೂಕ್ಷ್ಮ ಭಾಗವಾದರೂ ಸರಿ, ಹೀಗೆ ಒಪ್ಪಿಕೊಳ್ಳಲು ತಯಾರಾದರೆ, "ಹೌದು ನಾನು ತಪ್ಪಿದ್ದೇನೆ, ಹಾಗೆ ಮಾಡಬಾರದಾಗಿತ್ತು. ಹಾಗೆ ವರ್ತಿಸಬಾರದಾಗಿತ್ತು, ನಾನು ಹಾಗೆ ಅಂದುಕೊಳ್ಳಲೇಬಾರದಾಗಿತ್ತು. ಹೌದು ಅದು ನನ್ನ ತಪ್ಪು" ನಾನು ಆಗಲೇ ಹೇಳಿದಂತೆ ಮೊದಮೊದಲು ನಿಮಗೆ ತುಸು ನೋವು ಆಗಬಹುದು, ಆದರೆ ಗಟ್ಟಿಯಾಗಿ ನಿಂತುಕೊಂಡಿರೆಂದರೆ, ನಿಮ್ಮ ಅಂತರಂಗದ ಬಾಗಿಲು ತೆರೆದುಕೊಂಡುಬಿಡುತ್ತದೆ. ನಿಮಗೆ ಅತ್ಯಂತ ಆನಂದದ ಅನುಭವ ಆಗುತ್ತದೆ. ನಿಮಗೆ ನೀವೇ ಹೇಳಿಕೊಳ್ಳುವಂತಾಗುತ್ತದೆ, ಇಲ್ಲಿಯವರೆಗೆ ಇದನ್ನು ಮಾಡದೇ, ಬರೀ ಪ್ರತಿರೋಧ ತೋರಿಸುತ್ತ ಎಂಥ ಮೂರ್ಖ ಕೆಲಸ ಮಾಡಿದೆ ಎಂದುಕೊಳ್ಳುವಂತಾಗುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 14/148; 17/126; 6/117**

# ಶ್ರೀ ಅರವಿಂದರ
# ‘ಗೀತಾ ಪ್ರಬಂಧಗಳು’

**– ಅನುವಾದ: ಜಾನ್ವಿ**

## 23

## ಅಧ್ಯಾಯ – 19
## ಸಮತ್ವ

ಮೊದಲು ಗೀತೆಯು ಅರ್ಜುನನ ಕ್ಷಾತ್ರ ಧರ್ಮವನ್ನು ಅನುಲಕ್ಷಿಸಿ, ಅದನ್ನೇ ಉದ್ದೇಶಿಸಿ ವಿರೋಚಿತ ಶಬ್ದಗಳನ್ನು ಹೇಳುತ್ತದೆ. ಬಯಕೆ, ಆಶೆ ಎಂಬುದೇ ಮಹಾಶತ್ರು, ಮೊದಲು ಅದನ್ನು ನಾಶ ಮಾಡುವಂತೆ ಉಪದೇಶ ಮಾಡುತ್ತದೆ. ಮೊದಮೊದಲು ಗೀತೆ ಹೇಳುವುದು ಅನಾಸಕ್ತ ಯೋಗದ ಸಮತ್ವವನ್ನೇ “ಯಾರ ಮನಸ್ಸು–ಬುದ್ಧಿಗಳು ಕ್ಷುಬ್ಧವಾಗಿಲ್ಲವೋ, ಸಂಸಾರದ ಸುಖ–ದುಃಖಗಳ ಜಂಜಾಟದ ನಡುವೆಯೂ ವಿಚಲಿತವಾಗದೇ ಸಮನಾಗಿವೆಯೋ, ಯಾರಿಗೆ ಬಯಕೆ, ಆಶೆಗಳಿಲ್ಲವೋ, ಯಾರಿಗೆ ಇಷ್ಟಾನಿಷ್ಟಗಳು, ಭಯ, ಕ್ರೋಧಗಳ ಬಾಧೆಯೇ ಇಲ್ಲವೋ, ಅವುಗಳಿಂದ ಮುಕ್ತರಾಗಿರುವುರೋ ಅಂಥವರು ಸ್ಥಿತಪ್ರಜ್ಞರೆನಿಸುತ್ತಾರೆ. ಏನೇ ಆಗಲಿ, ಎಂಥ ಪರಿಸ್ಥಿತಿಯಲ್ಲೇ ಆಗಲಿ ಯಾರ ಮನಸ್ಸು ಯಾವುದಕ್ಕೂ ಅಂಟಿಕೊಳ್ಳುವುದಿಲ್ಲವೋ, ವಿಕಟ ಸಂಗತಿಯಿಂದ ಹಿಂಜರಿಯುವುದಿಲ್ಲವೋ ಯಾರು ಅತ್ಯಾನಂದವನ್ನೂ ಪಡುವುದಿಲ್ಲ ಹಾಗೂ ಏನನ್ನೂ ದ್ವೇಷಿಸುವುದಿಲ್ಲವೋ ಅಂಥವರ ಪ್ರಜ್ಞೆ ಸ್ಥಿರವಾಗಿರುವುದು ಎಂದು ತಿಳಿಯಬೇಕು” (2.56, 57). ಇದನ್ನೇ ಮುಂದುವರೆಸಿ “ಒಂದು ವೇಳೆ ಆಹಾರ ಸೇವನೆಯನ್ನು ಬಿಟ್ಟರೆ (ಅಥವಾ ಕಡಿಮೆ ಮಾಡಿದರೆ) ವಿಷಯಗಳು ದೂರವಾಗುವುದುಂಟು. ಆದರೆ ವಿಷಯಗಳ ಸಂಗದಲ್ಲಿ ಇಂದ್ರೀಯಗಳು ತೆಗೆದುಕೊಳ್ಳುವ ‘ರಸ’ ಅಥವಾ ರುಚಿಯು ನಾಶವಾಗದೇ ಹಿಂದೆ ಉಳಿಯುವುದು (2.59) ಇಂದ್ರೀಯಗಳು ವಿಷಯ ಗ್ರಹಣ ಮಾಡುವ ಸಮಯದಲ್ಲಿ ಆ ವಿಷಯದ ‘ರಸ’ ಸವಿಯುವುದನ್ನು ಬಿಟ್ಟರೆ, ವಿಷಯ ರಸದ ಸುಖಾನುಭವವನ್ನು ಬಿಟ್ಟರೆ ಮಾತ್ರ ಆತ್ಮದ ನಿಜವಾದ ಪಾತಳಿಯನ್ನು ಅವನು ತಲುಪಿದ್ದಾನೆ ಎಂದು ಹೇಳಬಹುದು. ವಿಷಯಗಳ ಕ್ಷೇತ್ರದಲ್ಲಿ ಇಂದ್ರಿಯಗಳ ಮೂಲಕ ವಿಹರಿಸುತ್ತಿರು–ವಾಗಲೇ, ಇಂದ್ರಿಯಗಳು ಆತ್ಮದ ತಂತ್ರವನ್ನು ಹಿಡಿದು ಸಾಗುತ್ತಿದ್ದರೆ, ವಿಷಯಗಳ ಇಷ್ಟಾನಿಷ್ಟತೆಯನ್ನು ತ್ಯಜಿಸಿದ್ದರೆ ಅಂಥ ಸ್ಥಿತಿಯಲ್ಲಿ ಆತ್ಮ ಮತ್ತು ಸ್ವಭಾವ ಎರಡೂ

ವಿಶಾಲವಾಗುವುದು. ಪ್ರಸನ್ನತೆಯಿಂದ ತುಂಬಿಕೊಳ್ಳುವುದು. ಅಲ್ಲಿ ದುಃಖಗಳಿಗೆ, ವಿಕಾರಗಳಿಗೆ ಆಸ್ಪದವಿರುವುದಿಲ್ಲ" (2.64) ಸಮುದ್ರದಲ್ಲಿ ನೀರು ಎಲ್ಲ ದಿಕ್ಕುಗಳಿಂದಲೂ ಹರಿದು ಬಂದು ಸೇರುತ್ತಿದ್ದರೂ ಅದು ಅಚಲವಾಗಿರುತ್ತದೆ; ಅದೇ ರೀತಿ ಮನಸ್ಸಿನ ಎದುರಲ್ಲಿ ಎಲ್ಲ ತರಹದ ವಾಸನೆಗಳು ಬಂದು ಸೇರುತ್ತಿದ್ದರೂ ಸಹ ಮನಸ್ಸು ಅವಿಚಲಿತವಾಗಿ, ಸ್ಥಿರವಾಗಿ ನಿಲ್ಲಬೇಕು. ಇದನ್ನು ಸತತ ವಾಸನೆಗಳನ್ನು ಸುಲಭವಾಗಿ ತ್ಯಾಗ ಮಾಡಬಹುದು (2.70) ಎಂದು ಹೇಳುತ್ತದೆ. ಮೋಕ್ಷಕ್ಕಾಗಿ ಕಾಮ, ಕ್ರೋಧ, ಭೀತಿ, ಆಸಕ್ತಿ ಇವೆಲ್ಲವುಗಳಿಂದ ನಾವು ಮುಕ್ತರಾಗಬೇಕಾಗುತ್ತದೆ. ಗೀತೆಯು ಇದನ್ನು ಮೇಲಿಂದ ಮೇಲೆ ಹೇಳುತ್ತದೆ. ಅಂದರೆ, ಈ ವಿಷಯಗಳ ಆಘಾತಗಳನ್ನು ಸಹಿಸಿಕೊಂಡು ನಿರ್ವಿಕಾರವಾಗಿ, ಅವಿಚಲನಾಗಿ ನಿಲ್ಲಲು ಸಾಧ್ಯವಾಗಬೇಕು. ಕಾಮ ಕ್ರೋಧಗಳ ಆವೇಗಗಳನ್ನು ಅವಿಚಲಿತವಾಗಿ ಎದುರಿಸಿ ಸಹಿಸಿಕೊಳ್ಳುವುದನ್ನು ಕಲಿಯಬೇಕು. ಅಂಥ ನಿರ್ವಿಕಾರ ಸ್ಥಿತಿ ಪ್ರಾಪ್ತಿಯಾದಾಗ ಮಾತ್ರ ಅವನು ಯೋಗಿ ಎನಿಸಿಕೊಳ್ಳಬಲ್ಲನು (ಗೀತೆ 5.23) ವಿಕಾರಗಳ ಆಘಾತಗಳನ್ನು ಸಹಿಸಿಕೊಳ್ಳುವುದನ್ನು ತಿತಿಕ್ಷಾ ಎಂದು ಕರೆಯುವರು. "ಭೌತಿಕ ಸ್ಪರ್ಶ, ಶೀತ, ಉಷ್ಣ, ಸುಖ ದುಃಖಗಳಿಗೆ ಕಾರಣವಾಗಿರುವ ಅನಿತ್ಯವಾದ ಬಂದು ಹೋಗುವ ಎಲ್ಲ ಸ್ಪರ್ಶಗಳನ್ನು ಸಹಿಸಲು ಕಲಿಯಬೇಕು. (ತಿತಿಕ್ಷಸ್ವ). ಯಾರಿಗೆ ಈ ಸ್ಪರ್ಶಗಳು ವ್ಯಥೆಯನ್ನೇ ಉಂಟು ಮಾಡುವುದಿಲ್ಲವೋ, ಸುಖ ದುಃಖ ಉಭಯ ಪ್ರಸಂಗದಲ್ಲೂ ಒಂದೇ ಸಮನಾಗಿ ಇರುತ್ತಾರೋ ಅವರು ಅಮರವಾದ ಜೀವನನ್ನು ಪಡೆಯಬಲ್ಲರು. (2.14, 15) ಸಮತ್ವವನ್ನು ಸಾಧಿಸಿದ ಪುರುಷನು ದುಃಖವನ್ನು ಸಹಿಸುವುನು. ಆದರೆ ದುಃಖ ನೀಡುವ ವಿಷಯಗಳನ್ನೇನೂ ದ್ವೇಷಿಸುವುದಿಲ್ಲ. ಅಷ್ಟೇ ಏಕೆ ದುಃಖವನ್ನು ಕೂಡ ಅವನು ದ್ವೇಷಿಸುವುದಿಲ್ಲ. ಅದೇ ರೀತಿ ಸುಖ ಪ್ರಾಪ್ತಿಯಾದರೂ ಅದನ್ನು ಸ್ವಾಗತಿಸುತ್ತಾನೆ. ಆದರೆ ಹರ್ಷಿತನಾಗುವುದಿಲ್ಲ. ಎರಡೂ ಪ್ರಸಂಗಗಳಲ್ಲಿ ಉದಾಸೀನನಾಗಿ, ಅನಾಸಕ್ತನಾಗಿ ಇರುತ್ತಾನೆ. ಸ್ಥಾಯಿಕ ಸಾಧನೆಯಲ್ಲಿ ಈ ಸಮಬುದ್ಧಿಯಿಂದ ಶರೀರ ವಿಕಾರಗಳನ್ನು ತಿತಿಕ್ಷಾ ಭಾವದಿಂದ ತನ್ನ ನಿಯಂತ್ರದಲ್ಲಿರಿಸಿಕೊಳ್ಳಲಾಗುವುದು. ಜರಾ, ಮರಣ, ದುಃಖ ಮುಂತಾದವುಗಳಿಂದ ಸಾಧಕನು ಪಲಾಯನ ಗೈಯುವುದಿಲ್ಲ. ಉಚ್ಚ ಔದಾಸೀನ್ಯವನ್ನು ಸಿದ್ಧಿಸಿಕೊಂಡು, ಶಾರೀರಿಕ ವಿಕಾರಗಳ ಮೇಲೆ ವಿಜಯ ಸಾಧಿಸಿ, ನಿಮ್ನ ಪ್ರಕೃತಿಯ ಮುಖವಾಡವನ್ನು ಕಂಡು ಗಾಬರಿಯಾಗಿ ಓಡಿಹೋಗದೇ ಪುರುಷ ವೃಷಭನು ಪುರುಷ ಸ್ವರೂಪದಲ್ಲಿ ಸ್ಥಿರವಾಗಿ ನಿಲ್ಲುವುನು.

ಸ್ವಾಭಾವಿಕ ವೃತ್ತಿ ಅವನಲ್ಲಿ ಹುಟ್ಟುವುದಿಲ್ಲ. ಈ (ನಿಮ್ನ) ಪ್ರಕೃತಿಯ ಜೊತೆ ಹೋರಾಡಿ ಅದನ್ನು ಗೆಲ್ಲಬೇಕಾಗಿದೆ. ಅಪರಾ ಪ್ರಕೃತಿಯನ್ನು ಪರಾಭೂತಗೊಳಿಸಬೇಕಾಗಿದೆ. ಅಂಥವನಿಗೆ ಪ್ರಕೃತಿಯು ಕೂಡ ತನ್ನ ಮುಸುಗು ಸರಿಸಿ ತನ್ನ ಪರಾ ಪ್ರಕೃತಿಯ ಸ್ವರೂಪವನ್ನು ಸಾಕ್ಷಾತ್ಕರಿಸಿ ಕೊಡುತ್ತದೆ. ಅಂಥ ವ್ಯಕ್ತಿಯು ಪ್ರಕೃತಿಯ ದಾಸನಾಗಿ ಅಲ್ಲ, ಅದರ ರಾಜನಾಗಿದ್ದಾನೆ ಎಂಬುದನ್ನು ಮನವರಿಕೆ ಮಾಡಿಕೊಡುತ್ತದೆ.

ಸ್ಟಾಯಿಕ್ ಅಥವಾ ಅನಾಸಕ್ತ ಸ್ಥಿತಿಯ ಸಾಧನೆಯನ್ನು ಗೀತೆ ಏನೂ ತಿರಸ್ಕರಿಸುವುದಿಲ್ಲ, ಅದನ್ನು ಒಪ್ಪಿಕೊಳ್ಳುತ್ತದೆ. ಅದನ್ನು ಪರಾಕ್ರಮದ ಸಾಧನೆ ಎಂದೂ ಮಾನ್ಯ ಮಾಡುತ್ತದೆ. ಆದರೆ ತಾಮಸಿಕ ನಿವೃತ್ತಿಯನ್ನು ಮಾನ್ಯ ಮಾಡುವಾಗ ಯಾವ ನಿಯಮವನ್ನು ಗೀತೆ ಹೇಳುತ್ತದೋ ಅದೇ ನಿಯಮವನ್ನು ಇಲ್ಲಿಯೂ ಹೇಳುತ್ತದೆ. ಸಾತ್ವಿಕ ಜ್ಞಾನ ದೃಷ್ಟಿಯನ್ನು ಪಡೆದು ಅನಾಸಕ್ತ ಸಾಧನೆಯ ಮೂಲಕ ಊರ್ಧ್ವಮುಖನಾಗಬೇಕೆಂದು ಗೀತೆ ವಿಧಿಸುತ್ತದೆ. ಅನಾಸಕ್ತ ಯೋಗ ಅನುಸಂಧಾನ ಮಾಡಿದರೂ ಅದರ ಅಂತಿಮ ಲಕ್ಷ್ಯವು ಆತ್ಮ ಸಾಕ್ಷಾತ್ಕಾರವೇ ಆಗಿರಬೇಕು. ಪರಾಪ್ರಕೃತಿಯ ಪ್ರಾಪ್ತಿಗಾಗಿ ಒಂದೊಂದೇ ಮೆಟ್ಟಿಲು ಏರುತ್ತ, ಅನಾಸಕ್ತ (ಅಥವಾ ಸ್ಟೋಯಿಕ್) ಸಾಧನೆಯ ಮೂಲಕ ಊರ್ಧ್ವಮುಖ ಬೆಳವಣಿಗೆ ಸಾಧಿಸಬೇಕು. ಇದೇ ಗೀತೆಯ ಮುಖ್ಯ ನಿಯಮ. ಅನಾಸಕ್ತಿ ಯೋಗವು ಸಾಮಾನ್ಯವಾಗಿ ಎಲ್ಲ ಮಾನವೀಯ ಸಂಬಂಧಗಳನ್ನು ಹಿಸುಕಿ ಹಾಕುತ್ತದೆ. ಅದು ತಾಮಸಿಕ ನಿವೃತ್ತಿಗಿಂತ ಸ್ವಲ್ಪ ಕಡಿಮೆ ಹಾನಿಕಾರಕವಾಗಿರಬಹುದು. ನಿಷ್ಫಲವಾದ ನಿರಾಶಾವಾದ ಹಾಗೂ ನಿಷ್ಕ್ರಿಯತೆಯ ತಾಮಸಿಕ ನಿವೃತ್ತಿಗಿಂತ ತುಸು ಹೆಚ್ಚು ಲಾಭದಾಯಕವಾಗಿರಲೂ ಬಹುದು, ಆದರೆ ಅದು ತೀರ ಒಳ್ಳೆಯದು, ಹಿತಕರ ಎಂದು ಹೇಳಲಾಗದು. ಏಕೆಂದರೆ ಅದರ ಪರಿಣಾಮವಾಗಿ ನಾವು ಸಂವೇದನಾ ಶೂನ್ಯರಾಗಬಹುದು. ಮಾನವನಿಗೆ ಅನೈಸರ್ಗಿಕವಾದ ಒಂಟಿ ಜೀವನ ಬೇಕೆನಿಸಬಹುದು ಹಾಗೂ ಇದರಿಂದ ನಿಜವಾದ ಮುಕ್ತಿಯನ್ನು ಪಡೆಯದೇ ಹೋಗಬಹುದು. ಗೀತೆಯು ತನ್ನ ಸಮಗ್ರ ಉಪದೇಶದಲ್ಲಿ ಅನಾಸಕ್ತಿ ಯೋಗವನ್ನೊಂದು ಘಟಕವನ್ನಾಗಿ ಮಾತ್ರ ಸ್ವೀಕರಿಸುತ್ತದೆ, ವಿಕಾರವುಳ್ಳ ಮನಸ್ಸಿಗೆ ಅವಿಕಾರಿಯಾದ ಆತ್ಮವನ್ನು ಪರಿಚಯ ಮಾಡಿಕೊಡಲು ಮತ್ತು ಆ ಬಗ್ಗೆ ಒಲವು ಮೂಡಿಸಲು ಇದರಿಂದ ಸಾಧ್ಯವಾಗುವುದೆಂದು ಅನಾಕಸ್ತ ಸಾಧನೆಯನ್ನು ಗೀತೆ ಒಪ್ಪಿಕೊಂಡಿದೆ ಮತ್ತು ಈ ಸಮ ಸ್ಥಿತಿಯಲ್ಲಿ ಪರಂ ದೃಷ್ಟ್ವಾ, ಅಂದರೆ ನಿರ್ವಿಕಾರ ಆತ್ಮನ ಸಾಕ್ಷಾತ್ಕಾರ ಅಸಾಧ್ಯವಲ್ಲ ಎಂಬ ದೃಷ್ಟಿಯಿಂದ ಅದನ್ನು ಮಾನ್ಯ ಮಾಡಿದೆ. ಇದನ್ನು ಗೀತೆ 'ಏಷಾ

ಬ್ರಾಹ್ಮೀ ಸ್ಥಿತಿ' ಎಂದೂ ಮನ್ನಿಸುತ್ತದೆ. ವಿವೇಚಕ ಬುದ್ಧಿಯ ಆಚೆಗೆ ಇರುವ ಶ್ರೇಷ್ಠ ತತ್ತ್ವವನ್ನು "ಆತ್ಮವನ್ನು" ಅರ್ಥೈಸಿಕೋ, ಅದರ ಮೂಲಕ ಆತ್ಮ ಸಂಯಮ ಸಾಧಿಸು, ನಿನ್ನಲ್ಲಿ ಸ್ಥೈರ್ಯ, ಶಾಂತಿಗಳನ್ನು ದೃಢಪಡಿಸಿಕೊ ಮತ್ತು ಕಾಮರೂಪ ದುರ್ಧರ್ಷ್ಯ ಶತ್ರುವನ್ನು ನಾಶಗೊಳಿಸು (3.43) ಎಂದು ಆದೇಶಿಸುತ್ತದೆ. ಗೀತೆಯು ತಾಮಸಿಕ ಹೇವರಿಕೆಯನ್ನು ಅಥವಾ ಹಿಂಜರಿಕೆಯನ್ನು ಪಲಾಯನವನ್ನು ಹಾಗೂ ರಾಜಸಿಕ ಹೋರಾಟ, ಗೆಲುವು, ವಿಜಯಗಳನ್ನು ಸಮರ್ಥಿಸುವುದು ಕೇವಲ ಒಂದೇ ನಿಯಮದ ಮೇಲೆ, ಅದೇನೆಂದರೆ ಅವು ತಮ್ಮನ್ನು ಮೀರಿ, ಸಾತ್ವಿಕ ತತ್ತ್ವದ ಸಹಾಯದಿಂದ ಆತ್ಮ–ಜ್ಞಾನದ ಮಟ್ಟಕ್ಕೆ ಏರಬೇಕು; ಅನ್ಯಥಾ ಅವುಗಳನ್ನು ಗೀತೆ ಮಾನ್ಯ ಮಾಡುವುದಿಲ್ಲ.

ಯೋಗ್ಯನಾದ ತತ್ತ್ವಜ್ಞಾನಿಯು, ಮನೀಷಿ, ಆ ಜನ್ಮ ಸಾಧು ಪುರುಷ ಇವರೆಲ್ಲ ತಮ್ಮಲ್ಲಿರುವ ಸಾತ್ವಿಕ ತತ್ತ್ವವನ್ನೇ ನಂಬುತ್ತಾರೆ ಮತ್ತು ಅದನ್ನೇ ಅವಲಂಬಿಸಿರುತ್ತಾರೆ. ಅದನ್ನೇ ಆತ್ಮ ವಿಜಯ, ಆತ್ಮ ಪ್ರಭುತ್ವದ ಸಿದ್ಧಿಗಾಗಿ ಆರಂಭದಿಂದಲೂ ಉಪಕರಣವಾಗಿ ಉಪಯೋಗಿಸುತ್ತಾರೆ. ಅವರು ಆರಂಭ ಮಾಡುವುದೇ ಸಾತ್ವಿಕ ಅಮತ್ವದ ಮೂಲಕ. ಭೌತಿಕ ಜಗದ ನಶ್ವರತೆಯನ್ನು ಬಾಹ್ಯ ಜಗತ್ತಿನ ಅನಿತ್ಯತೆಯನ್ನು, ಭೌತಿಕದ ಯಾವ ಭೋಗಗಳೂ ಶಾಶ್ವತ ಆನಂದವನ್ನು ನೀಡುವುದಿಲ್ಲ ಎಂಬ ಸತ್ಯವನ್ನು ಅವರು ಸದಾ ಗಮನಿಸುತ್ತಾರೆ. ಆದರೆ ಅದರಿಂದ ಅವರು ದುಃಖಿತರಾಗಿರುವುದಿಲ್ಲ, ಭಯ, ನಿರಾಶೆ, ಹತಾಶೆ, ಏನನ್ನೂ ಅನುಭವಿಸುವುದಿಲ್ಲ. ಎಲ್ಲವನ್ನೂ ಅವರು ಪ್ರಶಾಂತ ದೃಷ್ಟಿಯಿಂದ ನೋಡುತ್ತಾರೆ. ತಮ್ಮ ಆಯ್ಕೆಯನ್ನು ಯಾವ ವಿಕರ್ಷಣೆ ಅಥವಾ ಗೊಂದಲವಿಲ್ಲದೇ ಮಾಡುತ್ತಾರೆ. "ಇಂದ್ರೀಯಾರ್ಥಗಳನ್ನು ಅವಲಂಬಿಸಿದ ಸುಖವು ಕಾಲಾಂತರದಲ್ಲಿ ದುಃಖವನ್ನೇ ಉಂಟು ಮಾಡುವುದು. ಈ ಸುಖವು ಹುಟ್ಟು ಹಾಗೂ ಸಾವು ಎರಡನ್ನೂ ಹೊಂದಿದೆ (ಉತ್ಪತ್ತಿ–ನಾಶ ಎರಡನ್ನೂ ಹೊಂದಿದೆ). ಅಂತೆಯೇ ಜಾಗೃತ ಬುದ್ಧಿಯುಳ್ಳ ವಿವೇಕಿಗಳು ಈ ಸುಖವನ್ನು ಮನ್ನಿಸುವುದಿಲ್ಲ. ಬಾಹ್ಯ ವಸ್ತುಗಳಲ್ಲಿ ಅವರಿಗೆ ಆಕರ್ಷಣೆಯೇ ಇರುವುದಿಲ್ಲ. ಅವರಿಗೆ ತಮ್ಮ ಅಂತರಾತ್ಮನಲ್ಲಿರುವ ಆನಂದವೇ ತೃಪ್ತಿ ನೀಡುತ್ತದೆ" (5.21, 22) ಅವರು ತಮಗೆ ತಾವೇ ಮಿತ್ರರು ಹಾಗೂ ಶತ್ರುಗಳು ಎಂಬಂತೆ ವ್ಯವಹರಿಸುತ್ತಾರೆ. ತಮ್ಮನ್ನು ಆಶೆ, ಉದ್ವೇಗ, ಆವೇಶಗಳ ಕೈಗೆ ಕೊಟ್ಟು ಅಸಹಾಯಕರಾಗುವುದಿಲ್ಲ. ಬದಲಾಗಿ ತನ್ನ ಆಂತರಿಕ ಶಕ್ತಿಯ ಮೂಲಕ ಬಂಧನದಿಂದ ಹೊರ ಬರುತ್ತಾರೆ. ಉದ್ಧೃಏದಾತ್ಮನಾತ್ಮಾನಂ

ನಾತ್ಮಾನಮ ಸಾದಯೇತ್, ನಿಮ್ನ ಸ್ತರದ ಪ್ರವೃತ್ತಿಗಳ ಆತ್ಮನನ್ನು ಗೆದ್ದರೆ ಉನ್ನತ ಆತ್ಮನು ಅವರಿಗೆ ಮಿತ್ರನಂತೆ ತೋರುತ್ತಾನೆ. ಉತ್ತಮ ಸಂಗಾತಿಯಾಗಿ ಸಹಾಯ ಮಾಡುತ್ತಾನೆ. (6.5, 6) ತತ್ತ್ವಜ್ಞಾನಿಯು ಜ್ಞಾನಪ್ರಾಪ್ತಿಯ ದೆಶೆಯಿಂದಾಗಿ ತೃಪ್ತನಾಗಿರುತ್ತಾನೆ. ತನ್ನ ಇಂದ್ರಿಯಗಳನ್ನು ತನ್ನ ವಶದಲ್ಲಿರಿಸಿಕೊಂಡಿರುತ್ತಾನೆ. ಅವನು ಸಾತ್ವಿಕ ಸಮತ್ವವನ್ನು ಧಾರಣ ಮಾಡಿದ ಯೋಗಿಯಾಗಿರುತ್ತಾನೆ. ಏಕೆಂದರೆ ಸಮತ್ವಂ ಯೋಗ ಉಚ್ಯತೇ (2.48) ಎಂಬುದು ಪ್ರಸಿದ್ಧವಾಗಿದೆ. ಅವನಿಗೆ ಮಣ್ಣೂ ಒಂದೇ, ಕಲ್ಲೂ ಒಂದೇ, ಬಂಗಾರವೂ ಒಂದೇ, ಅಲ್ಲಿ ಭೇದ ಕಾಣುವುದಿಲ್ಲ. ಅವನು ಸದಾ ಶಾಂತನಾಗಿರುತ್ತಾನೆ. ಆತ್ಮಸಂಯಮಿ, ಆತ್ಮಸಂತುಲಿತನಾಗಿರುತ್ತಾನೆ. ಅವನು ಶೀತೋಷ್ಣ ಸುಖ–ದುಃಖ, ಮಾನಾಪಯಾನಗಳಲ್ಲಿ ಸಮನಾಗಿ ವರ್ತಿಸುತ್ತಾನೆ. ಅವನಿಗೆ ಮಿತ್ರರೂ ಅಷ್ಟೇ, ಶತ್ರುಗಳೂ ಅಷ್ಟೇ, ಅವನ ಆತ್ಮಭಾವದಲ್ಲಿ ಅವರ ನಡುವೆ ವ್ಯತ್ಯಾಸವಿಲ್ಲ. ಅವನು ಸದಾ ನಿರುದ್ವೇಗಿ, ಅನಾಸಕ್ತ, ತಟಸ್ಥನಾಗಿರುತ್ತಾನೆ; ಏಕೆಂದರೆ ಎಲ್ಲ ಸಂಬಂಧಗಳು ಸಾಪೇಕ್ಷ, ಜೀವನದಲ್ಲಿ ಎಲ್ಲವೂ ಸಮಯಾನುಸಾರ, ಸಂದರ್ಭಾನುಸಾರ ಬದಲಾಗುತ್ತಿರುತ್ತವೆ ಎಂಬುದು ಅವನಿಗೆ ಗೊತ್ತು. ತತ್ತ್ವಜ್ಞನಾದವನು ವಿದ್ಯೆ, ಪಾವಿತ್ರ್ಯ, ಸದಾಚಾರ ಮುಂತಾದವುಗಳ ಮೇಲೆ ಆಧಾರ ಪಟ್ಟಿರುವ ಶ್ರೇಷ್ಠ–ಕನಿಷ್ಠತೆಗಳ ಕಡೆಗೆ ಲಕ್ಷ್ಯವಹಿಸುವುದಿಲ್ಲ. ಎಲ್ಲರ ಜೊತೆಗೂ ಅವನು ಒಂದೇ ತೆರನಾಗಿ ವ್ಯವಹರಿಸುತ್ತಾನೆ. ಅವನಿಗೆ ಎಲ್ಲರೂ ಅಷ್ಟೇ, ಪಾಪಿಯೂ ಅಷ್ಟೇ ಪುಣ್ಯವಂತನೂ ಅಷ್ಟೇ ಸಾಧುವೂ ಅಷ್ಟೇ ಸಂತನೂ ಅಷ್ಟೇ, ಕಲಿತವನು, ಪಂಡಿತನು, ವಿದ್ವಾಂಸ, ಬೇರೆ ಅಲ್ಲ ಕಲಿಯದ ಮೂಢ ಬೇರೆ ಅಲ್ಲ. ಅವನಿಗೆ ಸುಸಂಸ್ಕೃತನಾದ ಬ್ರಾಹ್ಮಣನೂ ಒಂದೇ, ಅಸ್ಪೃಶ್ಯನೆನಿಸಿಕೊಂಡ ಶೂದ್ರನೂ ಒಂದೇ (6.7, 8.9, 5.18) ಸಾತ್ವಿಕ ಸಮತ್ವದ ವ್ಯವಹಾರವನ್ನು ಗೀತೆ ಈ ರೀತಿ ಸ್ಪಷ್ಟ ಶಬ್ದಗಳಲ್ಲಿ ವರ್ಣಿಸುತ್ತದೆ. ಜಗತ್ತಿಗೆ ಪರಿಚಿತನಾಗಿರುವ ತತ್ತ್ವಜ್ಞಾನಿಯು ಶಾಂತ, ತತ್ವಾಧಿಷ್ಠಿತ ಸಮತ್ವದ ದೃಷ್ಟಿಯುಳ್ಳವನಾಗಿರುತ್ತಾನೆ ಎಂಬುದನ್ನು ಗೀತೆ ಬಗೆ ಬಗೆಯಾಗಿ ವಿವರಿಸುತ್ತದೆ.

ಹಾಗಾದರೆ ಈ ತತ್ತ್ವಜ್ಞಾನಿಯು ಸಮತ್ವ ಬುದ್ಧಿ ಮತ್ತು ಗೀತೆಯು ಪ್ರತಿಪಾದಿಸುವ ವಿಶಾಲತರ ಸಮತ್ವ ಬುದ್ಧಿ ಇವೆರಡರ ವ್ಯತ್ಯಾಸವೆಲ್ಲಿದೆ? ತತ್ತ್ವಜ್ಞಾನಿಯ ಸಮತ್ವ ಬುದ್ಧಿಯು ಬೌದ್ಧಿಕ ತಾತ್ವಿಕ ವಿಶ್ಲೇಷಣೆಯ ಮೇಲೆ ಮತ್ತು ವಿವೇಕದ ಮೇಲೆ ಆಧಾರಿತವಾಗಿರುತ್ತದೆ. ಆದರೆ ಗೀತೆಯ ಸಮತ್ವದ ಬುದ್ಧಿಯು ಆಧ್ಯಾತ್ಮಿಕ ವೇದಾಂತ ಪ್ರತಿಪಾದಿತ ಏಕತ್ವದ ಜ್ಞಾನದ ಮೇಲೆ ಆಧಾರಿತವಾಗಿರುತ್ತದೆ.

ಇದೇ ಅವೆರಡರ ನಡುವೆ ಇರುವ ಅಂತರ. ತತ್ತ್ವಜ್ಞಾನಿಯು ಸಮತ್ವವನ್ನು ತನ್ನ ಬುದ್ಧಿಯ ಬಲದ ಮೇಲಿಂದ ಕಾಯ್ದುಕೊಳ್ಳುತ್ತಾನೆ. ತರ್ಕ, ವಿಶ್ಲೇಷಣೆ ಇವುಗಳ ಮೂಲಕ ಕಾಯ್ದುಕೊಳ್ಳುತ್ತಾನೆ. ಆದರೆ ವಾಸ್ತವವಾಗಿ ಈ ತಳಹದಿ ಗಟ್ಟಿಯಾಗಿರುವುದಿಲ್ಲ. ಅನುಮಾನಾಸ್ಪದವಾಗಿರುತ್ತದೆ. ಏಕೆಂದರೆ ಮನಸ್ಸಿನ ಮೇಲೆ ನಿರಂತರ ಪ್ರಯತ್ನದ ಮೂಲಕ ನಿಯಂತ್ರಣ ಸಾಧಿಸಿದ್ದರೆ, ಪ್ರಭುತ್ವ ಸಂಪಾದಿಸಿದ್ದರೆ. ಅದೇನೂ ಮಹತ್ವದ ಗೆಲುವಲ್ಲ, ಅಲ್ಲಿ ನಿಮ್ಮ ಪ್ರಕೃತಿಯ ಹಿಡಿತದಿಂದ ಸಂಪೂರ್ಣ ಬಿಡುಗಡೆ ಹೊಂದಿರುವುದಿಲ್ಲ. ಅಷ್ಟೇ ಅಲ್ಲ ಪ್ರಸಂಗ ಬಂದಾಗ ಯಾವುದಾದರೊಂದು ರೀತಿಯಲ್ಲಿ ನಿಗ್ರಹಕ್ಕೆ ಪ್ರತಿಯಾಗಿ ಸೇಡು ತೀರಿಸಿಕೊಳ್ಳುವ ರೀತಿಯಲ್ಲಿ ಬಾಹ್ಯದಲ್ಲಿ ಪ್ರಕಟವಾಗಿ ತನ್ನಿರವನ್ನು ಅದು ಸಾಬೀತು ಪಡಿಸುತ್ತದೆ. ನಿಮ್ಮ ಪ್ರಕೃತಿಯು ತ್ರಿಮುಖ ಪ್ರವೃತ್ತಿಯುಳ್ಳದ್ದಿರುತ್ತದೆ. ಅದರೆ ವ್ಯವಹಾರವು ತ್ರಿಮುಖವಾಗಿರುತ್ತದೆ. ರಾಜಸಿಕ ಹಾಗೂ ತಾಮಸಿಕ ಗುಣಗಳು ಯಾವಾಗಲೂ ಸಾತ್ವಿಕ ಮನುಷ್ಯನ ಮೇಲೆ ಒತ್ತಡ ಹೇರುವ ಪ್ರಯತ್ನ ಮಾಡುತ್ತಲೇ ಇರುತ್ತವೆ. ಇಂದ್ರಿಯಗಳು ಹಠ ಹಿಡಿದು ಛಲ ಹಿಡಿದು ಎಂಥ ವಿದ್ವಾಂಸನನ್ನಾದರೂ ಮರುಳು ಮಾಡಿ ಸಲ್ಲದ ದಾರಿಯಲ್ಲಿ ಎಳೆದೊಯ್ಯುತ್ತವೆ. ಬಲವಾನ್ ಇಂದ್ರಿಯಗ್ರಾಮೋ ವಿದ್ವಾಂಸಮಪಿ ಕರ್ಷತಿ. (2.60) ಪೂರ್ಣತೆಯ ಪ್ರಯತ್ನದಲ್ಲಿ ಸಾತ್ವಿಕ ಸಮತ್ವಕ್ಕಿಂತ ಶ್ರೇಷ್ಠವಾದ ಆಧಾರ ದೊರೆಯದ ಹೊರತು ಪೂರ್ಣ ಸುರಕ್ಷೆಯು ಲಭಿಸುವುದಿಲ್ಲ. ದಿವ್ಯ ಆತ್ಮವು ವಿವೇಕ ಬುದ್ಧಿಗಿಂತ ಬಹಳ ಶ್ರೇಷ್ಠವಾಗಿದೆ. ತತ್ತ್ವಜ್ಞಾನಿಯ ಬುದ್ಧಿವಾದಿ ಆತ್ಮ ಸ್ಥಿತಿ ಬೇರೆ, ದಿವ್ಯ ಋಷಿ ಮುನಿಗಳ ಪರಿಕಲ್ಪನೆಯ ಆತ್ಮ ಸ್ಥಿತಿ ಬೇರೆ. ಈ ಋಷಿ ಮುನಿಗಳ ಆತ್ಮವು ತ್ರಿಗುಣಾತೀತವಾಗಿರುತ್ತದೆ. ಅಂತೆಯೇ ದಿವ್ಯ ಆತ್ಮ ಸತ್ತೆಯ ಮೂಲಕ ಸಮತ್ವ ಸಾಧಿಸಿಕೊಂಡರೆ ಅದು ಪರಿಪೂರ್ಣವಾಗಿರುತ್ತದೆ, ಸುರಕ್ಷಿತವಾಗಿರುತ್ತದೆ. ಮಾನವನು ತ್ರಿಗುಣಗಳ ರಾಜ್ಯದಿಂದ ಮೇಲಕ್ಕೇರಿ, ಆಧ್ಯಾತ್ಮಿಕ ಪ್ರಕೃತಿಯ ಸ್ಥಿತಿಯಲ್ಲಿ ಬಾಹ್ಯ ಜೀವನ ನಡೆಸಬೇಕು. ಇಲ್ಲವೂ ಈ ರೀತಿ ಪರಮ ಶ್ರೇಷ್ಠ ದಿವ್ಯ ಆಧ್ಯಾತ್ಮಿಕ ಸಹಜ ಸ್ಥಿತಿಯನ್ನು ಹೊಂದಬೇಕು. ಇದೇ ಅಂತಿಮ ಸ್ಥಿತಿಯಾಗಿದೆ.

ಅನಾಸಕ್ತಿಯ ಸಮತ್ವ ಹಾಗೂ ತತ್ತ್ವಜ್ಞಾನಿಯ ಸಮತ್ವಗಳು ಪ್ರಪಂಚದಿಂದ ಪಲಾಯನಗೈಯ್ಯುವತ್ತ ವಾಲುತ್ತವೆ. ಅಂತರಂಗದಲ್ಲಿ ಏಕಾಂಗಿಯ ಸ್ವಾತಂತ್ರ್ಯ, ಬಾಹ್ಯ ಜಗತ್ತಿನ ಜನರಿಂದ ದೂರ ಇಂಥ ಪ್ರವೃತ್ತಿಯನ್ನು ಬೆಳೆಸಿಕೊಳ್ಳುತ್ತವೆ. ಆದರೆ ದಿವ್ಯ ಜನ್ಮವನ್ನು ಪಡೆದ, ದಿವ್ಯ ಸಾಕ್ಷಾತ್ಕಾರ ಹೊಂದಿದ ವ್ಯಕ್ತಿಯು ಪರಮಾತ್ಮನನ್ನು

ತನ್ನಲ್ಲಿ ಮಾತ್ರವಲ್ಲ ಎಲ್ಲ ಜೀವಿಗಳಲ್ಲೂ ಕಾಣುತ್ತಾನೆ. ಹೀಗಾಗಿ ಅವನು ಸದಾ ಕರುಣೆ, ಏಕತೆಯ ಭಾವಗಳಿಂದ ತುಂಬಿರುತ್ತಾನೆ. ಅವನು ಎಲ್ಲರನ್ನೂ ತನ್ನಂತೆಯೇ ಕಾಣುತ್ತಾನಾದ್ದರಿಂದ ಅವನಿಗೆ ಕೇವಲ ತನ್ನೊಬ್ಬನ ಮುಕ್ತ ಮುದ ನೀಡುವುದಿಲ್ಲ. ಅವನು ಉಳಿದವರ ಸಂತೋಷದ ಭಾರವನ್ನೂ ಹೋರುತ್ತಾನೆ. ಆದರೆ ತಾನು ಮಾತ್ರ ನಿರ್ಲಿಪ್ತನಾಗಿ, ಅಬಾಧಿತನಾಗಿರುತ್ತಾನೆ. ಪರಿಪೂರ್ಣನಾದ ಪುರುಷನು ಸರ್ವಭೂತ ಹೀತೇರತಃ ಎಂದು ಸದಾ ಜನ ಸೇವೆಯಲ್ಲಿ ಮುಳುಗಿ ಹೋಗಿರುತ್ತಾನೆ. ಪರಿಪೂರ್ಣವಾದ ಯೋಗಿಯು ಕೇವಲ ಆತ್ಮಾನುಸಂಧಾನದಲ್ಲಿ ಮುಳುಗುವುದಿಲ್ಲ. ತನ್ನದೇ ಆದ ಆಧ್ಯಾತ್ಮಿಕ ದಂತದರ ಮನೆಯಲ್ಲಿ ಏಕಾಕಿಯಾಗಿ ವಾಸ ಮಾಡುವುದಿಲ್ಲ. ಆದರೆ ಯುಕ್ತಃ ಕೃತ್ಸ್ನ ಕರ್ಮಕೃತ್ (4.18) ಯುಕ್ತವಾದ ವಿಹಿತ ಕರ್ಮಗಳನ್ನು ಮಾಡುತ್ತ ಹೋಗುತ್ತಾನೆ. ವಿಶ್ವದ ಒಳಿತಿಗಾಗಿ, ಶಾಂತಿಗಾಗಿ ಮಾಡಬಹುದಾದ ಎಲ್ಲ ಕಾರ್ಯಗಳನ್ನೂ ಮಾಡುತ್ತಾನೆ. ಅದೇ ದೇವದೇವನ ಸೇವೆ ಎಂದು ಭಾವಿಸುತ್ತಾನೆ. ಏಕೆಂದರೆ ಅವನು ಭಕ್ತನೂ ಹೌದು, ಪರಮಾತ್ಮನನ್ನು ಅತಿಶಯವಾಗಿ ಪ್ರೀತಿಸುವ ಪುರುಷ ಅವನು, ಅದೇ ವೇಳೇಗೆ ಸಾಧು, ಋಷಿ, ಯೋಗಿ ಎಲ್ಲವೂ ಹೌದು, ಎಲ್ಲದಲ್ಲೂ, ಎಲ್ಲದರಲ್ಲೂ ಈಶ್ವರನನ್ನೇ ಕಾಣುತ್ತ, ಅಂತೆಯೇ ಎಲ್ಲವನ್ನೂ, ಎಲ್ಲರನ್ನೂ ಪ್ರೀತಿಸುತ್ತಾನೆ. ತನಗೇನೆಲ್ಲ ಪ್ರಿಯವೆನಿಸುವುದೋ (ಅವನಿಗೆ ಎಲ್ಲವೂ ಪ್ರಿಯವೇ ಅನಿಸುವುದು!) ಅದರ ಸೇವೆ ಮಾಡಲು ಅವನೇನೂ ಹಿಂಜರಿಯುವುದಿಲ್ಲ. ಅದರಿಂದಾಗಿ ಅವನ ಏಕತೆಗೇನೂ ಧಕ್ಕೆ ಬರುವುದಿಲ್ಲ. ಆನಂದಕ್ಕೇನೂ ಬಾಧೆಯಾಗುವುದಿಲ್ಲ. ಏಕೆಂದರೆ ಅವನ ಎಲ್ಲ ಕಾರ್ಯಗಳು ಅವನಂತರಂಗದಲ್ಲಿರುವ ಏಕೈಕನಾದ ಪರಮಾತ್ಮನಿಂದಲೇ ಸಂಪನ್ನವಾಗುತ್ತವೆ. ಎಲ್ಲವೂ ಆ ಅದ್ವಿತೀಯನಾದ ಪರಮಾತ್ಮನಿಗೇ ಸಲ್ಲುತ್ತವೆ. ಹೀಗೆ ಗೀತೆಯು ಹೇಳುವ ಸಮತ್ವವು ವಿಶಾಲವಾಗಿದ್ದು ಎಲ್ಲವನ್ನೂ ತನ್ನೊಳಗೆ ಸಮಾವೇಶಗೊಳ್ಳುತ್ತದೆ. ಎಲ್ಲದಕ್ಕೂ ಪೂರ್ಣತ್ವವನ್ನು ಕಲ್ಪಿಸುತ್ತದೆ. ಎಲ್ಲವನ್ನೂ ದೈವತ್ವಕ್ಕೆ, ಏಕತೆಗೆ, ಶ್ರೇಷ್ಠತೆಗೆ ಎತ್ತರಿಸುತ್ತದೆ.

(ಸಶೇಷ)

## ಶ್ರೀ ಅರವಿಂದರ
# 'ಪ್ರೇಮ ಮತ್ತು ಮೃತ್ಯು'

**– ಅನು: ಸಮಷ್ಟಿ**

## ದೃಷ್ಟಿ 4

ತಪಸ್ಸಿನಿಂದಾ ತಮಸ್ಸನ್ನು ತೊಡೆದು ತೊಡೆತಟ್ಟುವ ತವರು ನೆಲೆಯತನಯನಿವನಿಗೆ
ತಡೆಯೊಡ್ಡುವ
ತ್ರಾಣವೊಂದಿಲ್ಲವಾ ತಾಣದಲಿ. ನಿಶೆಯ ಗಾಢಾಂಧಕಾರದೊಳು ಗುರಿಯಿಟ್ಟು,
ಅರಿಯದ ಅಂಧ ತಮಸ್ಸಿನೊಳು ಅಡಿಯಿಟ್ಟು, ತರಣಿಯೊಂದನೇರಿ
ವೈತರಣಿಯನು ದಾಟು, ಮೃತ್ಯುವಿನ ಮಹಾದ್ವಾರವನು ಮೀಟು. ಸಾವಿನ
ಸಂತೆಯಂತಿರುವಾ ಸಾಮ್ರಾಜ್ಯದಲಿ ಸೂತ್ರಧಾರನನೇ ಸೋಲಿಸಿ
ಸನ್ಮಾನಿತನಾಗು.
ಪ್ರಿಯಳಿಹ ಪ್ರಿಯಂವದೆಯ ಪ್ರಿಯಹಸ್ತವನು ಪಿಡಿದೇ ಪೃಥ್ವಿಪಾಳಯಕೆಂದಿಲ್ಲಿ
ಪುನಃ ಅವಿರ್ಭವಿಸು." ಪರ್ಯಾಯ ವಸನವಾದ ಪ್ರೇಮವನು
ಪುನರ್‌ಜೀವಿತಗೊಳಿಸಲೆಂದು ಪ್ರೇರಣೆಯಿತ್ತ ಪ್ರಿಯವಾಣಿಯದು
ಪೂರ್ಣಗೊಂಡಿತ್ತು. ಮೆರೆದ ಮನೋಕ್ಲೇಷವೆಲ್ಲ ಮರುಗಿ ಮಸ್ತಿಷ್ಕ
ಮಧುಕೋಶದೊಳಗೆ ಶಾಂತಿಯ ಬಿಂದುವೊಂದು ತೊಟಕಿಕ್ಕಿತ್ತು.
ನಯನಾರ್ದ್ರಗೊಂಡು ನಿಂತವನ ನಾಲಗೆಯದು ನಡೆದೋಡುವೊಲು
ನುಡಿದಿತ್ತು,
"ಮೃದುಮಧುರವಿಹ ಮಾಧುರ್ಯದಂತೆ, ಮಹಾಮೇರು–ಮಂದಾರದೊಲಿಹ
ಮಲೆಯಂತೆ
ಸುಂದರವಿಹ–ಸುಪ್ರತೀಕವಿಹ ಪ್ರೇಮದ ಪ್ರತಿಮೆಯೇ,
ಶಕ್ತಿಯಿಂದಾಗದ ಆ ಸಾಧನೆಯನು ಸಂಧಾನವೆಂಬೊಂದು ಸಂಯೋಗದಲಿ
ಸಿದ್ಧಿಸುವೆನು.
ಅನ್ನಮಯದಿಂದಾಗದ, ಪ್ರಾಣಮಯದಿಂ ಪರಿವರ್ತಿಸಲಾಗದ,
ಮನೋಮಯದಿಂ ಮುಗಿಯದ,
ಆತ್ಮಮಂಡಲದಿಂ ಆಪೋಶಿಸಲಾಗದ ಅನುಬಂಧವನು ಸಿಹಿ ನುಡಿಯ ಸೆರಗಿನಲಿ
ಸೆರೆಹಿಡಿದು ಸಂಭಾಳಿಸುವೆನು. ಕ್ರೂರ ಪಶುಗಳನವುಗಳ ಪಾಲಕನು ಪಳಗಿಸಿ
ಪಂಧ್ಯವಾಡಿಸುವೊಲು ಪ್ರೇಮದ ಪತಣದಲವವನು ಪ್ರೇರೇಪಿಸುವೆನು.

ಸುರಸನ್ನಿಧಾನವಿಹ ಸ್ವರ್ಗದೊಳು ಸರಸ್ವತಿ ಹಿಡಿದ ಸ್ವರವೀಣೆಯ ವಾಣಿಗೆ
ವಿಕ್ರಮವಿಹ ಅಕ್ರಮವಿಹ
ಆತ್ಮಗಳೆಲ್ಲ ಪ್ರಣೀತವಿಹ ಪುಣ್ಯ ಪಾವಕದೊಳು ಪುಟವಿಕ್ಕಿ ಪ್ರೇಮ ಪ್ರತಿಮೆಗಳಾಗಿ
ಪರಿವರ್ತಿತವಿರುವಂತೆ, ಅನಿಮೇಷರಿಹ ಅಮರ್ತ್ಯರೆದೆಯದು
ಅಶ್ರುಧಾರೆಯಲಿ ಮಜ್ಜನಗೈದು ಮಾಣಿಕ್ಯವಿರುವಂತೆ, ಗಂಧರ್ವ ಗಾನವನು
ಗೀತಿಸಿ ಗೋಲೋಕದಿಂ ಗಂಗೆಯನಿಳಿಸುವಂತವನ ಗಮನವನೆಲ್ಲ ಗ್ರಹಿಸಿ
ಗುರಿಮುಟ್ಟುವೆನು.
ಇಲ್ಲದಿರೆ ಕನಲಿ ಕಂಗಾಲಾಗಿ ಕಂಬನಿಗರೆದವನ ಕೇಂದ್ರದೊಳಿಹ ಕನಿಕರದ
ಕಟ್ಟೆಯನೊಡೆದು
ಕರುಣೆಯಿಂದವನು ಕೊಡುವ ಕಲ್ಯಾಣವತಿಯ ಕರವನಿಡಿದೀ ಕರ್ಮ
ಭೂಮಿಗೆಂದಿಲ್ಲಿ ಕರೆತರುವೆನು." ಮೃದುಹಾಸದ ಮಂಗಳಮೂರ್ತಿಯದು
ಮತ್ತೆ ಮುನ್ನುಡಿಯುತ ಮುಂಬರಿದಿತ್ತು,
"ವನಾಂತಿಕನಾಗಿ ವಿಧಿಯೊದಗಿಸಿದ ವಿರಹ–ವಿಯೋಗವೆಂಬೆರಡು ವೇದನೆಗಳಲಿ
ಒದ್ದಾಡಿ
ವಿವೇಕಹೀನನಿಹ ವಿನಯವಂತನೇ, ಮೃತ್ಯುವಿನ ಮಹಾಗುಹೆಯೊಳಗೆ ಮಾತಿನ
ಮಂಟಪಕೆ ಮರುಳಾಗುವ ಮನುಜರಾರಿಲ್ಲ. ಕರುಣೆಯಿರದಾ
ಕರ್ಮಜನಕಾ ಠಾಣೆಯಲಿ ಕರೆವ ಕಂಬನಿಗಳಿಗೆ ಕರುಗುವ
ಕಾರ್ಮಣರಾರಿಲ್ಲ. ಸುರಿವ ಸುಧಾಸಂಗೀತದ ಸುಮಧುರತೆಗೆ ಸುಂದಾಗಿ
ಸುಪ್ರೀತರಿಹ ಸುಮನಸರಾಲಿಲ್ಲ, ನಿಶೆಯ ನಿವಾಸಿಯಿಹ
ನಿಯಂತೃವಿನೆದುರು ನೀನಾಡುವ ನುಡಿಯೆಲ್ಲ ನಿಶ್ಚಲವಿಹುದು
ನಿಷ್ಫಲವಿಹುದು. ಅರಳುತ್ತಲೇ ಅಡರಿ ಹೋಗುವ ಅಲರೊಂದರ
ಅಂತಕನಾದವನ ಅಂಧಕಾರದೊಳಗೆ ಅಶ್ರುಧಾರೆಗೆ ಅವಕೃಪೆಯಿಹುದು.
ಕಠೋರ ಕಲ್ಲಿನಂತಿರುವಾ ಕಣ್ಣುಗಳಲಿ ಕುಣಿಸಿ ಕಟ್ಟಾಡಿಸುವ ಕಲೆಗೆ
ಪ್ರೋತ್ಸಾಹವಿರದ ತಾತ್ಸಾರವಿಹುದು.
ಭೌತಿಕದೊಳಗೆ ಭಯದಿ ಬದುಕುತಿಹ ಬಾಂಧವರಿಗೆಲ್ಲ ಬುವಿಯಿಂ
ಭುವನದೆಡೆಗೆ ಭವಿಸಲಿಕ್ಕಿರುವ
ಏಕಮಾತ್ರ ಮಾರ್ಗವೆಂದರದುವೆ ಯಜ್ಞ!
ಯಜ್ಞವೆಂದರೆ, ಯಾಜಮಾನ್ಯವ ವಹಿಸಿದ ಯಜ್ಞಾತುರನೋರ್ವ ಹೋತೃ–
ಅಧ್ವರ್ಯುವೆಂಬಾದಿ

ಯಜ್ಞದೀಕ್ಷಿತರಯ ಜನದಲಿ ಸಮಿತ್ತಾದಿ ಅರಣಿಮತ್ತಾದಿ ಯಜ್ಞೋಪಕರಣಗಳಿಂ
ಯೋಜಿಸಿದ
ಯಜ್ಞಕುಂಡದೊಳು ಹೊತ್ತಿಸಿದ ಪಾರ್ಥಿವಾಗ್ನಿಯೊಳು ಘೃತಸೋಮಧುಕ್ಷೀರಾದಿ
ದ್ರವರಸಗಳಿಂ
ಅಪೂಪುರೋಡಾಶಕರಂಭಾದಿ ಭಕ್ಷ್ಯಭೋಜ್ಯಗಳಿಂ ಹೋಮಿಸಿ
ಹೋಮಕುಂಡದೊಳು
ಹವಿಸ್ಸಿದೆಂದು ಹರಿಸಿ ಧೂಮವನೆಬ್ಬಿಸುವ ಧಾಮಧೂಮಾದಿಯಾದ
ದುಂದುಗಾರಿಕೆಯಲ್ಲ.
ಬದಲಿಗದು ಮರ್ತ್ಯನ ಅಂತಃಪ್ರಜ್ಞೆಯ ಅಂತರ್‌ಜಾಗೃತಿಗಿರುವ ಅಂತರ್ಯಜ್ಞ!
ಯಾಜಮಾನ್ಯವ ವಹಿಸಿದ ಮರ್ತ್ಯವು ತಾ ಜೀವಿಸುವ ಜೀವನವೆಂಬೊಂದು
ಜೀವ ರಸವನೇ
ಹವಿಸ್ಸಾಗಿಸಿ ಪೃಥಿವಿತಲದ ಪ್ರಭೃತಿಯಿಹ ವೈಶ್ವಾನರಾಗ್ನಿಗೆ ಅರ್ಪಿಸುತ
ಪಂಚಾಯತನದೊಳಗಿಹ ಪಂಚ ಪ್ರಾಣಗಳನೇ ಪಂಚಾನ್ನಗಳೆಂದು
ಪ್ರಾಯೋಜಿಸಿರಲು
ಸ್ಮೃತಿ–ಬುದ್ಧಿ–ಕಲ್ಪಕತೆಗಳೆಂಬ ಕಟ್ಟಳೆಗಳ ಕಟ್ಟಡವನು ಕೆಡವಿ ಕೇಂದ್ರದೊಳಿಹ
ಕಾಯವಿದು
ಅಲೋಕಾಕಾಶದೆಡೆ ಆರೋಹಿಪುದು. ಭೌತಿಕಾನ್ನಮಯದ ಬಂಧನದಿಂ
ಭವಿಸುವುದು,
ಪ್ರಾಣದ ಪಂಜರದೊಳಗೆ ಪವಡಿಸಿ ಪ್ರತೀಕ್ಷಿಸುವ ಪಕ್ಷಿಯಾಗದೊಲದು
ಪುರೋಗಾಮಿಸುವುದು,
ಮಾನಸದ ಮಹಾಜ್ಯೋತಿಯೊಳಿಹ ಮಹಾಮಾತೆಯ ಮಡಿಲೇರಿ ಮೆರೆಯುವುದು,
ಆಂತರ್ಯದೊಳಿಹಂತರಾತ್ಮಾಯನದ ಆಲಯದೊಳು ಅಲವತ್ತುಕೊಳದಲೇ
ಅರಳುವುದು,
ಸೋಮಾಬ್ಧಿ ತಟದ ಆನಂದಗಿರಿಯೇರಿ ಗೋಪಾಲ ರೂಪದೊಲದು
ಗೋಚರಿಸುವುದು;
ಯಜ್ಞವೆಂದರದು ತ್ಯಾಗ. ಯಜ್ಞವೆಂದರದು ಯೋಗ. ಅದ ಯಜಿಸುವ
ಯಜ್ಞಕುಂಡದೊಳು ಕುದಿಯಲೀ ವಿಯೋಗ. ಯಜ್ಞದೊಳು
ವೃಷಭಯಜ್ಞ, ಅಶ್ವಯಜ್ಞ, ರುಧಿರಯಜ್ಞ, ಸೋಮಯಜ್ಞ, ಸುಮದಯಜ್ಞ,

ಸುಮನಸದಯಜ್ಞ, ಸುವಿಚಾರದಯಜ್ಞ, ಪಾಪವನು ಪರಿಮಾರ್ಜಿಸುವ
ಪುಣ್ಯಯಜ್ಞವೆಂಬಾದಿ ಯಜ್ಞಗಳಿಹವಾದರೂ ಮನುಲೋಕದಿ
ಮಂತ್ರಮುಗ್ಧಗೊಳಿಸುವ ಮಾಯಕದ ಮೇಲೆ ಮೋಹವಿರದಿಹ,
ಮೃತ್ಯುವನು ಮಣಿಸಲು ಮೃತ್ಯುಯಜ್ಞವೊಂದೇ ಮಾರ್ಗವಿಹುದು. ಅದನೀ
ಕ್ರಮಿಸಿದೊಡೆ ಕೈವಶವಿಹುದೆಲ್ಲ ಕಾರ್ಯ.

ಅನಿಮೇಷರ ಆವರ್ತದಲೇ ಆಸೆಯಿರದಿಹ ಏಕವೇಯಿಹ ಮೃತ್ಯುವವನು
ಸಾವಿನ ಸರದಿಯಲಿ ಸಾಲಾಗಿ ಬರುವ ಶುದ್ಧಾತ್ಮಗಳನು ಕಲಂಕಿತರೆಂದು
ಕಡೆಗಣಿಸುವನು.
ಮರಣವಪ್ಪಿದ ಮನುಕುಲತಿಲಕರ ಮಹಾತ್ಮೆಗಳನು ಮನಗಂಡು ಮರ್ತ್ಯಕವರನು
ಮರಳಿಸನು
ದುಃಖದುಮ್ಮಾನಗಳೆಂಬ ದಳ್ಳುರಿಯಲಿ ದಹಿಸಿ ಧೂಳಾದ ದುಕೂಲರನು
ದಯಪಾಲಿಸನು
ಭಾವನೆಗಳೆಂಬ ಬಣ್ಣವಿಡಿದ ಬಾಂದಳದಿ ಭವಿಸಿದ್ದ ಭವ್ಯಾತ್ಮರಿಗೆ ಭರವಸೆಯನಿಡನು
ಕಾಮದ ಕರ್ಷಣದಿ ಬದುಕನೆ ಬರ್ಷಣಗೊಳಿಸಿಹ ರೂಪಸಿಯರನು ರಂಭಿಸನು.
ಲಾಲಸೆಗೊಳಿಸುವ ಲಾವಣ್ಯಗಳೆಲ್ಲವನೂ ಲಯದೆಡೆಗೆ ಸರಿಸುವಾ ಸಾವಿಗಿಲ್ಲಾವ
ಸ್ವಾಪೇಕ್ಷೆ. ಸುಭೀಕ್ಷೆ.
ಮೃತ್ಯುವಿನ ಮನವೊಲಿಸಿ ಮನದನ್ನೆಯನು ಮರಳಿಸಲು ಮಣಿಯದವನು
ನಿನ್ನೆದುರು ನಿರೂಪವೊಂದನಿಟ್ಟು ನಿರೂಪಿಸುವನು. ನಿನ್ನಕ್ಷಿಯನು ಲಕ್ಷಿಸುತ
ನಿರೀಕ್ಷಿಸುವನು.
ನೀ ಬದುಕಿದ ಬದುಕಿನೊಂದು ಬದುವನೇ ಬೇಕೆಂದವನು ಬಯಸುವನು.
ಭಯವಿಡಿಸುವನು.
ಇನ್ನುಳಿದ ಆಯುವಿನ ಅರ್ಹತೆಯನು ಅಡವಿಡುವಂತವನು ಅಣಕಿಸುವನು.
ಇಲ್ಲದಿರೆ
ಸಾವಿನ ಸೆರೆಮನೆಯಿಂದ ಸದ್ದಿಲ್ಲದೆ ಸರಿದು ಸುರಲೋಕವನು ಸೇರೆಂದು
ಸಾರುವನು.
ತಾಪಸರ ತೌರಿನಿಂದೇರಿ ಬಂದ ರುರುವೇ, ಜನ್ಮದಾರಭ್ಯ ಜತನದಿಂ ಜೀವಿಸಿದ
ಮರ್ತ್ಯ ಬದುಕಿನ ಮಹಾತ್ಮ್ಯೆಯನೊಮ್ಮೆ ಮನನಗೈದಿಲ್ಲಿಂದ ಮುಂಬರಿಯುವುದೇ
ಮೇಲು.

ಮುಂಜಾವು–ಮುಸ್ಸಂಜೆಗಳ ಮಧ್ಯದಲಿ ಮನೆಯೂಟವನುಂಡು ಮನದಣಿಯೆ
ಮಕ್ಕಳಾಟವನಾಡಿದ್ದೆ.
ಸೂರ್ಯೋದಯ–ಸೂರ್ಯಾಸ್ತಗಳ ಸರದಿ ಸಾಲಿನಲಿ ಸರಿದ ಸುಂದರವಿಹ
ಸಾವಿರ
ಸಿಹಿ ದಿನಗಳ ಸವಿದು ಸುಖದ ಸುಪ್ಪತ್ತಿಗೆಯಲಿ ಸುರಕ್ಷಿತನಾಗಿದ್ದೆ.
ಹಬ್ಬಿದ ಹರಿದ್ವರ್ಣದ ವನೋದ್ಯಾನದಿ ಪ್ರಾಣಮಯದ ಪ್ರಭೃತಿ ಪ್ರೇರಿಸಿದ
ಸ್ವರ್ಗಶೀತಲದ
ನರುಗಂಪನೆಸೆವ ತಂಬೆಲರ ತುಂಬುತೆದೆಯಲಿ ತನ್ಮಯಿತನಾಗಿದ್ದೆ.
ದಿನಗೂಲಿಗನಾಗಿ ದುಡಿವ ದಿನಕರನವ ಹಗಲುಹೊತ್ತನ್ನೇ ಹೊನ್ನಮುತ್ತನಾಗಿಸಿಹನು.
ನೆತ್ತಿಮೇಲೆ ನೂರೊಂದು ನಕ್ಷತ್ರಗಳ ಬಿತ್ತಿಹನು, ಕತ್ತಲಲ್ಲೂ ಕೋಟಿ ಕನಸುಗಳ
ಕೆತ್ತಿಹನು.
ಪ್ರಕಾಶಮಯವಾಗಿ–ಪ್ರತ್ಯರ್ಥತಮವಾಗಿ ಪ್ರಪಂಚವನೇ ಪರಿವರ್ತಿಸುತಿಹ
ಪ್ರತಿ ಹಗಲು–ಪ್ರತಿ ಇರುಳುಗಳ ಪುನರಾವರ್ತನೆಯಲಿ ಪೂರ್ಣಾನಂದವನೇ
ಪಡೆದಿದ್ದೆ.
ದಿನವಿಡೀ ದುಡಿದು ದಣಿದ ದೇಹವನು ದೈವೀ ಲೋಕದೆಡೆಗೆತ್ತಿ ನೋವಿನ
ನೊಗವಿಳಿಸುವ
ನಿದ್ರಾಂಗನೆಯ ತೋಳತೊಟ್ಟಿಲಲಿ ತೂಗುತ್ತ ಸ್ವಪ್ನ ಸಾಗರದಂಚಿನ ಸುವರ್ಣ
ಸೌಧವನೇ ಸೇರಿದ್ದೆ.
ಮಧುರ, ಲವಣ, ಆಮ್ಲ, ತಿಕ್ತ, ಕಟು, ಕಾಷಾಯಗಳೆಂಬಾರು ಷಡ್ರಸಗಳ
ಸವಿದು ಸುಪ್ರೀತನಿದ್ದೆ.
ಬದುಕಿನಲಿ ಬಂದುಹೋದ ಬಂಧುಬಾಂಧವಾದಿ ಭವ್ಯಾತ್ಮರ ಬಾಂಧವ್ಯದಿ
ಬಂಧಿತನಾಗಿದ್ದೆ.
ಇಂತು ಸುಲಕ್ಷಣವಿಹ ಸುರಕ್ಷಿತವಿಹ ಸುದಿನಗಳಲಿ ಸುಖದಿಂದಿರದೆ ಸಾವಿನಲಿ
ಸರಿದ
ಸುಕನ್ಯೆಗಾಗಿ ಸುಖಾಸುಮ್ಮನೇಕೆ ಸವೆಯುತಿಹೆ? ಅರ್ಧಾಯುವನೇಕೆ ಅಡವಿಡುವೆ?
ನಿನದಲ್ಲದ ನಿಶೆಗಾಗೇಕೆ ಬರುವ ಉಷೆಯನು ಉಚ್ಚಾಟಿಸುವೆ?
ಕಾಲನ ಕಾರಾಗೃಹದಿ ಕಾಲಿಗೆ ಕಡಗವ ಕಟ್ಟಿ ಕೂಡಿ ಹಾಕಿದ ಕನ್ಯೆಯನ ಕಂಡು
ಕಣ್ಣೀರಾಗುವದೇಕೆ?

ಓ ರುರು, ಹಸಿದವನ ಹೊಟ್ಟೆಗೆ ಹವಿಸ್ಸಾಗಲೆಂದು ಲಕ್ಷ್ಯಾವಧಿಯ ಭಕ್ಷಗಳಿರುವಾಗ
ಅಕ್ಷಿಯಿಂದವುಗಳನು ಲಕ್ಷಿಸುವದರ ಬದಲು ಶಿಕ್ಷಿಸಿಕೊಳುವದೇಕೆ?
ನಿನ್ನ ಪ್ರೇಮದ ಪ್ರಾಂಗಣದಲಿ ಪ್ರಿಯದ ಪೌರ್ಣಿಮೆಯನೇ ಬೆಳಗಿಸಲಿಲ್ಲಿ
ಕೋಟಿಕಂಗಳಿರುವಾಗ ಕಣ್ಮುಚ್ಚಿ ಕುಳಿತುಕೊಳ್ಳುವದೇಕೆ?"
ಮಡಿದ ಮಂದಾರಕ್ಕಾಗಿ ಮರುಗಿದ್ದ ಮಾನವನ ಮನವನರಿಯಲು ಮದನನಾಡಿದ
ಮಾತುಗಳವು ಮುಗಿದು ಮಂಕಾಗಿರಲು, ಮರ್ತ್ಯನ ಮನೋವತಿಯ
ಮೇರುಗಿರಿಯನು
ಮುತ್ತಿದ ಮೇಘಮಾಲೆಗಳ ಮಡುವೊಡೆದು ಮಳೆಯಿಳಿದು ಮಹಾಪೂರದಲಿ
ಮನೆಮಾರುಗಳನೆಲ್ಲ ಮುಳುಗಿಸುವಂದದಿ ಮುಂಬರಿದು ಮಾರ್ನುಡಿದನವ
ಮಾನವ.
"ನಿರಂಜನದ ನೇಮವನು ನಿರ್ವೀರ್ಯಗೊಳಿಸಲೆಂದು ನೋಂತಿಲ್ಲಿ ನಿಷ್ಪ್ರಯೋಜಕದ
ನುಡಿಗಳನಾಡಿ ನಿಷ್ಫಲನಾಗಿರುವ ನಿಯಮಪಾಲಕನೇ,
ಕರುಣೆಯಿರದೀ ಕಾಡಿನಲಿ ಕಾಲನ ಕೈಗೊಂಬೆಯಾಗಿ ಕಾಯವೆಲ್ಲ ಕರಗಿ
ಕಣ್ಣುಕಾಣದ ಕುರುಡನಾಗಿ
ವೃದ್ಧಾಪ್ಯವು ಬಂದಾವರಿಸಿರಲು ಬದುಕಿನ ಭವ್ಯತೆಯನು ಬಯಸುವ
ಭಾವನೆಯೆಲ್ಲ ಬತ್ತಿ ಬರಡಾಗುವುದು.
ಜಿಹ್ವೆಯನು ಜಿನುಗಿಸುವ ಜೀವನವೆಂಬೊಂದು ಜೇನುಗೂಡು ಕೊನೆಗೊಮ್ಮೆ
ಕತ್ತಲಲಿ ಕೈಬಿಟ್ಟು ಕಾಣೆಯಾಗಿರಲು, ಸ್ವಂತ ಮನೆಯಲೇ ಪರಕೀಯ
ಭಾವನೆಯನದು ಬಿತ್ತುವುದು. ಮೊಗಮೋರೆಗಳಿಗೆಲ್ಲ ಮಣ್ಣುಮಸಿಗಳನದು
ಮೆತ್ತುವುದು.
ಇಂತಿರಲು ಸಾಯುವರೆಗೆ ಬಲವಿರದೆ ಬಾಂಧವ್ಯವಿರದೆ ಬರಿದೆ ಬದುಕಿರುವ
ಬದುಕಿಗಾವ ಬೆಲೆ? ಅದಕ್ಕಿನಾವ ನೆಲೆ?
ಪ್ರಾಯದಲಿ ಪ್ರಮುಖನಾಗಿದ್ದು, ಕಾಯವಿಳಿದು ಕಡೆಗಣಿತನಾದೊಬ್ಬ
ಮುದುಕನೋರ್ವ
ಬದುಕಿನ ಭೂತಕಾಲದಲಿ ಭವಿಸಿ, ತಪ್ಪಿನರಿವಾಗಿ ತನ್ನ ತಾ ಶಪಿಸಿ,
ಸಾವಿಗೆಂದೆದುರು ನೋಡುತಿರೆ,
ದೀರ್ಘಾಯುವಿನ ಪ್ರಾರ್ಥನೆಗೆಲ್ಲಿದೆ ಪುರುಷಾರ್ಥ? ಅದಕಿಲ್ಲಿದೆ ಪ್ರಾಯಶ್ಚಿತ.
ನಕ್ಷತ್ರ ಮಂಡಲಗಳಿಗೆ ಮಿತ್ರನಾಗಿ ಮಹಾತ್ಮನೆನಿಸಿಹ ಮದನನೇ,

ಕಾಮನೆಂದು ಕರೆಸಿಕೊಂಡು ಪ್ರೇಮವನೇಕೆ ಪರಿಮಾರ್ಜನಗೊಳಿಸಲೆಂದಿಲ್ಲಿ
ಪಡಿನುಡಿಯುತಿಹೆ?
ಅರ್ಥವಿರದ ಆಯುಷ್ಯವನ್ನೆಲ್ಲ ಅಡಗಿಸಿಟ್ಟು ಅಂತ್ಯದಲಿ ಅಂತಕನಿಗೊಪ್ಪಿಸಿ
ಅನಾಥನಾಗುವ ಬದಲು
ವ್ಯರ್ಥವಿಹ ವಾಯಿದೆಯನು ವಿನೀತನಾಗಿ ವಿನಿಯೋಗಿಸಿ ವಂದಿತನಾಗುವನೇ ವಿವೇಕಿ.
ಪ್ರೇಮದ ಪ್ರಾಂಗಣದಲಿ ಪ್ರೇಮಿಗಳೀರ್ವರೂ ಪ್ರತ್ಯೇಕರಲ್ಲ. ಅವನ ಸುಖದಲವಳು
ನಕ್ಕು,
ಅವಳ ದುಃಖದಲವನು ಅತ್ತು, ಅವನ ಶಾಖದಲವಳು ಬೆವೆತು,
ಅವಳ ಶೈತ್ಯದಲವನು ತಣಿದು ತನ್ಮಯಿಸುವ ತಾದಾತ್ಮ್ಯವೇ ಪ್ರೇಮ.
ಪ್ರಿಯಂವದೆಯು ಅಂದು ಸಾವಿನ ಸಂಕೋಲೆಯಲಿ ಸೆರೆಯಾಗಿ ಸರಿದು
ಹೋದ ಸಮಯದಲಿ
ಕವಿದ ಶೂನ್ಯತೆಯ ಮಹಾಂಧಕಾರವನು ತೊಡೆದು ಚ್ಯುತಿಯಿರದ ಹಗಲನ್ನೇ
ಹರಿಸುವೆನು.
ಅರ್ಧಾಯುವನು ಅರ್ಧಾಂಗಿಗಿತ್ತು ಅಮೃತ ಕ್ಷಣಗಳನೇ ಕೆಳಗಿಲ್ಲಿ ಕರೆಸುವೆನು.
ಅಪ್ರಕೇತದ ಮಹಾವಾಪಿಕೂಪಿಗಳೊಳಗೆ ಬಂಧಿತವಾಗಿ ಬಳಲಿ ಬೆಂಡಾಗಿರುವ
ದುಂಡುಮೊಗದ ದೇಹದ್ಯೆಸಿರಿಯನು ದುಂದಾಗಿಸದೆ ಕುಂದಾಗಿಸದೆ ಕರೆತರುವೆನು.
ಕಾರ್ಮೋಡವು ಕವಿದು ಕತ್ತಲೆಯಾದ ಧರೆಗೆ ಬೆಳ್ಮಿಂಚನು ಬೆಳಗಿಸಿ ಬಣ್ಣಿಸುವೆನು.
ಪ್ರೇಮದ ಪೌರ್ಣಮಿಯಲಿ ಬೆಳದಿಂಗಳನಿತ್ತು ಪೃಥ್ವಿಯನು
ಪ್ರಕಾಶಮಯಗೊಳಿಸುವೆನು.
ಉಪಪ್ರಜ್ಞೆ–ಅಪ್ರಜ್ಞೆಯೆಂಬೆರಡು ಕರಿನೀರ ಕಾಲುವೆಯಿಂದೆದ್ದು, ಭೌತಿಕದಲಿ
ಭ್ರಮರದಂತಾಗಿ ಭವಿಸಿ,
ಪ್ರೇಮಕೆಂದು ಪಂಚ ಪ್ರಾಣಗಳನೇ ಪಣಕಿಟ್ಟು, ಮನದ ಸ್ವರ್ಗವನೇರಿ
ಸುಖಿಸುವೆವು,
ನನ್ನಾತ್ಮದಲಿ ಅವಳಾತ್ಮವನು ಬೆರೆಸಿ ಬದುಕುವೆವು, ಕೊನೆಗೊಮ್ಮೆ ಪ್ರಕಾಶದ
ಪುತ್ಥಳಿಗಳಾಗಿ
ಆನಂದವನೇ ಅನುಭವಿಸುವೆವು."
ಪ್ರೇಮದೇವತೆಯ ಪ್ರಿಯವದನವದು ಪ್ರಫುಲ್ಲಿತವಾಗಿತ್ತು, ಪ್ರೇಮವೇ
ಪರಮಾರ್ಥವೆಂದು ಪ್ರಮಾಣೀತವಾಗಿತ್ತು.

ಸುವರ್ಣ ದೇಹದ ಸುಂದರಾಂಗನು ಸರ್ವ ದೇವತೆಗಳ ಸಮರ್ಥನೆಯಿದೆನ್ನುತ
ಸಾರಿದನು,
"ಪ್ರಿಯೆಗಾಗಿ ಪ್ರಾಣವನೇ ಪಣಕಿಡಲೆಂದು ಪ್ರೇರಿತನಾದ ಓ ಯುವಪ್ರೇಮಿಯೇ,
ನಿನ್ನ ಸಾಧನೆಗೆ ಸಾಧನವಾಗಲೆಂದು ಪ್ರೇಮ ಪುಷ್ಪವೊಂದನ್ನು ನೀಡುತಿರುವೆನು.
ನೀನಡೆವ ಹಾದಿಗೆ ದಾರಿ ಬೆಳಕನೀವ ಈ ಪುಷ್ಪವನು ಹಿಡಿದು ವೈತರಣಿಯ
ಮಹಾಬಿಲದೆಡೆಗೆಚರಿಸು
ಕರಾಳವಿಹ ಕಗ್ಗತ್ತಲವಿಹ ಸಲಿಲದೊಳಗಿಂದ ಶುದ್ಧವಿಹ ಗಂಗಾದ್ವಾರದೆಡೆಗಿದು
ನಿಮ್ಮನು ನಡೆಸುವುದು.
ಕ್ರುದ್ಧ ಸಾಗರದಿಂದ ಶುದ್ಧಸ ಜಲದೆಡೆಗೆ ಕಾಲಿಡುವ ಮುನ್ನ ಪ್ರಕ್ಷುಬ್ಧವಿಹ ಸಾಗರಕ್ಕೊಮ್ಮೆ
ಕೇಳುವಂತೆ ಜೋರಾಗಿ ಕರೆದು ವಿನಂತಿಸು.
ಮೃತ್ಯುವಿನ ಮಹಾಮನೆಗಿರುವ ಮುಂದಿನ ಮಾರ್ಗವದಲ್ಲಿ ದೃಗ್ಗೋಚರವಿಹುದು."
ಕೈ ನೀಡಿ ಕಾಮದೇವನಿತ್ತ ಕುಸುಮವನು ಕೊಂಡನವ ರುರು.
ಪುಷ್ಪದ ಪ್ರತಿದಳಗಳು ಭಾವನೆಯೆಂಬ ಭಯಂಕರವಿಹ ಉದ್ರೇಕತೆಯವನ
ಉನ್ಮಾದಿಸುತಿರಲು.
ದೇಂಟನಿಡಿದ ಬೆರಳುಗಳಲಿ ಅರಳುವ ಸುಮವದು ಅರ್ಧ ಬೆಂಕಿಯಲಿ ಉಸಿರಿಡುತ್ತ,
ಇನ್ನರ್ಧ ಶಾಂತಿಯಲಿ ಸಂತವಿಸುತ್ತ ಸೂಕ್ಷ್ಮದಿ ಕಂಪಿಸುತಿತ್ತು.
ಸುಮದ ಸುಂದರತೆಗೆ ಸಮ್ಮೋಹಿತನಾಗಿ ಸುಪ್ರೀತನಿಹ ರುರುವು ಕಾಮನನು
ಕಾಣಲೆಂದು ತಲೆಯೆತ್ತಿದನು.
ಪ್ರೇಮದ ಪುನರ್ಮಿಲನದ ಪೂರ್ಣಜ್ಞಾನವನಿತ್ತ ಪ್ರೇಮ ದೇವತೆಯು
ಹರಿದ್ವರ್ಣದ ಹಿನ್ನೆಲೆಯಲಿ ಕರಗಿ ಕಾಣೆಯಾಗಿ, ವೃಕ್ಷವು ಮಾತ್ರ ಪಾರ್ಥಿವವಿಹ
ಪ್ರತಿಮೆಯಂತೆ
ಊರ್ಧ್ವಗಮನದಿ ಮೇಲೆತ್ತಿಹ ಶಾಖೆಯಲಿ ಸುಂದರಾಂಗನು ಸೇರಿದ
ಸ್ವರ್ಗದೆಡೆ ದಿಟ್ಟಿಸುತ ನಿಂತಿತ್ತು.
ತಾ ಕಂಡುಂಡ ಅದ್ಭುತದ ಕಾಣ್ಕೆಗೆ ಕೈಯಲಿಹ ಕುಸುಮವದು ಸಾಕ್ಷಿಯಾಗಿತ್ತು
ಕಾಲವು ಕ್ರಮಿಸಿ ಬೆಳಕಿರದ ಬುವಿಯ ಮೇಲೆ ರಜನಿರಕ್ಕಸಿಯ ಪ್ರಭುತ್ವವದು
ಸ್ಥಾಪಿಸುತ ಸ್ಥಾಯಿಯಾಗಿತ್ತು.

(ಸಶೇಷ)

# ವಾರ್ತಾಪತ್ರ

## ಶ್ರೀ ಅರವಿಂದ ಸಂಕೀರ್ಣ

ಜೆ.ಪಿ.ನಗರ 1ನೇ ಹಂತ, ಬೆಂಗಳೂರು

ದಿನಾಂಕ 19/03/2024 ರಂದು ಬೆಳಿಗ್ಗೆ 11.00 ಗಂಟೆಗೆ ಬೆಂಗಳೂರಿನ ಕನಕಪುರ ಮುಖ್ಯರಸ್ತೆ, ಏಡುಮಡು (ಗಂಟಕನದೊಡ್ಡಿ) ಇಲ್ಲಿ ಶ್ರೀ ಅರವಿಂದೋ ಸಂಕೀರ್ಣ ಟ್ರಸ್ಟ್ ವತಿಯಿಂದ ಸುಮಾರು 3 ಎಕರೆ ವಿಶಾಲವಾದ ಜಾಗದಲ್ಲಿ ನೂತನವಾಗಿ ಸ್ಥಾಪನೆ ಮಾಡಿರುವ "ದಿ ಆರೋ ಸ್ಕೂಲ್" ಆವರಣದಲ್ಲಿ ಶ್ರೀ ಅರಬಿಂದೋ ಸೊಸೈಟಿ, ಪಾಂಡಿಚೇರಿ ಅಧ್ಯಕ್ಷರಾದ ಶ್ರೀಯುತ ಪ್ರದೀಪ್ ನಾರಂಗ್ ರವರು ಶ್ರೀ ಅರವಿಂದರ ಪುತ್ತಳಿಕೆಯನ್ನು ಅನಾವರಣಗೊಳಿಸಿದರು. ಕಾರ್ಯಕ್ರಮದಲ್ಲಿ ಟ್ರಸ್ಟ್‌ನ ಕಾರ್ಯನಿರ್ವಾಹಕ ಧರ್ಮದರ್ಶಿ ಡಾ॥ ಅಜಿತ್ ಸಬ್ನೀಸ್ ಮತ್ತು ಆಡಳಿತ ಮಂಡಳಿಯ ಧರ್ಮದರ್ಶಿಗಳು ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಬೆಂಗಳೂರಿನಲ್ಲಿರುವ ಶ್ರೀ ಅರಬಿಂದೋ ಸೊಸೈಟಿಯ ಅರೋಮಿರಾ ಇಂಟರ್‌ನ್ಯಾಷನಲ್ ಶಾಲೆ, ಜೆ.ಪಿ. ನಗರದ ಮೀರಾಂಬಿಕಾ ಸ್ಕೂಲ್ ಫಾರ್ ನ್ಯೂ ಏಜ್ ಮತ್ತು ದಿ ಆರೋ ಸ್ಕೂಲ್ ಗಳಿಂದ ಪ್ರಾಂಶುಪಾಲರುಗಳು, ಶಿಕ್ಷಕ ಮತ್ತು ಶಿಕ್ಷಕೇತರ ವೃಂದದವರು ಹಾಗೂ ಶ್ರೀ ಅರವಿಂದರ ಸ್ವಾಧ್ಯಾಯ ಕೇಂದ್ರದ ಸದಸ್ಯರು ಉತ್ಸಾಹದಿಂದ ಭಾಗವಹಿಸಿದ್ದರು. ಕಾರ್ಯಕ್ರಮ ಮುಗಿದ ನಂತರ ಪ್ರಸಾದ ವಿತರಣೆ ಮಾಡಲಾಯಿತು.

ದಿನಾಂಕ 29ನೇ ಮಾರ್ಚ್ 2024ರ ಶುಕ್ರವಾರ ಶ್ರೀ ಅರವಿಂದೋ ಸಂಕೀರ್ಣ ಟ್ರಸ್ಟ್ ವತಿಯಿಂದ ಶ್ರೀಮಾತೆಯವರು ಪಾಂಡಿಚೇರಿಗೆ ಮೊಟ್ಟಮೊದಲ ಆಗಮನದ ದಿನವನ್ನಾಗಿ ಆಚರಿಸಲಾಯಿತು. ಬೆಳಿಗ್ಗೆ 7.30 ರಿಂದ 7.50 ರವರೆಗೆ ಸಾಮೂಹಿಕ ಧ್ಯಾನ ಏರ್ಪಡಿಸಲಾಗಿತ್ತು. ತತ್ಸಬಂಧ ಸಾಯಂಕಾಲ 5.00 ರಿಂದ 6.00 ಗಂಟೆಯವರಗೆ "THE ONE WHOM WE ADORE AS THE MOTHER" ಎಂಬ ವಿಷಯದ ಬಗ್ಗೆ ವೀಡಿಯೋ ಪ್ರದರ್ಶನವನ್ನು ಏರ್ಪಡಿಸಲಾಯಿತು. ಉಪನ್ಯಾಸ ಕಾರ್ಯಕ್ರಮದಲ್ಲಿ ಅನೇಕ ಗುರು–ಬಂಧುಗಳು ಮತ್ತು ಶ್ರೀಮಾತಾರವಿಂದರ ಭಕ್ತರು ಭಾಗವಹಿಸಿದ್ದರು. ಜೂಮ್ ಹಾಗೂ ಯೂಟ್ಯೂಬ್ ಮುಖಾಂತರ ಆಸಕ್ತರು ಭಾಗವಹಿಸಿದ್ದರು.

## ಸಂತಾಪ ಸೂಚನೆ

ಡಾ॥ ಗುರುಲಿಂಗ ಕಾಪಸೆರವರು ದಿನಾಂಕ 27–03–2024 ಬೆಳಗಿನ ಜಾವ ಶರೀರ ತ್ಯಜಿಸಿದ ವಾರ್ತೆ ತಿಳಿದು ಕರ್ನಾಟಕ ಶ್ರೀಮಾತಾರವಿಂದರ ಭಕ್ತವೃಂದಕ್ಕೆ ಅತೀವ ದುಃಖವಾಯಿತು. ಡಾ॥ ಕಾಪಸೆರವರು ಶ್ರೀಮಾತಾರವಿಂದರ ಅನುಯಾಯಿಗಳು, ಹಿರಿಯ ಸಾಧಕರು, ಖ್ಯಾತ ಕನ್ನಡ ಸಾಹಿತಿಗಳು ಮತ್ತು ವಿದ್ವಾಂಸರು. ಶ್ರೀಯುತರು ಶ್ರೀ ಅರಬಿಂದೋ ಸೊಸೈಟಿಯಿಂದ ಪ್ರಕಟವಾಗುವ **'ಅಖಿಲ ಭಾರತ ಪತ್ರಿಕೆ'** ಕನ್ನಡ ಮಾಸಿಕ ಇದರ ಪರಿಶೀಲನಾ ಸಮಿತಿ ಅಧ್ಯಕ್ಷರಾಗಿ ತಮ್ಮ ಜೀವಿತದ ಕೊನೆಯವರೆಗೂ ಸೇವೆ ಸಲ್ಲಿಸಿರುತ್ತಾರೆ. ಡಾ॥ ಕಾಪಸೆರವರು ಪುದುಚೇರಿ ಶ್ರೀ ಅರವಿಂದೋ ಸೊಸೈಟಿ ಜೊತೆ ಹಲವು ದಶಕಗಳಿಂದ ನಿಕಟ ಸಂಪರ್ಕ ಹೊಂದಿದ್ದರು. ಹಾಗೆಯೇ ಧಾರವಾಡ ಶ್ರೀ ಅರವಿಂದೋ ಸೊಸೈಟಿ ಶಾಖೆ ಪ್ರಾರಂಭವಾಗಲು ಪ್ರೋತ್ಸಾಹಕ ಮತ್ತು ಪೋಷಕರಾಗಿ ಶಾಖೆ ಅಭಿವೃದ್ಧಿ ಹೊಂದಲು ಪ್ರಮುಖ ಪಾತ್ರ ವಹಿಸಿದ್ದರು.

ಡಾ॥ ಕಾಪಸೆರವರು ತಮ್ಮ ಕೊನೆ ಉಸಿರಿರುವವರೆಗೂ ಶ್ರೀಮಾತಾರವಿಂದರ ತತ್ತ್ವ ಸಿದ್ಧಾಂತ ಪ್ರಚಾರದಲ್ಲಿ ತೊಡಗಿಸಿಕೊಂಡು, ಶ್ರೀ ಅರವಿಂದರ ಹಲವು ಕೃತಿಗಳನ್ನು ಕನ್ನಡಕ್ಕೆ ಭಾಷಾಂತರಗೊಳಿಸಿ ಶ್ಲಾಘನೀಯ ಸೇವೆ ಸಲ್ಲಿಸಿರುತ್ತಾರೆ.

ಇವರ ಅಗಲಿಕೆಯಿಂದ ಕನ್ನಡ ಸಾಹಿತ್ಯ ಲೋಕಕ್ಕೆ ತುಂಬಲಾರದ ನಷ್ಟವಾಗಿರುತ್ತದೆ. ಶ್ರೀಮಾತಾರವಿಂದರು ಇವರ ಆತ್ಮಕ್ಕೆ ಶಾಂತಿ ನೀಡಲೆಂದು ಹಾಗೂ ಇವರ ಅಗಲಿಕೆಯ ನೋವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬದವರಿಗೆ ಕರುಣಿಸಲೆಂದು ಶ್ರೀ ಅರವಿಂದೋ ಸೊಸೈಟಿ ರಾಜ್ಯ ಸಮಿತಿ ಕರ್ನಾಟಕ, ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ ಆಡಳಿತ ಮಂಡಳಿಯ ಪರವಾಗಿ ಹಾಗೂ ವೈಯಕ್ತಿಕವಾಗಿ ನಾನು ಪ್ರಾರ್ಥಿಸಿಕೊಳ್ಳುತ್ತೇನೆ.

**ಡಾ॥ ಅಜಿತ್ ಸಬ್ನೀಸ್**
ಅಧ್ಯಕ್ಷರು

## ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್
## ಪ್ರಕಟವಾಗಿರುವ ಪುಸ್ತಕಗಳ ಪಟ್ಟಿ

| ಕ್ರಮ ಸಂಖ್ಯೆ | ಕೃತಿ ಹೆಸರು |
|---|---|
| 1 | ಸಮಗ್ರ ಶಿಕ್ಷಣ |
| 2 | ಶ್ರೀ ಅರವಿಂದರು ದಿವ್ಯ ಜೀವನ |
| 3 | ಶ್ರೀ ಅರವಿಂದರು ಭಾರತೀಯ ಧರ್ಮ ಪರಂಪರೆ ಮತ್ತು ಭಗವಾನ್ ಶ್ರೀ ಅರವಿಂದರ ದರ್ಶನ |
| 4 | ಶ್ರೀ ಮಾತಾರವಿಂದರ ಪೂರ್ಣಯೋಗ |
| 5 | ಪ್ರಾರ್ಥನಾ ಪದ್ಯಗಳು |
| 6 | ರವಿ ಬೆಳಗಿದ ಪಥ (ಶ್ರೀಮಾತೆಯವರ ವಚನವೇದ ಸಂಕಲನ) |
| 7 | ನವ್ಹೆಂಬರ್ 24, 1926 ಅಧಿಮಾನಸ ಪ್ರಜ್ಞೆಯ ಅವರೋಹಣ ಶ್ರೀ ಅರವಿಂದರ ಹಾಗೂ ಶ್ರೀಮಾತೆಯವರ ದೃಷ್ಟಿಯಲ್ಲಿ ಸಿದ್ಧಿದಿನದ ಮಹತ್ವ |
| 8 | ಶ್ರೀ ಅರವಿಂದರು (ಒಂದು ಸಂಕ್ಷಿಪ್ತ ಪರಿಚಯ) |
| 9 | ಶ್ರೀಮಾತೆ (ಒಂದು ಸಂಕ್ಷಿಪ್ತ ಪರಿಚಯ) |
| 10 | ಕೇಂಬ್ರಿಜ್‌ನ ಸುಗಂಧಿತ ಪುಷ್ಪ (ಮಾನವತೆಗೆ ಶ್ರೀ ಅರವಿಂದರ ಕೊಡುಗೆ) |
| 11 | ಅತಿಮಾನಸ ಹಾಗೂ ಹೊಸ ಜಗತ್ತೊಂದರ ಜನನ (ಶ್ರೀಮಾತೆ ಹಾಗೂ ಶ್ರೀ ಅರವಿಂದರ ಬರಹಗಳ ಸಂಕಲನ) |
| 12 | ಭಾರತ ಮತ್ತು ಭರತಮಾತೆಯ ದೈವನಿಯತಿ |
| 13 | ಆದರ್ಶ ಶಿಕ್ಷಕ |
| 14 | ಪೂರ್ಣಯೋಗ |
| 15 | ಶ್ರೀ ಅರವಿಂದರ ಧರ್ಮ ಹಾಗೂ ರಾಷ್ಟ್ರೀಯತ್ವ |
| 16 | ಶ್ರೀಮಾತೆಗೆ 72 (ಬಾಹತ್ತರ) ಕವನಗಳ ಅರ್ಪಣೆ |

| ಕ್ರಮ ಸಂಖ್ಯೆ | ಕೃತಿ ಹೆಸರು |
|---|---|
| 17 | ಶಿಕ್ಷಣ ಕುರಿತು ಶ್ರೀಮಾತಾರವಿಂದರ ವಿಚಾರಧಾರೆ |
| 18 | ಶ್ರೀ ಅರವಿಂದ ದರ್ಶನ |
| 19 | ಶ್ರೀಮಾತೆ ಭಾರತಮಾತೆ |
| 20 | ದುರ್ಗಾಸ್ತೋತ್ರ |
| 21 | ಚಿಂತನಗಳು ಮತ್ತು ಸೂಕ್ತಿಗಳು |
| 22 | ಯೋಗ ಸಮನ್ವಯ |
| 23 | ಶ್ರೀ ಅರವಿಂದಾಶ್ರಮ |
| 24 | ಪ್ರಸೂತಿ ಪೂರ್ವದ ಶಿಕ್ಷಣ ಶೋಭಾಯಮಾನ ಭವಿಷ್ಯತ್ತಿನೆಡೆಗೆ |
| 25 | ಮಗುವನ್ನು ಪೋಷಿಸುವುದು ಹೇಗೆ? |
| 26 | ಸುಪ್ರಮಾನಸದ ಶ್ರೀಮಾತೆ |
| 27 | ಸಾವಿತ್ರಿ (ಶ್ರೀ ಅರವಿಂದರ ಮಹಾಕಾವ್ಯದ ಸಾರಾಂಶ) |
| 28 | ಪೂರ್ಣಯೋಗದ ಪಥದಲ್ಲಿ |
| 29 | ಬೆಳಕಿನ ಕಿರಣಗಳು |
| 30 | 24th November 1926 (Descent of Overmental Consciousness) |
| 31 | ಶ್ರೀ ಅರವಿಂದರ ಸಾವಿತ್ರಿ |
| 32 | ಮಾನುಷ ಚಕ್ರ |
| 33 | ಚೈತ್ಯ ಪುರುಷ |
| 34 | ಭವಾನಿ ಭಾರತಿ |
| 35 | ಶಿಕ್ಷಣ |
| 36 | ಯೋಗಾರಂಭ |



ಫೋಟೋ: ಇಮೇಜಿಂಗ್ ಸಾವಿತ್ರಿ

ಆದರೀಗಿದೋ ಅರೆಬಿರೆದ ಕುಂದ–ಕುಟ್ಮಲದ ಅವಳ ಹೃದಯ
ವಿಕಸಗೊಂಡಿತ್ತು ತೆರೆತೆರೆದುಕೊಂಡು ಜೊತೆಗಿದೋ ದರ್ಶ–ಸಮಯ

**– ಪುಟ್ಟು ಕುಲಕರ್ಣಿ**

**(ಶ್ರೀ ಅರವಿಂದರ 'ಸಾವಿತ್ರಿ'; ದಳ 7 ರೇಣು 5 ಪುಟ 527)**

**RNI No. 22511/1971**
No. of Pages **64 + 4 (Cov. Page)**
KAR Reg No.: RNP/KA/BGS/368/2024-2026
Licensed to post without prepayment License No.PMG BG/WPP-409/2024-2026
Kannada Monthly Magazine
Date of Publication on 7th of Every Month
Permitted to Post 10th of Every Month. Reg. Valid till: 31-12-2026
Licensed to Post at BG PSO, Mysuru Road, Bengaluru - 560 026



ಫೋಟೊ: ಇಮೇಜಿಂಗ್ ಸಾವಿತ್ರಿ

ಪರಿಪಕ್ವ ಮೂರ್ತಿ ತಾನದುವು ಇದೋ ಪರಿಪೂರ್ಣ ಛಂದದಲ್ಲಿ

**– ಪುಟ್ಟು ಕುಲಕರ್ಣಿ**

**(ಶ್ರೀ ಅರವಿಂದರ 'ಸಾವಿತ್ರಿ'; ದಳ 2 ರೇಣು 2 ಪುಟ 115)**

Ed. Sri Puttu Parashuram Kulkarni, Pub: Dr. Ajit Sabnis
Ptd. by M/s. Seshaasai e-forms Pvt. Ltd.,
on behalf of Sri Aurobindo Complex Trust, 'Sri Aurobindo Marg',
J.P. Nagar I Phase, Bengaluru - 560 078. Phone: 080 - 22449882.